ಬುಧವಾರ, ಜೂನ್ 7, 2023 | ₹ 7.00

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬಿಬಿಎಂಪಿ: ಒಂದೆರಡು ದಿನದಲ್ಲಿ ಕಾಂಗ್ರೆಸ್ ಸಮಿತಿಯಿಂದ ವರದಿ ಸಲ್ಲಿಕೆ

243 ವಾರ್ಡ್‌ಗಳಿಗೆ ಚುನಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವಾರ್ಡ್ ಮರು ವಿಂಗಡಣೆಗೆ ಮತ್ತೆ ಕೈಹಾಕದೆ, 243 ವಾರ್ಡ್‌ಗಳಿಗೆ ಚುನಾವಣೆ ನಡೆಸಬೇಕು. ಮೀಸಲಾತಿಯನ್ನು ಪ್ರಕಟಿಸಿ, ಈ ವರ್ಷದ ಅಂತ್ಯಕ್ಕೆ ಚುನಾವಣೆ ಪ್ರಕ್ರಿಯೆ ಮುಗಿಸಬೇಕು ಎಂದು ಕೆಪಿಸಿಸಿ ರಚಿಸಿದ್ದ 'ಬಿಬಿಎಂಪಿ ಚುನಾವಣೆ ಪೂರ್ವ ತಯಾರಿ ಸಮಿತಿ' ಅಭಿಪ್ರಾಯಪಟ್ಟಿದೆ.

'ಬಿಬಿಎಂಪಿ ವಾರ್ಡ್ ಮರು ವಿಂಗಡಣೆಯಲ್ಲಿ ಬಿಜೆಪಿಯ ದುರುದ್ದೇಶ ಹಾಗೂ ರಾಜಕೀಯ ಲಾಭ ಕಾಣುತ್ತಿದೆ. ಹೀಗಾಗಿ ಹೊಸ ವಾರ್ಡ್‌ಗಳ ಬದಲಿಗೆ ಹಿಂದಿನಂತೆ 198 ವಾರ್ಡ್‌ಗಳಿಗೆ ಚುನಾವಣೆ ನಡೆಸಬೇಕು ಎಂದು ಸಮಿತಿಯಲ್ಲಿ ಚರ್ಚೆಯಾಯಿತು. ಆದರೆ, ಕಾಯ್ದೆ ತಿದ್ದುಪಡಿ ಮಾಡಿ 243 ವಾರ್ಡ್‌ಗಳ ಅಧಿಸೂಚನೆ ಹೊರಡಿಸಿರುವುದರಿಂದ ಅದನ್ನು ಬದಲಿಸುವುದು ಸರಿಯಲ್ಲ ಎಂಬ ಅಭಿಪ್ರಾಯವೂ ಸದಸ್ಯರಿಂದ ವ್ಯಕ್ತವಾಯಿತು' ಎಂದು

ಮುಖ್ಯಾಂಶಗಳು

- ಮೊದಲು ಚುನಾವಣೆ, ನಂತರ ವಿಭಾಗಿಸುವ ಚಿಂತನೆ ಮಾಡೋಣ
- ಕೂಡಲೇ ವಾರ್ಡ್‌ಗಳಿಗೆ ಮೀಸಲು ಪ್ರಕಟಿಸಿ
- ಕಾಂಗ್ರೆಸ್ ಪರವಾದ ಅಲೆಯ ಲಾಭ ಪಡೆಯಲು ಸಲಹೆ

ಮೂಲಗಳು ತಿಳಿಸಿವೆ.

'ಬಿಬಿಎಂಪಿಯನ್ನು ಎರಡು ಅಥವಾ ಮೂರು ಭಾಗವನ್ನಾಗಿಸುವ ಬಗ್ಗೆ ಸಮಿತಿಯಲ್ಲಿ ಚರ್ಚೆಯಾದರೂ, ಅದು ಸದ್ಯಕ್ಕೆ ಸಾಧ್ಯವಿಲ್ಲ. ಚುನಾವಣೆಯನ್ನು ಮಾಡೋಣ, ನಂತರ ಬೇಕಾದರೆ ಭಾಗ–ವಿಭಾಗ ಮಾಡಿಕೊಳ್ಳಬಹುದು. ಇದೀಗ ಕಾಂಗ್ರೆಸ್ ಪರ ಅಲೆ ಇರುವುದರಿಂದ ಕೂಡಲೇ ಚುನಾವಣೆ ನಡೆಸಿ, ಅಧಿಕಾರ ಪಡೆಯಬಹುದು ಎಂದು ಸದಸ್ಯರು ಸಲಹೆ ನೀಡಿದರು' ಎನ್ನಲಾಗಿದೆ.

ವಿಧಾನಸಭೆ ಚುನಾವಣೆಯಲ್ಲಿ ಅಭೂತಪೂರ್ವ ಜಯಗಳಿಸಿದ ನಂತರ, ಬಿಬಿಎಂಪಿ ಚುನಾವಣೆಯನ್ನೂ ನಡೆಸಿ ಅಧಿಕಾರದ ಚುಕ್ಕಾಣಿ ಹಿಡಿಯಬೇಕು ಎಂಬ ಉದ್ದೇಶದಿಂದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಸಚಿವ ರಾಮಲಿಂಗಾರೆಡ್ಡಿ ಅಧ್ಯಕ್ಷತೆಯಲ್ಲಿ 10 ಸದಸ್ಯರ 'ಬಿಬಿಎಂಪಿ ಚುನಾವಣೆ ಪೂರ್ವ ತಯಾರಿ ಸಮಿತಿ'ಯನ್ನು ಮೇ 24ರಂದು ರಚಿಸಿದ್ದರು. 15 ದಿನದಲ್ಲಿ ವರದಿ ನೀಡುವಂತೆ ಸೂಚಿಸಿದ್ದರು.



ಒಂದೆರಡು ದಿನಗಳಲ್ಲಿ ವರದಿಯನ್ನು ಕೆಪಿಸಿಸಿ ಅಧ್ಯಕ್ಷರಿಗೆ ಸಲ್ಲಿಸುವುದಾಗಿ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ. '243 ವಾರ್ಡ್‌ಗಳ ರಚನೆಯಾಗಿದೆ. ಅವುಗಳ ಮೀಸಲಾತಿಯನ್ನು ನ್ಯಾಯಾಲಯ ರದ್ದುಪಡಿಸಿರುವುದರಿಂದ, ಹೊಸದಾಗಿ ಮೀಸಲಾತಿ ಪ್ರಕಟಿಸಬೇಕು. ಆದಷ್ಟು ಬೇಗ ಚುನಾವಣೆ ನಡೆಸುವುದು ಸೂಕ್ತ ಎಂಬ ಅಭಿಪ್ರಾಯ ಸಮಿತಿ ಸಭೆಯಲ್ಲಿ ವ್ಯಕ್ತವಾಗಿದೆ' ಎಂದರು.

'ಬಿಬಿಎಂಪಿ ಚುನಾವಣೆಗೆ ಸರ್ಕಾರ ಸಿದ್ಧವಿದೆ. ಅದಕ್ಕೆ ಅಗತ್ಯವಾದ ಮೀಸಲಾತಿ ಹೊರಡಿಸಿ, ಸುಪ್ರೀಂ ಕೋರ್ಟ್‌ಗೆ ಸಲ್ಲಿಸಬೇಕು. ಚುನಾವಣೆ ಪ್ರಕ್ರಿಯೆ ಕೂಡಲೇ ಆರಂಭಿಸಬೇಕು ಎಂಬ ಸಲಹೆ ನೀಡಲಾಗಿದೆ' ಎಂದರು.

ಕಾಂಗ್ರೆಸ್‌ನ 'ಬಿಬಿಎಂಪಿ ಚುನಾವಣೆ ಪೂರ್ವ ತಯಾರಿ ಸಮಿತಿ'ಯಲ್ಲಿ ಸಚಿವರಾದ ದಿನೇಶ್ ಗುಂಡೂರಾವ್, ಕೃಷ್ಣಬೈರೇಗೌಡ, ಬೈರತಿ ಸುರೇಶ್, ಸಂಸದ ಡಿ.ಕೆ. ಸುರೇಶ್, ಶಾಸಕರಾದ ಎನ್.ಎ. ಹ್ಯಾರೀಸ್, ಪ್ರಿಯಕೃಷ್ಣ, ಎ.ಎಸ್. ಪೊನ್ನಣ್ಣ, ಮಾಜಿ ಶಾಸಕ ರಮೇಶ್ ಬಾಬು, ಮಾಜಿ ಮೇಯರ್ ಪದ್ಮಾವತಿ ಸದಸ್ಯರಾಗಿದ್ದಾರೆ. ಮಾಜಿ ಮೇಯರ್ ಪಿ.ಆರ್. ರಮೇಶ್ ಸಂಚಾಲಕರಾಗಿದ್ದಾರೆ.



ಸಸಿ ವಿತರಣೆ ಸುದಯಾ ಫೌಂಡೇಶನ್‌ನಿಂದ ವಿಶ್ವ ಪರಿಸರ ದಿನದ ಅಂಗವಾಗಿ ನಗರದ ಶಂಕರಮಠದ ವೃತ್ತದಲ್ಲಿ ಸಾರ್ವಜನಿಕರಿಗೆ ಸಸಿ ವಿತರಣೆ ಮಾಡಲಾಯಿತು. ಡಾ.ದಿವ್ಯಾ ರಂಗೇನಹಳ್ಳಿ ಅವರ ನೇತೃತ್ವದಲ್ಲಿ 500 ಪೇರಲೆ ಹಾಗೂ 500 ಸೀತಾಫಲ ಹಣ್ಣಿನ ಗಿಡಗಳು, 250 ಹೂವಿನ ಗಿಡಗಳನ್ನು ವಿತರಿಸಲಾಯಿತು

10 ವರ್ಷ ಮೀರಿದ ಆಧಾರ್ ನವೀಕರಣ

ಬೆಂಗಳೂರು: ಆಧಾರ್ ನವೀಕರಿಸುವ ಜಾಗೃತಿ ಜಾಥಾ ಅಭಿಯಾನಕ್ಕೆ ಬೆಂಗಳೂರು ನಗರ ಜಿಲ್ಲಾಧಿಕಾರಿ ಕೆ. ದಯಾನಂದ ಮಂಗಳವಾರ ಚಾಲನೆ ನೀಡಿದರು.

ಬೆಂಗಳೂರು ಜಿಲ್ಲಾಡಳಿತ ಮತ್ತು ಭಾರತದ ವಿಶಿಷ್ಟ ಗುರುತು ಪ್ರಾಧಿಕಾರ (ಯುಐಡಿಎಐ) ಸಹಯೋಗದಲ್ಲಿ ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ 10 ವರ್ಷ ಮೀರಿದ ಆಧಾರ ಚೀಟಿಗಳನ್ನು ಜೂನ್ 14ರವರೆಗೂ ಉಚಿತವಾಗಿ ಆನ್‌ಲೈನ್ ಮೂಲಕ ದಾಖಲೆಗಳನ್ನು ಅಪ್‌ಲೋಡ್ ಮಾಡಿ ನವೀಕರಿಸಬಹುದಾಗಿದೆ. ಈ ಬಗ್ಗೆ ನಗರದಲ್ಲಿ 30 ದಿನಗಳವರೆಗೆ ಎರಡು ವಾಹನಗಳ ಮೂಲಕ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಗಿದೆ.

'ಜಲಮಂಡಳಿ ಆರ್ಥಿಕ ಸ್ಥಿತಿ ಚಿಂತಾಜನಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಲಮಂಡಳಿಯ ಆರ್ಥಿಕ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. ವೇತನ ಹಾಗೂ ವಿದ್ಯುತ್ ಬಿಲ್ ಪಾವತಿಸಲೂ ಹಣವಿಲ್ಲ. ಸಿಬ್ಬಂದಿ ಬಹಳಷ್ಟು ಸಮಸ್ಯೆ ಎದುರಿಸುತ್ತಿದ್ದಾರೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'2014ರಿಂದ ಇಲ್ಲಿಯವರೆಗೂ ನೀರಿನ ದರ ಪರಿಷ್ಕರಣೆಯಾಗಿಲ್ಲ. ಮಂಡಳಿ ತನ್ನ ಆದಾಯ ಮೂಲವನ್ನು ವೃದ್ಧಿಸಿಕೊಳ್ಳಬೇಕಿದೆ. ಅಕ್ರಮ ಸಂಪರ್ಕವನ್ನು ಶೇ 48ರಿಂದ ಶೇ 28ಕ್ಕೆ ಇಳಿಸಿ ನೀರಿನ ಸೋರಿಕೆಯನ್ನು ಇಳಿಸಿದ್ದಾರೆ. ಆದರೂ, ಅನಧಿಕೃತ ನೀರಿನ ಸಂಪರ್ಕ ಹೆಚ್ಚಾಗಿವೆ. ಅದರ ಬಗ್ಗೆ ಪತ್ತೆ ಹಚ್ಚಿ, ವರದಿ ನೀಡಲು ಸೂಚಿಸಲಾಗಿದೆ' ಎಂದು ಮಂಡಳಿಯ ಅಧಿಕಾರಿಗಳೊಂದಿಗಿನ ಸಭೆಯ ನಂತರ ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

'ಮಂಡಳಿಗೆ ವಿದ್ಯುತ್ ದರದಲ್ಲಿ ರಿಯಾಯಿತಿ ಇದ್ದರೂ ₹104 ಕೋಟಿ ಮೊತ್ತದ ಬಿಲ್ ಬರುತ್ತದೆ. ಅದರಲ್ಲೂ ₹90 ಕೋಟಿಯಿಂದ ₹95 ಕೋಟಿ ಪಾವತಿಸುವಂತಾಗಿದೆ. ಹೀಗಾಗಿ, ಮಂಡಳಿ ಹೆಚ್ಚು ಸಂಪನ್ಮೂಲ ಕ್ರೋಡೀಕರಿಸಿಕೊಳ್ಳಬೇಕು. ಇಲ್ಲದಿದ್ದರೆ ಉಳಿಗಾಲವಿಲ್ಲ' ಎಂದರು.

'ನಗರದ ಎಲ್ಲ ಭಾಗಗಳಲ್ಲಿಯೂ ಶುದ್ಧವಾದ ನೀರನ್ನೇ ಪೂರೈಸಬೇಕು. ಎಲ್ಲೆಲ್ಲಿ ಸಮಸ್ಯೆ ಇದೆಯೋ ಅಲ್ಲೆಲ್ಲ ನೀರಿನ ಪರೀಕ್ಷೆ ನಡೆಸಿ ಕ್ರಮ ಕೈಗೊಳ್ಳಲಾಗುತ್ತದೆ. ಹೊರವಲಯದ 110 ಹಳ್ಳಿಗಳಿಗೆ ನೀರು ಹಾಗೂ ಒಳಚರಂಡಿ ವ್ಯವಸ್ಥೆ ಕಾಮಗಾರಿ ಪೂರ್ಣಗೊಳಿಸಿ ಸಂಪರ್ಕ ಕಲ್ಪಿಸಬೇಕು. ಕಾವೇರಿ 5ನೇ ಹಂತದ ಯೋಜನೆಯಿಂದ ವರ್ಷಾಂತ್ಯದೊಳಗೆ ನೀರು ಪೂರೈಕೆಯಾಗುವಂತೆ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ' ಎಂದು ಮಾಹಿತಿ ನೀಡಿದರು.

'ಬಿಬಿಎಂಪಿಯಿಂದ ಮಂಡಳಿಗೆ ಬರಬೇಕಾದ ಹಣ ಬಂದಿಲ್ಲ ಎಂಬುದನ್ನು ಅಧಿಕಾರಿಗಳು ತಿಳಿಸಿದರೆ ಈ ಬಗ್ಗೆ ಗಮನಹರಿಸಲಾಗುತ್ತದೆ. ನೀರಿನ ದರ ಏರಿಕೆಗೆ ಸಂಬಂಧಿಸಿದಂತೆ ಮುಂದಿನ ಸಭೆಗಳಲ್ಲಿ ಚರ್ಚಿಸಲಾಗುತ್ತದೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಯುವಿಸಿಇಗೆ ಅಗತ್ಯ ಅನುದಾನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವೇಶ್ವರಯ್ಯ ಸ್ವಾಯತ್ತ ಎಂಜಿನಿಯರಿಂಗ್ ವಿಶ್ವವಿದ್ಯಾಲಯಕ್ಕೆ (ಯುವಿಸಿಇ) ಮುಂದಿನ ಬಜೆಟ್‌ನಲ್ಲಿ ಅಗತ್ಯ ಅನುದಾನ ಒದಗಿಸಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಭರವಸೆ ನೀಡಿದರು.

ಬೆಂಗಳೂರಿನಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ವಿಶ್ವವಿದ್ಯಾಲಯದ ಅಧಿಕಾರಿಗಳು ಮತ್ತು ಸಿಬ್ಬಂದಿ ಜತೆಗಿನ ಸಭೆಯಲ್ಲಿ ಅವರು ಮಾತನಾಡಿದರು.

ನಿವೃತ್ತಿ ಸೌಲಭ್ಯಗಳಲ್ಲಿ ಯಾವುದೇ ಸಮಸ್ಯೆ ಇರುವುದಿಲ್ಲ. ಹಲವರು ಬೆಂಗಳೂರು ವಿಶ್ವವಿದ್ಯಾಲಯದಲ್ಲೇ ಕೆಲಸ ಮಾಡಲು ಅವಕಾಶ ನೀಡುವಂತೆ ಕೋರಿದ್ದಾರೆ. ಆದರೆ, ನೂತನ ವಿಶ್ವವಿದ್ಯಾಲಯಗಳ ಕಾಯ್ದೆ ಪ್ರಕಾರ ಇದಕ್ಕೆ ಅವಕಾಶ ಇಲ್ಲ ಎಂದರು.

'ವಿಶ್ವವಿದ್ಯಾಲಯ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜನ್ನು ಐಐಟಿ ಮಾದರಿಯಲ್ಲಿ ಅಭಿವೃದ್ಧಿಪಡಿಸಲು ಹಿಂದಿನ ಸರ್ಕಾರ ಸ್ವಾಯತ್ತ ವಿಶ್ವವಿದ್ಯಾಲಯದ ಸ್ಥಾನ ನೀಡಿತ್ತು. ಆದರೆ, ಅಗತ್ಯ ಅನುದಾನವಿಲ್ಲದೇ ಕೆಲಸಗಳು ವೇಗ ಪಡೆದಿಲ್ಲ. ಸಂಸ್ಥೆಯನ್ನು ಉನ್ನತೀಕರಿಸಲು ₹ 250 ಕೋಟಿ ನೀಡಬೇಕು' ಎಂದು ಸಿಬ್ಬಂದಿ ಕೋರಿದರು. ಇದೇ ವೇಳೆ ಶುಲ್ಕ ಹೆಚ್ಚಳ ಬೇಡಿಕೆಗೆ ಪ್ರತಿಕ್ರಿಯಿಸಿದ ಸಚಿವರು, ಇಲಾಖೆಗೆ ಪ್ರಸ್ತಾವ ಸಲ್ಲಿಸುವಂತೆ ಸೂಚಿಸಿದರು.

'ಮತೀಯ ಗೂಂಡಾಗಿರಿಗೆ ಅವಕಾಶ ಇಲ್ಲ'

ಬೆಂಗಳೂರು: 'ಮತೀಯ ಗೂಂಡಾಗಿರಿಗೆ ರಾಜ್ಯದಲ್ಲಿ ಅವಕಾಶ ಇಲ್ಲ. ಈ ಬಗ್ಗೆ ಎಲ್ಲಾ ಪೊಲೀಸ್ ಅಧಿಕಾರಿಗಳಿಗೆ ಖಡಕ್ ಎಚ್ಚರಿಕೆ ನೀಡಿದ್ದೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕರ್ನಾಟಕ ರಾಜ್ಯ ಹಜ್ ಸಮಿತಿ ಆಯೋಜಿಸಿದ್ದ 2023ನೇ ಸಾಲಿನ ಹಜ್ ವಿಮಾನ ಯಾತ್ರೆಗೆ ಮಂಗಳವಾರ ಚಾಲನೆ ನೀಡಿ ಅವರು ಮಾತನಾಡಿದರು.

ಬಿಎಂಆರ್‌ಸಿಎಲ್ ಸಭೆಯ ಬಳಿಕ ಡಿ.ಕೆ. ಶಿವಕುಮಾರ್ ಮಾಹಿತಿ

ಮೆಟ್ರೊಗೆ ₹ 6 ಕೋಟಿ ಲಾಭ

ಪ್ರಜಾವಾಣಿ ವಾರ್ತೆ



ಬೆಂಗಳೂರು: ದೆಹಲಿ ಮೆಟ್ರೊ ನಂತರ ಎರಡನೇ ಅತಿ ದೊಡ್ಡದಾಗಿರುವ ಬೆಂಗಳೂರಿನ ನಮ್ಮ ಮೆಟ್ರೊ ತಿಂಗಳಿಗೆ ₹ 48 ಕೋಟಿ ಆದಾಯ ಗಳಿಸಿದರೂ ₹ 42 ಕೋಟಿ ನಿರ್ವಹಣೆಗೆ ವೆಚ್ಚವಾಗುತ್ತಿದೆ. ₹ 6 ಕೋಟಿಯಷ್ಟೇ ಲಾಭ ಬರುತ್ತಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಬಿಎಂಆರ್‌ಸಿಎಲ್ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಮೆಟ್ರೊ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಬಳಿಕ ಸುದ್ದಿಗಾರರಿಗೆ ಈ ಮಾಹಿತಿ ನೀಡಿದರು.

‘ಪ್ರಯಾಣಿಕರ ಹೊರತಾಗಿ ಇತರೆ ಮೂಲಗಳಿಂದ ಆದಾಯ ಗಳಿಸುವ ಕುರಿತು ಕೆಲವು ಸಲಹೆ ನೀಡಿದ್ದೇನೆ. ಜಾಹೀರಾತು ಬಗ್ಗೆ ಇರುವ ನಿರ್ಬಂಧವನ್ನು ಸರಿಪಡಿಸಲಾಗುವುದು. ಇದರ ಜತೆಗೆ ಅವರಿಗೆ ಸಬ್ಸಿಡಿಯಲ್ಲಿ ಸಿಗುತ್ತಿರುವ ವಿದ್ಯುತ್ ಅನ್ನು ಮತ್ತಷ್ಟು ಕಡಿಮೆ ದರಕ್ಕೆ ಪಡೆಯಲು ಸಲಹೆ ನೀಡಿದ್ದೇನೆ’ ಎಂದು ವಿವರಿಸಿದರು.

2ನೇ ಹಂತದ ಯೋಜನೆಗೆ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಅವರು ಒಪ್ಪಿಗೆ ನೀಡಬೇಕಿದೆ. 3ನೇ ಹಂತದ ಯೋಜನೆಯಲ್ಲಿ ಸರ್ಜಾಪುರದಿಂದ ಹೆಬ್ಬಾಳದವರೆಗೆ ಸಮೀಕ್ಷೆ ನಡೆಯುತ್ತಿದೆ. ಅಲ್ಲಿಂದ ಮುಂದೆ ಎಲ್ಲೆಲ್ಲಿ ವಿಸ್ತರಣೆ ಮಾಡಬಹುದು ಎಂಬುದೂ ಸಮೀಕ್ಷೆಯಾಗಬೇಕು ಎಂದರು.

ಬೈಯ್ಯಪ್ಪನಹಳ್ಳಿ– ಕೆ.ಆರ್. ಪುರಂ ಮೆಟ್ರೊ ಜುಲೈ ವೇಳೆಗೆ, ಕೆಂಗೇರಿ ಹಾಗೂ ಚಲಘಟ್ಟ ಸೆಪ್ಟೆಂಬರ್‌ಗೆ, ನಾಗಸಂದ್ರ ಹಾಗೂ ಮಾದವಾರ ಅಕ್ಟೋಬರ್ ವೇಳೆಗೆ ಸಿದ್ಧವಾಗಬಹುದು. ನೂತನ ಮಾರ್ಗ ಬೊಮ್ಮಸಂದ್ರದಿಂದ ಆರ್.ವಿ ರಸ್ತೆ ಮಾರ್ಗ ನವೆಂಬರ್ ವೇಳೆಗೆ ಆಗಲಿದೆ. ವಿಮಾನ ನಿಲ್ದಾಣಕ್ಕೆ ಮೆಟ್ರೊ ಸಂಪರ್ಕ ಮಾರ್ಗ 2026ರ ಜೂನ್ ವೇಳೆಗೆ ಪೂರ್ಣಗೊಳ್ಳಲಿದೆ. ಸಿಲ್ಕ್ ಬೋರ್ಡ್‌ನಿಂದ ಕೆ.ಆರ್ ಪುರಂವರೆಗಿನ ಮಾರ್ಗ ಕೂಡ ಇದೇ ಸಮಯದಲ್ಲಿ ಪೂರ್ಣಗೊಳ್ಳಲಿದೆ ಎಂದು ಮಾಹಿತಿ ನೀಡಿದರು.

ಇಂದಿನ ಚರ್ಚೆಯಲ್ಲಿ ಅಧಿಕಾರಿಗಳು ಕಾಮಗಾರಿ ವಿಳಂಬದ ಬಗೆಗಿನ ಸಮಸ್ಯೆ ಹೇಳಿಕೊಂಡಿದ್ದಾರೆ. ರಾತ್ರಿ ವೇಳೆ ಈ ಕಾಮಗಾರಿಗಳು ನಡೆಯುತ್ತಿವೆ. ಹಗಲಲ್ಲಿ ಸಿಮೆಂಟ್, ಸಾಮಗ್ರಿ ತಲುಪಿಸಲು ಆಗುತ್ತಿಲ್ಲ. ಈ ವಿಚಾರವಾಗಿ ಪೊಲೀಸರ ಜತೆ ಸಭೆ ಮಾಡಲಾಗುವುದು ಎಂದು ತಿಳಿಸಿದರು.

ವಾರ್ತಾ ಇಲಾಖೆಗೆ ನಿಂಬಾಳ್ಕರ್ ಆಯುಕ್ತ

ಬೆಂಗಳೂರು: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರನ್ನಾಗಿ ಐಪಿಎಸ್ ಅಧಿಕಾರಿ ಹೇಮಂತ್ ನಿಂಬಾಳ್ಕರ್ ಅವರನ್ನು ನೇಮಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಮಂಗಳವಾರ ಆದೇಶ ಹೊರಡಿಸಿದೆ.



ಹೇಮಂತ್ ನಿಂಬಾಳ್ಕರ್

1998ರ ಗುಂಪಿನ ಐಪಿಎಸ್ ಅಧಿಕಾರಿಯಾದ ನಿಂಬಾಳ್ಕರ್, 2021ರ ಜನವರಿ 13ರಿಂದ ಶೈಕ್ಷಣಿಕ ರಜೆಯಲ್ಲಿದ್ದರು. ಅವರ ರಜೆಯ ಅವಧಿ ಇನ್ನೂ ಇದೆ. ಶೈಕ್ಷಣಿಕ ರಜೆಯನ್ನು ರದ್ದುಗೊಳಿಸಿ ವಾರ್ತಾ ಇಲಾಖೆ ಆಯುಕ್ತರನ್ನಾಗಿ ನೇಮಕ ಮಾಡಲಾಗಿದೆ.

11 ಐಎಎಸ್ ಅಧಿಕಾರಿಗಳ ವರ್ಗಾವಣೆ: ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳಾದ ಕಪಿಲ್ ಮೋಹನ್, ಎಸ್.ಆರ್. ಉಮಾಶಂಕರ್ ಸೇರಿದಂತೆ 11 ಐಎಎಸ್ ಅಧಿಕಾರಿಗಳನ್ನು ವರ್ಗಾವಣೆಗೊಳಿಸಿ ಮಂಗಳವಾರ ಆದೇಶ ಹೊರಡಿಸಲಾಗಿದೆ.

ವರ್ಗಾವಣೆ ವಿವರ: ಕಪಿಲ್ ಮೋಹನ್– ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಪ್ರವಾಸೋದ್ಯಮ ಇಲಾಖೆ; ಎಸ್.ಆರ್. ಉಮಾಶಂಕರ್ – ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ; ಮಂಜುನಾಥ ಪ್ರಸಾದ್ ಎನ್.– ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ; ವಿ. ಅನ್ಬುಕುಮಾರ್– ಕಾರ್ಯದರ್ಶಿ, ಕೃಷಿ ಇಲಾಖೆ; ಮೋಹನ್ ರಾಜ್ ಕೆ.ಪಿ.– ಕಾರ್ಯದರ್ಶಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ; ಡಾ. ರಿಚರ್ಡ್ ವಿನ್ಸೆಂಟ್ ಡಿಸೋಜ– ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ (ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಗಣಿ).

ಗಿರೀಶ್ ಆರ್.– ನಿರ್ದೇಶಕ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ; ಕರೀಗೌಡ ಎಂ.ಎನ್.– ನಿರ್ದೇಶಕ, ಅಟಲ್ ಜೀ ಜನಸ್ನೇಹಿ ಕೇಂದ್ರ; ವೈ.ಎಸ್. ಪಾಟೀಲ– ಆಯುಕ್ತ, ಕೃಷಿ ಇಲಾಖೆ; ಜಗದೀಶ ಜಿ.– ವ್ಯವಸ್ಥಾಪಕ ನಿರ್ದೇಶಕ, ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ; ಡಾ.ಮಹೇಶ್ ಎಂ.– ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ).

ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಪ್ರತಿಭಟನೆ

‘ಕಿವಿ ಮೇಲೆ ಚೆಂಡು ಹೂವಿಟ್ಟ ಕಾಂಗ್ರೆಸ್’

ಪ್ರಜಾವಾಣಿ ವಾರ್ತೆ



ಬಿಜೆಪಿ ಕಾರ್ಯಕರ್ತರು ಫ್ರೀಡಂ ಪಾರ್ಕ್‌ನಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು

ಬೆಂಗಳೂರು: ಕಾಂಗ್ರೆಸ್ ಸರ್ಕಾರ 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ನೀಡುತ್ತೇವೆ ಎಂದು ಹೇಳುತ್ತಲೇ ವಿದ್ಯುತ್ ದರ ಏರಿಕೆ ಮೂಲಕ ಗ್ರಾಹಕರಿಗೆ ಬರೆ ಹಾಕಿದೆ. ಕೂಡಲೇ ದರ ಏರಿಕೆಯನ್ನು ಹಿಂದಕ್ಕೆ ಪಡೆಯಬೇಕು ಎಂದು ಬಿಜೆಪಿ ಆಗ್ರಹಿಸಿದೆ.

ಕಾಂಗ್ರೆಸ್ ಸರ್ಕಾರದ ವಿರುದ್ಧ ನಗರದ ಫ್ರೀಡಂ ಪಾರ್ಕ್‌ನಲ್ಲಿ ಮಂಗಳವಾರ ಬಿಜೆಪಿಯ ಶಾಸಕರು ಮತ್ತು ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಚುನಾವಣೆ ಸಂದರ್ಭದಲ್ಲಿ 5 ಗ್ಯಾರಂಟಿಗಳ ಕಾರ್ಡ್ ನೀಡುವ ಮೂಲಕ ಎಲ್ಲರಿಗೂ ಉಚಿತ ಎಂದು ಭರ್ಜರಿ ಪ್ರಚಾರ ನಡೆಸಿ ಜನರಿಗೆ ಮರುಳು ಮಾಡಿ ವಿಜಯ ಸಾಧಿಸಿತು. ಆದರೆ, ಈಗ ಎಲ್ಲ ಗ್ಯಾರಂಟಿಗಳಿಗೂ ಒಂದೊಂದೇ ಷರತ್ತುಗಳನ್ನು ವಿಧಿಸುತ್ತಿದೆ. ಇದರಿಂದ ಯಾರು ಕೂಡ ಉಚಿತ ಸೌಲಭ್ಯಗಳನ್ನು ಪಡೆಯದಂತೆ ಮಾಡುತ್ತಿದೆ. ಈ ಸರ್ಕಾರ ನುಡಿದಂತೆ ನಡೆದಿಲ್ಲ ಎಂದು ಬಿಜೆಪಿ ನಾಯಕರು ದೂರಿದರು.

‘ಬಾಡಿಗೆ ಮನೆಯಲ್ಲಿ ವಾಸ ಇರುವವರಿಗೆ ವಿದ್ಯುತ್ ಉಚಿತ ಇಲ್ಲ ಎಂದು ಸರ್ಕಾರದ ಆದೇಶ ಹೇಳುತ್ತದೆ. ಆದರೆ, ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಬಾಡಿಗೆಯವರಿಗೆ ಉಚಿತ ನೀಡುತ್ತೇವೆ ಎನ್ನುತ್ತಾರೆ. ಹಾಗಿದ್ದರೆ ಬಾಡಿಗೆ ಮನೆಯಲ್ಲಿ ಇರುವವರಿಗೂ ಉಚಿತ ನೀಡುತ್ತೇವೆ ಅಂಶವನ್ನು ಆದೇಶದಲ್ಲಿ ಏಕೆ ನಮೂದಿಸಿಲ್ಲ. ಎಲ್ಲವನ್ನೂ ಗೊಂದಲ ಮಾಡಿಟ್ಟು ಯಾರಿಗೂ ಸೌಲಭ್ಯ ಸಿಗದಂತೆ ಮಾಡುವುದೇ ಸರ್ಕಾರದ ಹುನ್ನಾರ’ ಎಂದು ಅವರು ಟೀಕೆ ಮಾಡಿದರು.

ಪ್ರತಿಭಟನೆಯಲ್ಲಿ ಶಾಸಕರಾದ ಡಾ.ಸಿ.ಎನ್. ಅಶ್ವತ್ಥನಾರಾಯಣ, ಎಸ್.ಟಿ. ಸೋಮಶೇಖರ್, ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್ ಮಾತನಾಡಿದರು.

ಶಾಸಕರಾದ ಸಿ.ಕೆ. ರಾಮಮೂರ್ತಿ, ಎಸ್.ಸಿ ಮೋರ್ಚಾ ರಾಜ್ಯ ಅಧ್ಯಕ್ಷ ಛಲವಾದಿ ನಾರಾಯಣಸ್ವಾಮಿ, ವಿಧಾನ ಪರಿಷತ್ ಸದಸ್ಯ ಗೋಪಿನಾಥ ರೆಡ್ಡಿ, ನಗರ ಜಿಲ್ಲಾ ಅಧ್ಯಕ್ಷರಾದ ನಾರಾಯಣ, ಮಂಜುನಾಥ್, ಎನ್.ಆರ್. ರಮೇಶ್, ಪದಾಧಿಕಾರಿಗಳು, ಕಾರ್ಯಕರ್ತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.





ಆಟೊ ಮೇಲೆ ಮರದ ಕೊಂಬೆ ಬಿದ್ದು ಜಖಂಗೊಂಡಿರುವುದು (ಎಡಚಿತ್ರ) ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಬಂದ ಮಳೆಯಲ್ಲಿ ಜನರು ಸಾಗಿದ ದೃಶ್ಯ –ಪ್ರಜಾವಾಣಿ ಚಿತ್ರ

ನಗರದ ಹಲವೆಡೆ ಮಳೆ ● ಇನ್ನೂ ಎರಡು ದಿನ ಮೋಡ ಕವಿದ ವಾತಾವರಣ

ಆಟೊ ಮೇಲೆ ಕೊಂಬೆ ಬಿದ್ದು ಚಾಲಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ಸೇರಿದಂತೆ ಹೊರವಲಯದಲ್ಲಿ ಮಂಗಳವಾರ ಸಂಜೆ ಹಾಗೂ ರಾತ್ರಿ ಜೋರು ಮಳೆಯಾಗಿದೆ.

ವಿಜಯನಗರ, ರಾಜಾಜಿನಗರ, ಮಲ್ಲೇಶ್ವರ, ಹೆಬ್ಬಾಳ, ರಾಜರಾಜೇಶ್ವರಿ ನಗರ, ಸುಂಕದಕಟ್ಟೆ, ನಂದಿನಿಲೇಔಟ್, ಮಹಾಲಕ್ಷ್ಮಿ ಲೇಔಟ್, ಬಸವೇಶ್ವರ ನಗರ, ಎಂ.ಜಿ. ರಸ್ತೆ, ಅಶೋಕ ನಗರ, ಮೈಸೂರು ಬ್ಯಾಂಕ್ ವೃತ್ತ, ಮೆಜೆಸ್ಟಿಕ್ ಸುತ್ತಮುತ್ತ ಮಳೆಯಾಗಿದೆ.

ಬೆಂಗಳೂರು ನಗರದಲ್ಲಿ ಇನ್ನೂ ಎರಡು ದಿನ ಮೋಡ ಕವಿದ ವಾತಾವರಣ ಇರಲಿದೆ. ಸಂಜೆ ಅಥವಾ ರಾತ್ರಿ ವೇಳೆ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಚಾಲಕ ಸಾವು (ಕೆ.ಆರ್. ಪುರ ವರದಿ): ಬೆಂಗಳೂರು ಹೊರವಲಯದ ಆವಲಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಬೊಮ್ಮನಹಳ್ಳಿ ಬಸ್ ನಿಲ್ದಾಣ ಸಮೀಪ ಚಲಿಸುತ್ತಿದ್ದ ಆಟೊದ ಮೇಲೆ ಮರದ ಕೊಂಬೆ ಬಿದ್ದು ಚಾಲಕ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಬಾಬುಸಪಾಳ್ಯದ ಜ್ಯೋತಿನಗರ ನಿವಾಸಿ ವೀರಪ್ಪ (33) ಮೃತಪಟ್ಟವರು.

ವ್ಯಕ್ತಿಯೊಬ್ಬರನ್ನು ಆಟೊದಲ್ಲಿ ಕರೆದೊಯ್ಯಲು ರಾಷ್ಟ್ರೀಯ ಹೆದ್ದಾರಿಯಿಂದ ದೇವನಹಳ್ಳಿಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯಲ್ಲಿ ಚಲಿಸುತ್ತಿದ್ದಾಗ ಈ ಅವಘಡ ಸಂಭವಿಸಿದೆ. ದಿಢೀರ್ ಆಗಿ ಮರದ ಕೊಂಬೆಯು ಅದೇ ಮಾರ್ಗದಲ್ಲಿ ತೆರಳುತ್ತಿದ್ದ ಆಟೊ ಮೇಲೆ ಬಿದ್ದ ಪರಿಣಾಮ ಚಾಲಕ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.



ವೀರಪ್ಪ

ಎಸ್‌.ಆರ್‌. ಬೊಮ್ಮಾಯಿ ಜನ್ಮ ಶತಮಾನೋತ್ಸವದಲ್ಲಿ ಎಸ್‌.ಎಂ. ಕೃಷ್ಣ

ಹಣ ಚೆಲ್ಲಿ ಚುನಾವಣೆ ಗೆಲ್ಲುವುದು ನಿಲ್ಲದಿದ್ದರೆ ಅಪಾಯ

ಪ್ರಜಾವಾಣಿ ವಾರ್ತೆ



ಎಸ್‌.ಆರ್‌. ಬೊಮ್ಮಾಯಿ ಅವರ ಜನ್ಮ ಶತಮಾನೋತ್ಸವ ಆಚರಣೆ ಅಂಗವಾಗಿ ‘ದಿ ರಾಡಿಕಲ್ ಹ್ಯೂಮನಿಸ್ಟ್’ ಕೃತಿ ಬಿಡುಗಡೆ ಮಾಡಲಾಯಿತು. ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ಸಂಪಾದಕಿ ಸಾಂತ್ವನ ಭಟ್ಟಾಚಾರ್ಯ, ಮುಖಂಡರಾದ ಬಿ. ಎಲ್‌. ಶಂಕರ್, ಬಸವರಾಜ್ ಬೊಮ್ಮಾಯಿ, ಬಿ.ಎಸ್‌. ಯಡಿಯೂರಪ್ಪ, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಎಸ್‌.ಎಂ. ಕೃಷ್ಣ, ಆರ್‌.ವಿ. ದೇಶಪಾಂಡೆ, ಪಿ.ಜಿ.ಆರ್‌. ಸಿಂಧ್ಯ ಇದ್ದರು. –ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಹಣ ಹಂಚಿ ಚುನಾವಣೆ ಗೆಲ್ಲುವ ವ್ಯವಸ್ಥೆ ಮುಂದುವರಿದರೆ ಅಪಾಯ. ಇದನ್ನು ನಿಲ್ಲಿಸದೇ ಹೋದರೆ ಪ್ರಜಾಪ್ರಭುತ್ವ ಅರ್ಥವಿಲ್ಲದ ಯಂತ್ರ ಆಗಲಿದೆ’ ಎಂದು ಬಿಜೆಪಿ ನಾಯಕ ಎಸ್.ಎಂ. ಕೃಷ್ಣ ಆತಂಕ ವ್ಯಕ್ತಪಡಿಸಿದರು.

ಎಸ್.ಆರ್. ಬೊಮ್ಮಾಯಿ ಜನ್ಮ ಶತಮಾನೋತ್ಸವ ಆಚರಣೆಯ ಉದ್ಘಾಟನೆ, ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಚುನಾವಣಾ ಆಯೋಗ ಹಣ ಹಂಚುವ ವ್ಯವಸ್ಥೆಯನ್ನು ನಿಯಂತ್ರಿಸಬೇಕು. ಆದರೆ, ಆಯೋಗ ಇದೆ ಎಂಬುದೇ ಗೊತ್ತಾಗುತ್ತಿಲ್ಲ. ಹಿಂದೆ ಟಿ.ಎನ್. ಶೇಷನ್ ಕಾಲದಲ್ಲಿ ಒಮ್ಮೆ ತನ್ನ ಸಾಮರ್ಥ್ಯವನ್ನು ತೋರಿಸಿತ್ತು. ಆನಂತರ ಹಿಂದಕ್ಕೆ ಸರಿದಿದೆ. ಪ್ರಜಾಪ್ರಭುತ್ವ ಎತ್ತ ಸಾಗುತ್ತಿದೆ ಎಂಬ ಬಗ್ಗೆ ನಾಡಿನ ಹಿತಚಿಂತಕರು ಅವಲೋಕನ ಮಾಡಬೇಕು ಎಂದು ಸಲಹೆ ನೀಡಿದರು.

‘ರಾಜ್ಯಪಾಲರು ಆಡಿದ್ದೇ ಆಟ ಆಗಿತ್ತು. ಬೂಟಾ ಸಿಂಗ್ ಶಾಸಕರನ್ನು ಕರೆಸಿ ರಾಜಭವನದಲ್ಲೇ ಮಲಗಿಸಿದ್ದನ್ನೆಲ್ಲ ನೋಡಿದ್ದೇನೆ. ರಾಜ್ಯಪಾಲರ ಕರ್ತವ್ಯ ಏನು? ವ್ಯಾಪ್ತಿ ಎಷ್ಟು ಎಂಬುದು ನಿರ್ಧಾರವಾಗಲು, ಅವರ ಆಟಗಳಿಗೆ ಕಡಿವಾಣ ಹಾಕಲು ಎಸ್. ಆರ್. ಬೊಮ್ಮಾಯಿ ಹೋರಾಡಿದರು. ರಾಜ್ಯಪಾಲರ ವಿರುದ್ಧದ ಪ್ರಕರಣದಲ್ಲಿ ಬೊಮ್ಮಾಯಿಗೆ ಹೈಕೋರ್ಟ್‌ನಲ್ಲಿ ಹಿನ್ನಡೆಯಾದರೂ ಸುಪ್ರೀಂಕೋರ್ಟ್‌ವರೆಗೆ ಹೋಗಿ ಪ್ರಜಾಪ್ರಭುತ್ವದ ಮೌಲ್ಯ ಉಳಿಸಿದರು’ ಎಂದು ನೆನಪು ಮಾಡಿಕೊಂಡರು.

ಬಿಜೆಪಿ ಸಂಸದೀಯ ಮಂಡಳಿಯ ಸದಸ್ಯ ಬಿ.ಎಸ್. ಯಡಿಯೂರಪ್ಪ ಮಾತನಾಡಿ, ‘ತುರ್ತು ಪರಿಸ್ಥಿತಿಯ ನಂತರ ದೇಶದ ಎಲ್ಲೆಡೆ ಕಾಂಗ್ರೆಸ್ ವಿರುದ್ಧದ ಗಾಳಿ ಬೀಸಿದರೂ ಕರ್ನಾಟಕದಲ್ಲಿ ಬದಲಾವಣೆ ಆಗಿರಲಿಲ್ಲ. ಆನಂತರ ಹೋರಾಟದ ಮೂಲಕ ಬದಲಾವಣೆ ತಂದು ಕಾಂಗ್ರೆಸ್ಸೇತರ ಮೊದಲ ಸರ್ಕಾರ ಬರಲು ಎಸ್.ಆರ್. ಬೊಮ್ಮಾಯಿ ಕಾರಣರಾದರು’ ಎಂದು ಅವರು ಸ್ಮರಿಸಿದರು.

ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಶಾಸಕ ಆರ್.ವಿ. ದೇಶಪಾಂಡೆ ಅಧ್ಯಕ್ಷತೆ ವಹಿಸಿದ್ದರು.

> **ಗದ್ಗದಿತರಾದ ಬೊಮ್ಮಾಯಿ**
>
> ಸಮಾರಂಭದಲ್ಲಿ ಶಾಸಕ ಬಸವರಾಜ ಬೊಮ್ಮಾಯಿ ಎರಡು ಬಾರಿ ಗದ್ಗದಿತರಾದರು.
>
> ತಂದೆ ಎಸ್.ಆರ್. ಬೊಮ್ಮಾಯಿ ಅವರು ಶಾಲೆಯ ಮೊದಲ ದಿನ ಕೈ ಹಿಡಿದು ಕರೆದುಕೊಂಡು ಹೋದ ಘಟನೆಯನ್ನು ನೆನೆದು ಒಮ್ಮೆ ಕಣ್ಣೀರಿಟ್ಟರು. ‘ರಾಜಕೀಯದಲ್ಲಿ ತಂದೆಯ ಮಾರ್ಗದರ್ಶನ ಇದೆ. ಆದರೆ, ನನ್ನನ್ನು ಗುರುತಿಸಿ, ಮನೆಗೆ ಬಂದು ಕೈ ಹಿಡಿದು ಕರೆದುಕೊಂಡು ಬಂದು ಅವಕಾಶ ನೀಡಿ ಬೆಳೆಸಿದವರು ಯಡಿಯೂರಪ್ಪನವರು‘ ಎಂದು ಎರಡನೇ ಬಾರಿ ಕಣ್ಣೀರಿಟ್ಟರು.

ಎಸ್.ಆರ್. ಬೊಮ್ಮಾಯಿ ಬದುಕು– ಸಾಧನೆ ಹಾಗೂ ‘ದಿ ರ್‍ಯಾಡಿಕಲ್ ಹ್ಯೂಮನಿಸ್ಟ್’ ಕುರಿತು ಕಾಂಗ್ರೆಸ್ ಮುಖಂಡ ಬಿ.ಎಲ್. ಶಂಕರ್ ಮಾತನಾಡಿದರು.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಮುಖಂಡರಾದ ಪಿ.ಜಿ.ಆರ್. ಸಿಂಧ್ಯ, ಸಿ. ಸೋಮಶೇಖರ್, ಮಹೇಶ್ ಬೊಮ್ಮಾಯಿ, ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ಸಂಪಾದಕಿ ಸಾಂತ್ವನ ಭಟ್ಟಾಚಾರ್ಯ ಅವರು ಇದ್ದರು.

ಬುಧವಾರ, ಜೂನ್ 7, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 157 | ಪುಟ 12
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ ಮೊಟ್ಟೆಗಳ ಉಸಿರಿನಿಂದಲೇ ಅವು ಕೋಳಿಯೋ ಹುಂಜವೋ ಎಂದು ತಿಳಿಯುತ್ತವಂತೆ!



ಆಳ–ಅಗಲ: ಸುರಕ್ಷೆಗೆ ಅಲಕ್ಷ್ಯ, ಅನುದಾನ ಬರ

ಚಿನ್ನಾಭರಣ ಮಾರುಕಟ್ಟೆ ಪ್ರವೇಶಿಸಿದ ಆದಿತ್ಯ ಬಿರ್ಲಾ 8
ರೈಲು ಅಪಘಾತ: ಸಿಬಿಐ ತನಿಖೆ ಶುರು 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
62,792 ▲	18,599 ▲	₹61,800 (ಬೆಂಗಳೂರು) ▼	₹73,700 (ಬೆಂಗಳೂರು) ▼	82.60 ▲

ಎರಡು ದಿನಗಳಲ್ಲಿ ತಿದ್ದುಪಡಿ ಆದೇಶ • ಮುಂದಿನ ವರ್ಷ ಸಂಪೂರ್ಣ ಬದಲಾವಣೆ

‘ಕೇಸರಿ’ ಪಾಠ; ಕೊಕ್ ದಿಟ

ಚರ್ಚೆಯ ಪ್ರಮುಖ ಅಂಶಗಳು

- ವಿವಾದಿತ ಪಾಠಗಳನ್ನು ಕೈಬಿಟ್ಟು ಬೋಧಿಸಲು ತಕ್ಷಣ ಆದೇಶ
- ಕೈಬಿಟ್ಟ ಪಾಠಗಳ ಬದಲಿಗೆ ಬೇರೆ ಪಾಠಗಳ ಸೇರ್ಪಡೆಗೆ ಮತ್ತಷ್ಟು ಚರ್ಚೆ
- ಪಠ್ಯಪರಿಷ್ಕರಣೆಗೆ ಹೊಸ ಸಮಿತಿ
- ವರದಿ ನೀಡಲು ಆರು ತಿಂಗಳ ಅವಕಾಶ
- ಸಮಿತಿ ವರದಿ ಆಧರಿಸಿ ಮುಂದಿನ ಶೈಕ್ಷಣಿಕ ವರ್ಷಕ್ಕೆ ಹೊಸಪಠ್ಯ ರೂಪಿಸಲು ನಿರ್ಧಾರ


ತಕ್ಷಣ ಕೈಬಿಡುವ ಪಾಠದ ಶೀರ್ಷಿಕೆ	ಲೇಖಕ
• ನಿಜವಾದ ಆದರ್ಶ ಪುರುಷ ಯಾರಾಗಬೇಕು?	ಕೇಶವ ಬಲಿರಾಮ್ ಹೆಡಗೇವಾರ್
• ಶುಕನಾಸನ ಉಪದೇಶ	ಬನ್ನಂಜೆ ಗೋವಿಂದಾಚಾರ್ಯ
• ಶ್ರೇಷ್ಠ ಭಾರತೀಯ ಚಿಂತನೆಗಳು	ಶತಾವಧಾನಿ ಆರ್.ಗಣೇಶ್
• ತಾಯಿ ಭಾರತಿಯ ಅಮರಪುತ್ರರು	ಚಕ್ರವರ್ತಿ ಸೂಲಿಬೆಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಸರ್ಕಾರದ ಅವಧಿಯಲ್ಲಿ ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿ ಸೇರಿಸಿದ್ದ ವಿವಾದಿತ ಪಠ್ಯಗಳ ಪೈಕಿ ಕನ್ನಡ ಭಾಷಾ ವಿಷಯದ ನಾಲ್ಕು ಸೇರಿದಂತೆ 15ಕ್ಕೂ ಹೆಚ್ಚು ವಿವಾದಿತ ಪಾಠಗಳನ್ನು ಈ ಶೈಕ್ಷಣಿಕ ವರ್ಷದಿಂದಲೇ ಕೈಬಿಡಲು ಸರ್ಕಾರ ನಿರ್ಧರಿಸಿದೆ. ಮಕ್ಕಳಿಗೆ ಈ ಪಾಠಗಳನ್ನು ಬೋಧಿಸಬಾರದು ಎಂಬ ತಿದ್ದುಪಡಿ ಆದೇಶವನ್ನು ತಕ್ಷಣವೇ ಹೊರಡಿಸಲು ಸರ್ಕಾರ ತೀರ್ಮಾನಿಸಿದೆ.

ಶಿಕ್ಷಣ ತಜ್ಞರು, ಸಾಹಿತಿಗಳ ಜತೆ ಪಠ್ಯಪುಸ್ತಕಗಳ ಕುರಿತು ಮಂಗಳವಾರ ಸುದೀರ್ಘ ಚರ್ಚೆ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ನಾಲ್ಕು ಹಂತಗಳಲ್ಲಿ ಪಠ್ಯ ಪರಿಷ್ಕರಣೆ ಪ್ರಕ್ರಿಯೆ ಪೂರ್ಣಗೊಳಿಸಲು ಒಲವು ತೋರಿದ್ದಾರೆ ಎಂದು ಗೊತ್ತಾಗಿದೆ.

‘ಸಾಮಾಜಿಕ ನ್ಯಾಯ, ಸಂವಿಧಾನಕ್ಕೆ ವಿರುದ್ಧವಾಗಿ ಸನಾತನ ಧರ್ಮ,



ಭಾರತೀಯತೆ ಹೆಸರಲ್ಲಿ ಸಂವಿಧಾನದ ಆಶಯಗಳಿಗೆ ವಿರುದ್ಧವಾದ ಆರ್‌ಎಸ್‌ಎಸ್ ಸಿದ್ಧಾಂತಗಳಿಂದ ಪ್ರೇರಿತವಾದ ಪಾಠಗಳನ್ನು ಸೇರಿಸಲಾಗಿದೆ. ಆರ್‌ಎಸ್‌ಎಸ್ ಸಂಸ್ಥಾಪಕ, ಕಾರ್ಯಕರ್ತರ ಬರಹ ಗಳನ್ನು ಅಳವಡಿಸಲಾಗಿದೆ. ಇಂತಹ ಪಾಠಗಳಿಂದ ಮಕ್ಕಳಲ್ಲಿ ಕೋಮು ಭಾವನೆ ಬೆಳೆಯುವ ಸಾಧ್ಯತೆ ಇದೆ.1ರಿಂದ 10ನೇ ತರಗತಿಯ ಪಠ್ಯಗಳಲ್ಲಿ ಕನ್ನಡ ಹಾಗೂ ಸಮಾಜ ವಿಜ್ಞಾನ ವಿಷಯಗಳಲ್ಲೇ ಇಂತಹ ಬದಲಾವಣೆ ಮಾಡಲಾಗಿದೆ’ ಎಂದು ತಜ್ಞರು ಸಭೆಯ ಗಮನಕ್ಕೆ ತಂದರು.

5ನೇ ಪುಟ ನೋಡಿ

ರಾಜ್ಯ ಶಿಕ್ಷಣ ನೀತಿ ಜಾರಿಗೆ ಸಮಯ ಬೇಕಿದೆ: ಸುಧಾಕರ್

ಬಿಜೆಪಿ ಸರ್ಕಾರದ ಅವಧಿಯಲ್ಲಿ ಜಾರಿಗೊಳಿಸಿದ್ದ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರದ್ದುಪಡಿಸಿ, ರಾಜ್ಯ ಶಿಕ್ಷಣ ನೀತಿ ಜಾರಿಗೊಳಿಸಲು ಕಾಲಾವಕಾಶ ಬೇಕಿದೆ. ತಕ್ಷಣ ನಿರ್ಧಾರ ಸಾಧ್ಯವಿಲ್ಲ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಹೇಳಿದರು.

ಶಿಕ್ಷಣ ತಜ್ಞರು, ಉನ್ನತ ಶಿಕ್ಷಣ ಪರಿಷತ್, ವಿವಿಧ ವಿಶ್ವವಿದ್ಯಾಲಯಗಳ ಕುಲಪತಿಗಳು, ಮಾಜಿ ಕುಲಪತಿಗಳು, ಇಲಾಖೆಯ ಅಧಿಕಾರಿಗಳ ಜತೆ ನಿರಂತರ ಚರ್ಚೆ ನಡೆಸುತ್ತಿದ್ದೇವೆ. ಎಲ್ಲರಿಂದ ಮಾಹಿತಿ ಸಂಗ್ರಹಿಸಿದ ನಂತರ ಸಾಧಕ, ಬಾಧಕ ಕುರಿತು ಚರ್ಚಿಸಲಾಗುವುದು. ಎನ್‌ಇಪಿಯಲ್ಲಿನ ಬೋಧನಾ ವಿಧಾನ, ಮೂಲಸೌಕರ್ಯ ಮತ್ತು ಶಿಕ್ಷಕರ ತರಬೇತಿ ಮತ್ತಿತರ ವಿಷಯಗಳ ಕುರಿತು ಮಾಹಿತಿ ಪಡೆಯಲಾಗುವುದು ಎಂದು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಚುನಾವಣಾ ಸಮಯದಲ್ಲಿ ಕಾಂಗ್ರೆಸ್ ಎನ್‌ಇಪಿ ರದ್ದುಗೊಳಿಸುವ ಭರವಸೆ ನೀಡಿತ್ತು. ಆದರೆ, ಈಗಾಗಲೇ ಶೈಕ್ಷಣಿಕ ವರ್ಷ ಆರಂಭವಾಗಿರುವುದರಿಂದ ವಿದ್ಯಾರ್ಥಿಗಳ ಭವಿಷ್ಯವನ್ನೂ ಪರಿಗಣಿಸಬೇಕಿದೆ. ವಿದ್ಯಾರ್ಥಿಗಳಲ್ಲಿ ಗೊಂದಲ ಮೂಡಿಸಲು ಸರ್ಕಾರ ಬಯಸುವುದಿಲ್ಲ. ಎನ್‌ಇಪಿ ಪರಿಶೀಲನೆಗಾಗಿ ಸಮಿತಿ ರಚಿಸುವ ಕುರಿತೂ ನಿರ್ಧರಿಸಿಲ್ಲ ಎಂದರು. ಶಿಕ್ಷಣ ತಜ್ಞರಾದ ವಿ.ಪಿ.ನಿರಂಜನಾರಾಧ್ಯ, ಸವ್ಯಸಾಚಿ ಚಟರ್ಜಿ, ಪ್ರೊ.ಜಾಫೆಟ್, ಶ್ರೀಪಾದ್ ಭಟ್, ಕಾಲೇಜು ಶಿಕ್ಷಣ ಇಲಾಖೆ ಆಯುಕ್ತ ಪ್ರದೀಪ್ ಅವರ ಜತೆ ಪತ್ರಿಕಾಗೋಷ್ಠಿಗೂ ಮೊದಲು ಚರ್ಚಿಸಿದರು.

ನಿರ್ಣಯ ನಾಳೆ?

ವಿವಾದಿತ ಪಾಠಗಳನ್ನು ಕೈಬಿಡುವ ಬಗ್ಗೆ ಗುರುವಾರ (ಜೂ.8) ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ನಿರ್ಣಯ ಕೈಗೊಳ್ಳುವ ಸಾಧ್ಯತೆ ಇದೆ.

ತಜ್ಞರ ಸಭೆಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಈ ಕುರಿತು ಸುಳಿವು ನೀಡಿದ್ದಾಗಿ ಗೊತ್ತಾಗಿದೆ. ‘ತಜ್ಞರು ನೀಡಿದ ಎಲ್ಲ ಸಲಹೆಗಳೂ ಒಪ್ಪಿತವಾಗಿವೆ. ಬಿಜೆಪಿ ಅವಧಿಯಲ್ಲಿ ರೂಪಿಸಿದ್ದ ಪಠ್ಯ ಪರಿಷ್ಕರಣೆಯನ್ನು ಬದಲಾಯಿಸುವುದು ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯ ವಿಷಯ. ಹಾಗಾಗಿ, ಗುರುವಾರ ಸಭೆಯಲ್ಲಿ ಚರ್ಚಿಸಿದ ಬಳಿಕ ವಿವಾದಿತ ಪಠ್ಯಗಳನ್ನು ಕೈಬಿಡಲು ಆದೇಶ ಹೊರಡಿಸುವಂತೆ ಸೂಚಿಸಲಾಗುವುದು ಎಂದು ಸಿದ್ದರಾಮಯ್ಯನವರು ತಿಳಿಸಿದರು’ ಎಂದು ಮೂಲಗಳು ಹೇಳಿವೆ.

ಎಂಎಸ್‌ಐಎಲ್ ಟೆಂಡರ್, ಎಪಿಪಿ ನೇಮಕ ತನಿಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದಿರುವ ಸಹಾಯಕ ಸರ್ಕಾರಿ ಅಭಿಯೋಜಕರು ಮತ್ತು ಸರ್ಕಾರಿ ವಕೀಲರ ನೇಮಕಾತಿ ಹಾಗೂ ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್‌ನ (ಎಂಎಸ್‌ಐಎಲ್) ಟೆಂಡರ್ ಪ್ರಕ್ರಿಯೆಗಳ ಕುರಿತು ತನಿಖೆ ನಡೆಸಿ, ವರದಿ ಸಲ್ಲಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ ಅವರಿಗೆ ಸೂಚಿಸಿದ್ದಾರೆ.

ಮುಖ್ಯ ಕಾರ್ಯದರ್ಶಿಯವರಿಗೆ ಮಂಗಳವಾರ ಎರಡು ಪ್ರತ್ಯೇಕ ಟಿಪ್ಪಣಿಗಳನ್ನು ಕಳುಹಿಸಿರುವ ಸಿದ್ದರಾಮಯ್ಯ, ಎರಡೂ ಪ್ರಕರಣಗಳ ಬಗ್ಗೆ ತನಿಖೆ ನಡೆಸಿ ಹತ್ತು ದಿನಗಳೊಳಗೆ ವರದಿ ನೀಡುವಂತೆ ನಿರ್ದೇಶನ ನೀಡಿದ್ದಾರೆ.

ಸಹಾಯಕ ಸರ್ಕಾರಿ ಅಭಿಯೋಜಕರು ಮತ್ತು ಸಹಾಯಕ ಸರ್ಕಾರಿ ವಕೀಲರ ನೇಮಕಕ್ಕೆ 2022ರ ಜುಲೈ 23 ಮತ್ತು 24ರಂದು ಆದೇಶಗಳನ್ನು ಹೊರಡಿಸಲಾಗಿತ್ತು. ಈ ಪ್ರಕ್ರಿಯೆಯಲ್ಲಿ ಭಾರಿ ಭ್ರಷ್ಟಾಚಾರ ಮತ್ತು ಅಕ್ರಮಗಳು ನಡೆದಿವೆ ಎಂಬ ದೂರುಗಳು ಮುಖ್ಯಮಂತ್ರಿ ಕಚೇರಿಗೆ ಸಲ್ಲಿಕೆಯಾಗಿದ್ದವು. ಅವುಗಳನ್ನು ಆಧರಿಸಿ ತನಿಖೆಗೆ ಸೂಚಿಸಲಾಗಿದೆ.

ಟೆಂಡರ್‌ನಲ್ಲಿ ಅಕ್ರಮದ ಆರೋಪ: ಬಿಜೆಪಿ ಸರ್ಕಾರದ ಅವಧಿಯಲ್ಲಿ ಎಂಎಸ್‌ಐಎಲ್‌ನಲ್ಲಿ ಕಾನೂನಿಗೆ ವಿರುದ್ಧವಾಗಿ ಬೃಹತ್ ಮೊತ್ತವನ್ನು ವೆಚ್ಚ ಮಾಡಲಾಗಿದೆ ಎಂಬ ದೂರುಗಳು ಮುಖ್ಯಮಂತ್ರಿಯವರ ಕಚೇರಿಗೆ ಬಂದಿದ್ದವು. ಟೆಂಡರ್ ಪ್ರಕ್ರಿಯೆಯಲ್ಲಿ ನಿಯಮ ಉಲ್ಲಂಘನೆಯ ಆರೋಪವನ್ನೂ ಮಾಡಲಾಗಿದೆ. ಈ ಬಗ್ಗೆಯೂ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಮುಖ್ಯ ಕಾರ್ಯದರ್ಶಿಯವರಿಗೆ ಸೂಚನೆ ನೀಡಲಾಗಿದೆ.

ಕಲುಷಿತ ನೀರು ಕುಡಿದು ಮಗು ಸಾವು ಶಂಕೆ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಜಿಲ್ಲೆಯ ಕನಕಗಿರಿ ತಾಲ್ಲೂಕಿನ ಬಸರಿಹಾಳ ಗ್ರಾಮದಲ್ಲಿ ಒಂಬತ್ತು ತಿಂಗಳ ಮಗು ವಾಂತಿ– ಭೇದಿಯಾಗಿ ಮಂಗಳವಾರ ಮೃತಪಟ್ಟಿದ್ದು, 12 ಜನ ಆಸ್ಪತ್ರೆಗೆ ದಾಖಲಾಗಿದ್ದಾರೆ. ಕುಷ್ಟಗಿ ತಾಲ್ಲೂಕಿನ ಬಿಜಕಲ್ ಹಾಗೂ ಜುಮಲಾಪುರ ಗ್ರಾಮದಲ್ಲೂ 45 ಜನ ಅಸ್ವಸ್ಥಗೊಂಡಿದ್ದು, ಕಲುಷಿತ ನೀರು ಸೇವನೆ ಇದಕ್ಕೆ ಕಾರಣ ಎಂಬ ಶಂಕೆ ವ್ಯಕ್ತವಾಗಿದೆ. ಒಟ್ಟು 57 ಜನ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಶ್ರುತಿ ಲಾಯದಣಸಿ ಎಂಬ ಮಗು ಮೃತಪಟ್ಟಿದೆ. ಪೋಷಕರು ಮಗುವನ್ನು ಉರುಸ್‌ಗೆ ತಾವರಗೇರಾಕ್ಕೆ ಕರೆದುಕೊಂಡು ಹೋದಾಗ ಅಲ್ಲಿ ವಾಂತಿ–ಭೇದಿ ಕಾಣಿಸಿಕೊಂಡಿತ್ತು.

ವಾಂತಿ– ಭೇದಿಯಿಂದ ಅಸ್ವಸ್ಥಗೊಂಡವರನ್ನು ಕನಕಗಿರಿ, ಸಿಂಧನೂರು, ಗಂಗಾವತಿ ಹಾಗೂ ಮುಸಲಾಪುರದ ಆಸ್ಪತ್ರೆಗೆ ದಾಖಲಿಸಲಾಗಿದೆ.

> **ವಾಂತಿ ಭೇದಿ ನಿಯಂತ್ರಣಕ್ಕೆ ಬರುವ ತನಕ ಗ್ರಾಮಗಳಲ್ಲಿ ತಾತ್ಕಾಲಿಕ ಆರೋಗ್ಯ ಕೇಂದ್ರಗಳನ್ನು ಆರಂಭಿಸಲಾಗಿದೆ. ಮಗುವಿಗೆ ಅನಾರೋಗ್ಯ ಕಾಡಿದಾಕ್ಷಣ ಆಸ್ಪತ್ರೆಗೆ ಬಂದಿದ್ದರೆ ಜೀವ ಉಳಿಯುತ್ತಿತ್ತು**
> **ಡಾ. ಅಲಕಾನಂದ ಮಳಗಿ,** ಡಿಎಚ್‌ಒ

> **ಕೊಳವೆ ಕತ್ತರಿಸಿ ನೀರು ಪಡೆದುಕೊಂಡಿದ್ದರಿಂದ ನೀರು ಕಲುಷಿತವಾಗಿದೆ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತಿದೆ. ನೀರಿನ ಮಾದರಿಯನ್ನು ಪರೀಕ್ಷೆಗೆ ಕಳುಹಿಸಲಾಗಿದೆ**
> **ರಾಹುಲ್ ರತ್ನಂ ಪಾಂಡೆಯ**
> ಜಿಲ್ಲಾ ಪಂಚಾಯಿತಿ ಸಿಇಒ

5ನೇ ಪುಟ ನೋಡಿ

ಪರಿಷತ್: 30ಕ್ಕೆ ಉಪಚುನಾವಣೆ

ನವದೆಹಲಿ: ಕರ್ನಾಟಕ ವಿಧಾನ ಪರಿಷತ್‌ನ ಮೂವರು ಸದಸ್ಯರ ರಾಜೀನಾಮೆಯಿಂದ ತೆರವಾಗಿರುವ ಮೂರು ಸ್ಥಾನಗಳಿಗೆ ಉಪಚುನಾವಣೆ ಇದೇ 30ರಂದು ನಡೆಯಲಿದೆ. ಜೂನ್ 13ಕ್ಕೆ ಅಧಿಸೂಚನೆ ಹೊರಡಿಸಲಾಗುವುದು.

ವಿವರ 05

ಜಾತಿ ಗಣತಿ ವರದಿ ಸ್ವೀಕಾರಕ್ಕೆ ನಿರ್ಧಾರ

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸಮೀಕ್ಷೆಯ (ಜಾತಿಗಣತಿ) ವರದಿಯನ್ನು ಸರ್ಕಾರ ಸ್ವೀಕರಿಸಲಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಹಿಂದುಳಿದ ವರ್ಗ ಹಾಗೂ ದಲಿತ ಸಮುದಾಯಗಳ ಮಠಾಧೀಶರ ಒಕ್ಕೂಟದ ನಿಯೋಗದ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು ಈ ವಿಷಯ ತಿಳಿಸಿದರು.

‘ನಮ್ಮ ಸರ್ಕಾರ ಇದ್ದಾಗ ನಡೆಸಿದ್ದ ಸಮೀಕ್ಷಾ ವರದಿಯನ್ನು ಸ್ವೀಕರಿಸಲು ಹಿಂದಿನ ಸರ್ಕಾರಗಳು ಹಿಂದೇಟು ಹಾಕಿದ್ದವು. ವರದಿ ಸ್ವೀಕರಿಸುವುದರ ಜತೆಗೆ, ವಸ್ತುಸ್ಥಿತಿಯನ್ನು ಆಧರಿಸಿ, ಜನರಿಗೆ ಶಿಕ್ಷಣ, ಉದ್ಯೋಗ, ಉದ್ಯಮ ಹೀಗೆ ವಿವಿಧ ವಲಯಗಳಲ್ಲಿ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲಿದೆ’ ಎಂದು ಅವರು ಭರವಸೆ ನೀಡಿದರು.

ಆದಾಯ ತೆರಿಗೆದಾರರಿಗೆ ‘ಗೃಹಲಕ್ಷ್ಮಿ’ ಸಿಗುವುದಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಟುಂಬದ ಯಜಮಾನಿಗೆ ಪ್ರತಿ ತಿಂಗಳು ₹2 ಸಾವಿರ ನೀಡುವ ‘ಗೃಹ ಲಕ್ಷ್ಮಿ’ ಯೋಜನೆಗೆ ಸರ್ಕಾರ ಮಾರ್ಗಸೂಚಿ ಬಿಡುಗಡೆ ಮಾಡಿದೆ. ಯಜಮಾನಿ ಅಥವಾ ಯಜಮಾನಿಯ ಪತಿ ಆದಾಯ ತೆರಿಗೆದಾರರಾಗಿದ್ದರೆ, ಜಿಎಸ್‌ಟಿ ರಿಟರ್ನ್ಸ್ ಸಲ್ಲಿಸುವವರಾಗಿದ್ದರೆ ಈ ಯೋಜನೆಗೆ ಅರ್ಹರಲ್ಲ ಎಂದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ.

‘ಗೃಹ ಲಕ್ಷ್ಮಿ’ಯ ನಿಯಮಗಳು ಹೀಗಿವೆ

- ಅಂತ್ಯೋದಯ, ಬಿಪಿಎಲ್ ಮತ್ತು ಎಪಿಎಲ್ ಪಡಿತರ ಚೀಟಿಗಳಲ್ಲಿ ಕುಟುಂಬದ ಯಜಮಾನಿ ಎಂದು ನಮೂದಿಸಿರುವ ಮಹಿಳೆ ಈ ಯೋಜನೆಗೆ ಅರ್ಹರಾಗಿರುತ್ತಾರೆ. ಕುಟುಂಬದಲ್ಲಿ ಒಬ್ಬರಿಗಿಂತ ಹೆಚ್ಚು ಮಹಿಳೆಯರಿದ್ದಲ್ಲಿ ಒಬ್ಬರಿಗೆ ಮಾತ್ರ ಅರ್ಹತೆ
- ಫಲಾನುಭವಿಗಳು ಜೂನ್ 15ರಿಂದ ಜುಲೈ 15ರವರೆಗೆ ಸೇವಾ ಸಿಂಧು ಪೋರ್ಟಲ್ ಅಥವಾ ಭೌತಿಕವಾಗಿ ಅರ್ಜಿ ಸಲ್ಲಿಸಬಹುದು. ಆ.15ರಂದು ಅವರ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ ಮಾಡಲಾಗುತ್ತದೆ
- ಅರ್ಜಿದಾರರ ಸ್ವಯಂ ಘೋಷಣೆ ಆಧಾರದಲ್ಲಿ ಮಂಜೂರಾತಿ ನೀಡಲಾಗುತ್ತದೆ. ನಂತರ ಅಂಶಗಳನ್ನು ಪರಿಶೀಲಿಸಿದಾಗ, ತಪ್ಪು ಮಾಹಿತಿ ಕಂಡುಬಂದರೆ ಅಂತಹವರಿಂದ ಹಣ ವಸೂಲು ಮಾಡಲಾಗುತ್ತದೆ
- ಬ್ಯಾಂಕ್ ಖಾತೆ ಹಾಗೂ ಆಧಾರ್ ಸಂಖ್ಯೆ ಜೋಡಣೆ ಮಾಡಬೇಕು

‘ಬಾಡಿಗೆದಾರರಿಗೂ ವಿದ್ಯುತ್ ಉಚಿತ’

ಬೆಂಗಳೂರು: ‘ಬಾಡಿಗೆ ಮನೆಗಳಲ್ಲಿ ವಾಸಿಸುತ್ತಿರುವ ಎಲ್ಲರಿಗೂ ಉಚಿತ ವಿದ್ಯುತ್ ಪೂರೈಸಲಾಗುವುದು. ಗೊಂದಲ ಬೇಡ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಬಾಡಿಗೆದಾರರಲ್ಲಿ ಬಹುತೇಕರು ಬಡವರಿದ್ದಾರೆ. ಅವರಿಗೆ ಅನುಕೂಲ ಮಾಡಿಕೊಡಲಾಗುವುದು. ವಾಣಿಜ್ಯ ಉದ್ದೇಶದ ಬಾಡಿಗೆ ಹೊರತುಪಡಿಸಿ ಉಳಿದೆಲ್ಲ ಬಾಡಿಗೆ ಮನೆ ಗಳಿಗೂ ಉಚಿತವಾಗಿಯೇ ವಿದ್ಯುತ್ ಸಿಗಲಿದೆ ಎಂದರು.

‘ಬಿಜೆಪಿ ನಾಯಕರು ಹಿಂದೆ ನೀಡಿದ್ದ ಭರವಸೆಗಳನ್ನು 4 ವರ್ಷಗಳಲ್ಲಿ ಈಡೇರಿಸಲಿಲ್ಲ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ಕೊಟ್ಟ ಭರವಸೆ ಈಡೇರಿಸಿದೆ’ ಎಂದು ದೂರಿದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಮಂಗಳೂರಿನಲ್ಲಿ ಕೋಮುದ್ವೇಷ ನಿಗ್ರಹ ಘಟಕ: ಸಚಿವ ಪರಮೇಶ್ವರ

ಪ್ರಜಾವಾಣಿ ವಾರ್ತೆ

ಮಂಗಳೂರು: ‘ಮತೀಯ ದ್ವೇಷ ಬಿತ್ತುವ ಚಟುವಟಿಕೆಗಳನ್ನು ಹತ್ತಿಕ್ಕಲು ಇಲ್ಲಿನ ಪೊಲೀಸ್ ಕಮಿಷನರೇಟ್‌ನಲ್ಲಿ ಕೋಮುದ್ವೇಷ ನಿಗ್ರಹ ಘಟಕ ಸ್ಥಾಪಿಸಲಿದ್ದೇವೆ’ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ ತಿಳಿಸಿದರು.

ಇಲ್ಲಿ ಪೊಲೀಸ್ ಅಧಿಕಾರಿಗಳ ಜೊತೆ ಸಭೆ ನಡೆಸಿದ ಬಳಿಕ ಅವರು ಮಂಗಳವಾರ ಮಾತನಾಡಿದರು.

‘ಕರಾವಳಿಯಲ್ಲಿ ಮತೀಯ ಸಾಮರಸ್ಯ ಕದಡುವ ಪ್ರಕರಣಗಳು ಇತ್ತೀಚಿನ ವರ್ಷಗಳಲ್ಲಿ ಹೆಚ್ಚಾಗಿವೆ. ಇಂತಹ ಕೃತ್ಯಗಳನ್ನು ಮಟ್ಟಹಾಕಲು ಇಲ್ಲಿನ ಕಮಿಷನರೇಟ್ ವ್ಯಾಪ್ತಿಯ ಸಮರ್ಥ ಅಧಿಕಾರಿಗಳನ್ನು ಈ ಘಟಕಕ್ಕೆ ನೇಮಿಸುವಂತೆ ಕಮಿಷನರ್ ಕುಲದೀಪ್ ಕುಮಾರ್ ಆರ್. ಜೈನ್ ಅವರಿಗೆ ಸೂಚನೆ ನೀಡಿದ್ದೇನೆ’ ಎಂದರು.



‘ಕೋಮು ಸಾಮರಸ್ಯ ಕದಡುವ ಕೃತ್ಯಗಳನ್ನು ಈ ಘಟಕವು ನಿಯಂತ್ರಿಸಿ, ಮತೀಯ ಗೂಂಡಾಗಿರಿಯಂತಹ ಚಟುವಟಿಕೆ ಹತ್ತಿಕ್ಕಲಿದೆ. ಪೊಲೀಸರು ಹೊಡೆ– ಬಡಿ ಪರಿಭಾಷೆಯ ಮೂಲಕ ಮಾತ್ರವಲ್ಲ; ಸಮಾಜದ ಜೊತೆ ಉತ್ತಮ ಸಂಪರ್ಕ ಸಾಧಿಸುವ ಮೂಲಕವೂ ಸಾಮರಸ್ಯದ ಮಹತ್ವ ಸಾರುವ ಕೆಲಸ ಮಾಡಲಿದ್ದಾರೆ. ಈ ಘಟಕದ ಅಧಿಕಾರಿಗಳು ಕಾಲೇಜುಗಳಿಗೆ ಭೇಟಿ ನೀಡಿ, ಶಾಂತಿ– ಸಾಮರಸ್ಯ ಕಾಪಾಡುವ ಮಹತ್ವದ ಬಗ್ಗೆ ಮನವರಿಕೆ ಮಾಡಲಿದ್ದಾರೆ’ ಎಂದರು.

‘ಸದ್ಯಕ್ಕೆ ಮಂಗಳೂರು ಕಮಿಷನರೇಟ್ ವ್ಯಾಪ್ತಿಯಲ್ಲಿ ಮಾತ್ರ ಇಂತಹ ಘಟಕವನ್ನು ಸ್ಥಾಪಿಸಲಿದ್ದೇವೆ. ಕೋಮು-ಸೌಹಾರ್ದಕ್ಕೆ ಧಕ್ಕೆ ತರುವ ಪ್ರಕರಣಗಳು ಮರುಕಳಿಸುವ ಕಡೆಯೂ ಅಗತ್ಯ ಬಿದ್ದರೆ ಇಂತಹ ಘಟಕ ಸ್ಥಾಪಿಸಲು ಕ್ರಮ ಕೈಗೊಳ್ಳುತ್ತೇವೆ’ ಎಂದು ಹೇಳಿದರು.

5ನೇ ಪುಟ ನೋಡಿ

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: 08 UBL 2023-24
ದಿನಾಂಕ: 31.05.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ.ಸಂ.	ಕಾಮಗಾರಿಯ ವಿವರ	ಅಂದಾಜು ಮೌಲ್ಯ
1	ಹುಬ್ಬಳ್ಳಿ ವಿಭಾಗ: ಬೆಳಗಾವಿ (ವೇ – ಸೈಡ್) – ಬೆಳಗಾವಿ ಮತ್ತು ಕ್ಯಾಸ್ಟಲ್‌ರಾಕ್ ನಿಲ್ದಾಣಗಳಲ್ಲಿ ರನ್ನಿಂಗ್ ರೂಂಗಳ ಸುಧಾರಣಾ ಕಾರ್ಯ.	ರೂ. 84,85,217/-
2	ಹುಬ್ಬಳ್ಳಿ ವಿಭಾಗ: ಹುಬ್ಬಳ್ಳಿಯಲ್ಲಿರುವ ಕೇಶವಾಪುರ ಕಾಲೋನಿಯಲ್ಲಿ ಒಳಚರಂಡಿ ಪೈಪ್, ಮಳೆನೀರಿನ ಪೈಪ್ ಮತ್ತು ಸ್ತಂಭಗಳ ರಕ್ಷಣೆಯ ಮೇಲಿನ ಸುಧಾರಣಾ ಕಾರ್ಯ.	ರೂ. 93,77,163/-
3	ಹುಬ್ಬಳ್ಳಿ ವಿಭಾಗ: ವಿಭಾಗೀಯ ಇಂಜಿನಿಯರ್ / ಪ್ರ.ಕಾ./ಹುಬ್ಬಳ್ಳಿ ವ್ಯಾಪ್ತಿಯಲ್ಲಿ ಮುಗದ ಡಿಪೋಗೆ ಬೇಕಾದ ಬಾಲಾಸ್ಟ್‌ಗಳ ಪೂರೈಕೆ.	ರೂ. 1,92,95,500/-
4	ಹುಬ್ಬಳ್ಳಿ ವಿಭಾಗ: ಎಸ್‌ಎಸ್‌ಇ/ಪಿ.ವೇ/ಹೊಸಪೇಟೆ (ಎಂಎಲ್) ವ್ಯಾಪ್ತಿಯಲ್ಲಿ ಒಂದು ವರ್ಷದ ಅವಧಿಗೆ ಟ್ರ್ಯಾಕ್‌ಗಳ ನಿರ್ವಹಣಾ ಕಾರ್ಯ.	ರೂ. 3,31,59,133/-
5	ಹುಬ್ಬಳ್ಳಿ ವಿಭಾಗ: **ಉಪ–ಕಾಮಗಾರಿ–1:** ಗಿಣಿಗೇರ–ಗಂಗಾವತಿ ವಿಭಾಗದಲ್ಲಿ ಬ್ರಿಡ್ಜ್ ಸಂ. 4, 20, 37 & 46ರಲ್ಲಿ ಆರ್‌ಯುಬಿಗಳ ಒಳಚರಂಡಿಯ ಸುಧಾರಣೆ (ಒಟ್ಟು 04 ಸಂ.) **ಉಪ–ಕಾಮಗಾರಿ–2:** ಗದಗ–ಹೊಸಪೇಟೆ ವಿಭಾಗದಲ್ಲಿ ಬ್ರಿಡ್ಜ್ ಸಂ. 32ಎ, 41ಎ, 65ಎ, 39ಎ & 76ಎ ರಲ್ಲಿ ಆರ್‌ಯುಬಿಗಳ ಒಳಚರಂಡಿಯ ಸುಧಾರಣೆ (ಒಟ್ಟು 05 ಸಂ.)	ರೂ. 1,73,25,292/-
6	ಹುಬ್ಬಳ್ಳಿ ವಿಭಾಗ: ಸಹಾಯಕ ವಿಭಾಗೀಯ ಇಂಜಿನಿಯರ್/ಪಶ್ಚಿಮ/ಹುಬ್ಬಳ್ಳಿ ವಿಭಾಗದಲ್ಲಿ ಪ್ರಸ್ತಾವನೆಯಂತೆ ಗ್ಯಾಂಗ್ ಟೂಲ್ ಕಮ್ ರೆಸ್ಟ್ ರೂಂಗಳ ನಿರ್ಮಾಣ. (ಒಟ್ಟು 06 ಗ್ಯಾಂಗ್ ಟೂಲ್ ಕಮ್ ರೆಸ್ಟ್ ರೂಂಗಳು. ಹುಬ್ಬಳ್ಳಿ ಯಾರ್ಡ್, ಪಶ್ಚಿಮ/ಹುಬ್ಬಳ್ಳಿ ನಿಲ್ದಾಣ, ನವಲೂರು, ಕಂಬಾರಗಣವಿ, ಅಂಬೇವಾಡಿ ಮತ್ತು ಕಾಶಿನಹಟ್ಟಿ)	ರೂ. 1,04,22,747/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 30.06.2023, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಇಂಜಿನಿಯರ್/ಸಂಯೋಜನೆ ಹುಬ್ಬಳ್ಳಿ

PUB/149/AAD/PRB/SWR/2023-24

S.W.Railways SWRRLY SWRRLY

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆರೋಗ್ಯಾಧಿಕಾರಿ (ಪಶ್ಚಿಮ)ರವರ ಕಛೇರಿ, ಭಾಷ್ಯಂ ಪಾರ್ಕ್, ಶೇಷಾದ್ರಿಪುರಂ, ಬೆಂಗಳೂರು

ಸಂಖ್ಯೆ: ಆ.ಅ(ಪ)/ಪಿಆರ್/329/2022–23 ದಿನಾಂಕ: 06.06.2023

ಪ್ರಕಟಣೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಸುಬೇದಾರ್ ಪಾಳ್ಯ (ಹಳೇ ವಾರ್ಡ್ 66 ಹೊಸ ವಾರ್ಡ್ 62) ಆರೋಗ್ಯ ಕೇಂದ್ರಕ್ಕೆ ಈ ಕೆಳಕಂಡ ಹುದ್ದೆಗೆ 6 ತಿಂಗಳ ಅವಧಿಗೆ ಸಂಪೂರ್ಣ ಗುತ್ತಿಗೆ ಆಧಾರದ ಮೇಲೆ ಈ ಕೆಳಕಂಡ ಹುದ್ದೆಗೆ ವಾಕ್–ಇನ್–ಪ್ರಕ್ರಿಯೆ ಮೂಲಕ ಮೆರಿಟ್ ಕಮ್ ರೋಸ್ಟರ್ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

Sl. No.	Name of the posts	Educational Qualification	Consolidated Pay	No. of Posts
1	Dental Doctors	BDS degree from recognized university registered under Dental Council of India.	Rs. 40,000/- Month	1

ಅರ್ಹತಾ ಮಾನದಂಡಗಳು:

- **ವಯೋಮಿತಿ:** ಈ ಕೆಳಗೆ ನಮೂದಿಸಿರುವ ವಯೋಮಿತಿಯನ್ನು ಮೀರಿರಬಾರದು.
  ಎ. ಸಾಮಾನ್ಯ ವರ್ಗ – 35 ವರ್ಷ
  ಬಿ. 2ಎ, 2ಬಿ, 3ಎ, 3ಬಿ – 38 ವರ್ಷ
  ಸಿ. ಪ.ಜಾತಿ, ಪ.ಪಂಗಡ, ವರ್ಗ–1 – 40 ವರ್ಷ
- ಅಭ್ಯರ್ಥಿಗಳಿಗೆ ಕನಿಷ್ಠ ಆಡಳಿತಾತ್ಮಕ ಕನ್ನಡ ಭಾಷೆಯ ಅರಿವಿರಬೇಕು.
- ಎಂ.ಡಿ.ಎಸ್. ಸ್ನಾತಕೋತ್ತರ ಪದವಿ ಹೊಂದಿದವರಿಗೆ ಆದ್ಯತೆ ನೀಡಲಾಗುವುದು.

ಆಸಕ್ತ ಅಭ್ಯರ್ಥಿಗಳು ಸಂಬಂಧಿಸಿದ ಮೂಲ ದಾಖಲಾತಿಗಳ ಪ್ರತಿಯನ್ನು (ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ, ಸಂಬಂಧಪಟ್ಟ ವಿದ್ಯಾರ್ಹತೆಗಳ ಅಂಕಪಟ್ಟಿಗಳು, ವಿದ್ಯಾರ್ಹತೆ ನೋಂದಣಿ ಪ್ರಮಾಣ ಪತ್ರಗಳು) ಖುದ್ದಾಗಿ ಆರೋಗ್ಯಾಧಿಕಾರಿ (ಸಾ.ಆ) ಪಶ್ಚಿಮ ವಲಯರವರ ಕಛೇರಿಯಲ್ಲಿ ದಿನಾಂಕ: **07.06.2023**ರ **ಸಂಜೆ 4:00**ರ ಒಳಗೆ ಸಲ್ಲಿಸಬೇಕು.

ಅರ್ಜಿ ಸಲ್ಲಿಸುವ ಸ್ಥಳ: ಆರೋಗ್ಯಾಧಿಕಾರಿಗಳು (ಸಾ.ಆ) ಪಶ್ಚಿಮ ವಲಯ, ಶಾಸಕರ ಭವನ ಕಟ್ಟಡ, ಮಂತ್ರಿಮಾಲ್ ಮುಂಭಾಗ, ಬಾಷ್ಯಂ ಪಾರ್ಕ್, ಶೇಷಾದ್ರಿಪುರಂ, ಬೆಂಗಳೂರು–20.

ಹೆಚ್ಚಿನ ವಿವರಗಳಿಗಾಗಿ ದೂರವಾಣಿ ಸಂಖ್ಯೆ: **9480688569,** ಇ–ಮೇಲ್ ಐಡಿ: **howestbbmp@gmail.com**ನ್ನು ಸಂಪರ್ಕಿಸಲು ಸೂಚಿಸಲಾಗಿದೆ.

ಸಹಿ/– ಆರೋಗ್ಯಾಧಿಕಾರಿ (ಪಶ್ಚಿಮ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಾರ್ವಜನಿಕ ಆಸ್ಪತ್ರೆ ಜಯನಗರ

ವೈದ್ಯಕೀಯ ಅಧೀಕ್ಷಕರವರ ಕಛೇರಿ, ಜಯನಗರ, ಬೆಂಗಳೂರು – 560041

ಸಂಖ್ಯೆ: ಸಾಆಜ/ಇ–ಟೆಂಡರ್/03/2023–24 ದಿನಾಂಕ: 03.06.2023

ಇ–ಟೆಂಡರ್ ಪ್ರಕಟಣೆ

ಸಾರ್ವಜನಿಕ ಆಸ್ಪತ್ರೆ ಜಯನಗರ ಬೆಂಗಳೂರು, ಈ ಆಸ್ಪತ್ರೆಯ 2023–24ನೇ ಸಾಲಿಗೆ ಈ ಆಸ್ಪತ್ರೆಯಲ್ಲಿ **ವಾಹನ ನಿಲ್ದಾಣ ಗುತ್ತಿಗೆಗೆ** ಮಾನವ ಸಂಪನ್ಮೂಲಗಳ ನೋಂದಾಯಿತ ಸಂಸ್ಥೆಗಳಿಂದ ಸೇವೆ ಪಡೆಯಲು ಇ–ಟೆಂಡರ್ ಪ್ರಕಟಣೆ.

ಟೆಂಡರ್ ವೇಳಾಪಟ್ಟಿ: (1) ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಪ್ರಾರಂಭದ ದಿನಾಂಕ: **05.06.2023**ರಿಂದ. (2) ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಅಂತಿಮ ದಿನಾಂಕ: **04.07.2023, ಸಂಜೆ 4:00 ಗಂಟೆ**ವರೆಗೆ. (3) ಟೆಂಡರ್‌ಗಳನ್ನು ತೆರೆಯುವ (Technical Bid) ದಿನಾಂಕ: **05.07.2023, ಸಂಜೆ 5:00 ಗಂಟೆ**ಗೆ. (4) ಆರ್ಥಿಕ ಬಿಡ್ ತೆರೆಯುವ (Financial Bid) ದಿನಾಂಕ: **08.07.2023, ಸಂಜೆ 4:00 ಗಂಟೆ**ಗೆ.

ಇ–ಟೆಂಡರುಗಳ ನಿಯಮ ಮತ್ತು ನಿಬಂಧನೆಗಳನ್ನು ಟೆಂಡರ್ ನಮೂನೆಯಲ್ಲಿ ಲಗತ್ತಿಸಲಾಗಿರುತ್ತದೆ. "E-Tender upload through this website: **https//:eproc.karnataka.gov.in**"

ಸಹಿ/–, ವೈದ್ಯಕೀಯ ಅಧೀಕ್ಷಕರು
ಸಾರ್ವಜನಿಕ ಆಸ್ಪತ್ರೆ ಜಯನಗರ

ವಾಸಾಸಂಇ/ವಾಪ್ರ/ಎಲ್‌ಸಿ/189/2023–24

ಡಿ. ರೂಪಾಗೆ ಜಾಮೀನು

ಬೆಂಗಳೂರು: ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಅವರು ಹೂಡಿದ್ದ ಮಾನನಷ್ಟ ಮೊಕದ್ದಮೆ ಪ್ರಕರಣದ ವಿಚಾರಣೆಗೆ ಮಂಗಳವಾರ ಹಾಜರಾದ ಐಪಿಎಸ್ ಅಧಿಕಾರಿ ಡಿ. ರೂಪಾ ಅವರಿಗೆ ನಗರದ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಜಾಮೀನು ಮಂಜೂರು ಮಾಡಿದೆ.

'ಡಿ. ರೂಪಾ ಅವರು ನನ್ನ ವಿರುದ್ಧ ಕೀಳು ಅಭಿರುಚಿಯಿಂದ ಕೂಡಿದ ಆರೋಪ ಮಾಡಿದ್ದಾರೆ. ವಿದ್ಯುನ್ಮಾನ ಮಾಧ್ಯಮದಲ್ಲೂ ಹೇಳಿಕೆ ನೀಡಿದ್ದಾರೆ. ಇದರಿಂದಾಗಿ ನನ್ನ ವ್ಯಕ್ತಿತ್ವಕ್ಕೆ ಧಕ್ಕೆ ಉಂಟಾಗಿದೆ. ನನ್ನ ಖಾಸಗಿ, ಸಾಮಾಜಿಕ ಮತ್ತು ವೃತ್ತಿ ಬದುಕಿನ ಮೇಲೆ ಗಂಭೀರ ಪರಿಣಾಮ ಬೀರಿ, ಮಾನಸಿಕವಾಗಿ ನೋವುಂಟು ಮಾಡಿದೆ' ಎಂದು ರೋಹಿಣಿ ಸಿಂಧೂರಿ ಖಾಸಗಿ ಮೊಕದ್ದಮೆ ಹೂಡಿದ್ದರು.

ವಿಚಾರಣೆ ನಡೆಸಿದ ನ್ಯಾಯಾಧೀಶರು, ₹ 25 ಸಾವಿರ ಮೊತ್ತದ ವೈಯಕ್ತಿಕ ಬಾಂಡ್ ಹಾಗೂ ಇತರೆ ಷರತ್ತುಗಳನ್ನು ವಿಧಿಸಿ ಜಾಮೀನು ನೀಡಿತು.

ಶ್ರೀ ಪ್ರಸನ್ನ ವೀರಾಂಜನೇಯಸ್ವಾಮಿ ದೇವಸ್ಥಾನ

ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಇಲಾಖೆ

ಕಾರ್ಯನಿರ್ವಾಹಕ ಅಧಿಕಾರಿಗಳ ಕಾರ್ಯಾಲಯ, ಮಹಾಲಕ್ಷ್ಮೀಪುರಂ, ಬೆಂಗಳೂರು–560086. ದೂ: 23491727 ಇಮೇಲ್: spvstemple1973@gmail.com

ಸಂಖ್ಯೆ: ಶ್ರೀ.ಪ್ರ.ವೀ.ಸ್ವಾ.ದೇ/ಸಿ.ಆರ್.22/2023–24 ದಿನಾಂಕ: 05–06–2023

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ (e-Procurement)

ಬೆಂಗಳೂರು ನಗರ, ಮಹಾಲಕ್ಷ್ಮೀ ಬಡಾವಣೆಯಲ್ಲಿರುವ ಶ್ರೀ ಪ್ರಸನ್ನ ವೀರಾಂಜನೇಯಸ್ವಾಮಿ ದೇವಾಲಯಕ್ಕೆ ಸೇರಿದ ಈ ಕೆಳಕಂಡಂತೆ ವಿವಿಧ ಸೇವೆಗಳನ್ನು ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ದರಸೂಚಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಟೆಂಡರ್‌ದಾರರು ಹೆಚ್ಚಿನ ಮಾಹಿತಿಯನ್ನು **https://kppp.karnataka.gov.in** ನ ವೆಬ್‌ಸೈಟ್ ಮೂಲಕ ಪಡೆಯಬಹುದಾಗಿದೆ.

ಕ್ರ. ಸಂ.	ಇ–ಟೆಂಡರ್ ವಿವರ	ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸುವ ದಿನಾಂಕ	ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ತೆರೆಯುವ ದಿನಾಂಕ
1	ಪ್ರತಿದಿನ ಪ್ರಸಾದ ತಯಾರಿಸಲು ಅಗತ್ಯವಿರುವ ದಿನಸಿ ಹಾಗೂ ಇತರೆ ಸಾಮಗ್ರಿಗಳ ಖರೀದಿ	05.06.2023 ರಿಂದ 26.06.2023ರ ವರೆಗೆ ಸಂಜೆ 5:00 ಗಂಟೆವರೆಗೆ	28.06.2023ರ ಬೆಳಿಗ್ಗೆ 11:30 ಗಂಟೆಗೆ
2	ಪ್ರತಿದಿನ ಶ್ರೀ ಸ್ವಾಮಿಯವರ ಅಲಂಕಾರಕ್ಕಾಗಿ ಹಾಗೂ ವಿಶೇಷ ದಿನಗಳಂದು ಅಗತ್ಯಕ್ಕೆ ತಕ್ಕಂತೆ ವಿವಿಧ ಬಗೆಯ ಹೂವಿನ ಹಾರಗಳು, ತೋಮಾಲೆಗಳು ಹಾಗೂ ಇತರೆ ಬಿಡಿ ಹೂವುಗಳ ಸರಬರಾಜು.		

ವಾ.ಸಾ.ಸಂ.ಇ/ವಾಪ್ರ/191/ಶಿರಡಿಸಾಯಿ/2023–24 ಸಹಿ/– ಕಾರ್ಯನಿರ್ವಾಹಕ ಅಧಿಕಾರಿಗಳು

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: 24/MYS/2023
ದಿನಾಂಕ: 02.06.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಸಹಾಯಕ ವಿಭಾಗೀಯ ಇಂಜಿನಿಯರ್, ಚಿತ್ರದುರ್ಗ ಉಪ–ವಿಭಾಗದ ಚಿಕ್ಕಜಾಜೂರು–ರಾಯದುರ್ಗ ನಡುವೆ ಆರ್‌ಯುಬಿ ಸಂ. 29ಎ, 30ಎ, 82ಎ, 121ಎ, 128ಎ ಗಳಿಗೆ ಸ್ಟಾಂಡರ್ಡ್ ಹೈಟ್ ಗೇಜ್‌ಗಳನ್ನು ಒದಗಿಸುವುದು (ತಲಾ 2 ಸಂ.)	ರೂ. 65,59,701/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 26.06.2023, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಇಂಜಿನಿಯರ್ / ಸಂಯೋಜನೆ ಮೈಸೂರು

PUB/150/AAD/PRB/SWR/2023-24

S.W.Railways SWRRLY SWRRLY

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Accounts & Finance

KÄRCHER DISTRIBUTOR needs a JUNIOR ACCOUNTANT. BCom with TALLY knowledge having 1-2 yrs experience preferred. Candidates staying around Uttarahalli Contact- 94498-57458

VIKAS HIGH SCHOOL BSK 3rd Stage, Bangalore-85 Require BCA/ MCA TEACHER for Computer Science. Contact: 9448110651/ 9620448778 between 9- 1

FRANK PUBLIC SCHOOL, JP.Nagar 6th Phase, Requires MIDDLE SCHOOL ENGLISH TEACHER. HIGH SCHOOL HINDI, SOCIAL STUDIES. PE TEACHERS. FRONT OFFICE STAFF. rumysud@gmail.com 7019301626

KARNATAKA STATE BAR COUNCIL, BENGALURU
(A Statutory Body constituted under the Advocates Act, 1961)

WANTED

Invites applications for the following posts on consolidated salary or on contract basis:

1. SECRETARY

Qualification as Experience :
a. Must be holder of a degree in Law granted by a University established by Law in India;
b. Must be on the Rolls of Karnataka State Bar Council;
c. Must be practicing as an Advocate with 15 years of practice with good knowledge of Computer Applications and fluency in Kannada, English and Hindi languages.
d. Retired District Judges / Public Prosecutors also can apply
e. Must be less than 50 years of age for full time Secretary. Secretary shall be appointed in such a manner as Council may decide.

Remuneration: Remuneration will be fixed on the basis of qualification and experience.
Tenure of Office - THREE YEARS in case of Retired Persons.

1. ACCOUNTANT - ONE POST

Essential Qualification & Experience :
a. Must be a Graduate or Post Graduate in commerce **OR** MBA in Finance Management having knowledge of Computers and Tally.
b. Must have experience of 3 years as Account Assistant or Accountant in any reputed Financial Institution or Chartered Accountant Firms or any other financial / statutory organization.
c. The Candidate's should be below 35 years of age.

2. ACCOUNTS ASSISTANT : ONE POST
a. Must be a B.Com / M.Com **OR** MBA in Finance / Management having knowledge of Computers and Tally. Candidates should have fair working knowledge of financial transactions and able to manage the accounts wing independently.
b. Preference will be given to Candidates who have served in similar capacities in reputed Financial Organization.
c. The Candidates' should be below 35 years of age.

3. ASSISTANTS : TWO POSTS
a. Graduates or Post Graduates in any discipline having Computer literacy and also proficiency in office procedures.
b. The Candidates' should be below 35 years of age

Processing Fees: The DD of Rs. 500/- for others and Rs. 300/- for SC / ST drawn in favour of Secretary, KSBC

Applications should be submitted to the Secretary, Karnataka State Bar Council, Dr. B.R. Ambedkar Veedhi, Bengaluru along with the copies of the Certificates on or before 21st June, 2023.

H.L. VISHALA RAGHU
Chairman

Teachers/ Professors

WANTED B.ED & D.Ed TEACHERS to teach Maths, Science, Kannada & Computers. Contact: A.B English Primary & High School, 68/1, Haines Road, Near Coles Park, WhatsApp your resumes at- 9353111888.

WANTED MALE Candidates to teach ENGLISH and SOCIAL SCIENCE for Class VIII and IX. Timings -6.00 pm to 9.00 pm Contact in person (5.00 pm -6.00 pm on all working days) - Secretary, Deccan Educational Society®, No.95, 3rd Cross, Srirampuram, Bengaluru- 560021 (Near Sampige Theater, Malleswaram).

WANTED BA, MA/ B.Ed Hindi Lady Teacher, Carmel Garden HighSchool, Nandini Layout, Bangalore-96. Phone: 9739437454/ 9945050690.

HARWARD INTERNATIONAL SCHOOL
CBSE Affiliation No.830335
REQUIRED PRT & TGT
FOR THE ACADEMIC YEAR 2023 - 24
Maths / Social Science / Kannada / Computer Science / Physical Education-(Female) Art & Craft
Eligibility - Post Graduation + B.Ed + 2 years of experience in CBSE school
PRO & Accountant Female (Institute experience)
email : infoharwardints@gmail.com
Contact : 9880112833 / 9945230286
Dasanapura, Tumkur Road, Bengaluru North - 562162

St. Benedict's Academy
School (State & CBSE), PU & Degree College
Asirvanam, Anchepalya, Mysore Road, Bangalore-74
Requires Trained & Experienced
LECTURERS
M.Sc Computer Science
M.A English, Hindi for Degree
NURSING TUTORS
M.Sc in Pediatric Nursing
B.Sc Nursing Tutors
TEACHERS
CBSE Primary School
Teachers English, EVS, Maths
KG- NTT/ Montessori Trained
CBSE High School
B.Sc (Science), BA (English)
Call: 9886812398
Mail your resume to: jeromeosb@gmail.com

ENGLISH, SOCIAL, D.Ed./ TCH Teachers wanted contact: CAMLIN ENGLISH SCHOOL, 6th 'C' Main Hampinagar, Bangalore 080-23301363

MANASA EDUCATIONAL TRUST (R)
M.S.CONVENT
Sultanpalya, R.T.Nagar, Bangalore-32
REQUIRED TEACHING STAFF
*Nursery Teachers- Qualified, experienced, Young, enthusiastic, fluent in English
*Primary and High School- Graduates with B.a/ Ma.B.Ed/ Msc/ Mca for English & Computer
Walk-in interview
Send your updated resume to: manasa.edu.trust@gmail.com
080-23651001
9844456549

WANTED KANNADA TEACHER: Highschool Sagar Convent Kanakapura Main Bangalore 82 Near APS Engineering College Good Salary: 9342552428

ST LAWRENCE SCHOOL Avalahalli Mysore Road (Near Satellite busstop/ Girinagar) Bangalore-26 Mob: 97401-54959/ 80738-57671. Wanted PRIMARY TEACHERS- 3 posts, DRAWING TEACHER, PRIMARY LADY PT TEACHER, Salary 15K to 25K, High School ENGLISH LADY TEACHER: 20K to 30K WALKIN on 8/06/2023 Between 10 to 3

WANTED HIGH School Maths, Hindi, PE Teacher. Contact: DME Convent. Arekere, Bannerghatta Bangalore. Phone: 9740439459.

WANTED ENGLISH MEDIUM TRAINED Lady Teachers for Primary to teach ENGLISH/ SCIENCE/ SOCIAL/ COMPUTER FACULTY/ PET and trained lady B.Ed to teach SCIENCE for High School. Lady Graduates Interested in teaching can also apply, age limit below 40 years, Salary with PF and ESI Facilities. Contact in person (10.00 am -3.00 pm on all working days) - Secretary, Deccan Educational Society®, No. 95, 3rd Cross, Srirampuram, Bengaluru- 560021 (Near Sampige Theater, Malleswaram).

REQUIRED EXPERIENCED HM- English, Computer, Social, Kannada Teachers. NAYANA VIDYANIKETANA SCHOOL, Near Kengeri. Contact (High School) 9632202212 9901030617

WANTED TEACHERS/ English (Primary) Science, Social Science (High School) P.E. Sans Public School, Nandini Layout. 9448228407

WANTED B.SC, B.Ed, (CBZ) and Sangeetha Teacher for High School in SV Institution, Sunkadakatte. 8660018447

REQUIRED
SMEs/ LECTURERS / TEACHERS
Class: 9th ,10th, 11th, and 12th - CBSE Mathematics and Science. Subjects For part time e-Learning Platform - Excellent command over English.
FRESHERS
Graphic Designers / Illustrators / Animators / Motion Graphic Designers / 3D Designers for e-Learning Platform.
Video Compositors/ Editors for e-Learning Platform.
SADVIDYA DIGITAL EDUCATION PVT. LTD.
99, 2nd Flr, 5th Block, 5th Cross SSI Area, RAJAJINAGAR Bangalore-560010
Call : 8296597874
email : sadvidyadigitaleducation@gmail.com

ADMIN FOR Front Office needed with good Spoken English for Chitrakoota CBSE School in Nagarbhavi, Kengeri Ring Road. 7829647333

General

"RDBS INVESTMENT- EXECUTIVE, B.Com 3Years Experience English & Kannada near nexus Mall Koramangala. mahesh24239@yahoo.com, 9066689879"

Multiple Vacancy

INDIAN RED CROSS SOCIETY
Karnataka State Branch
(Constituted Under Act XV of 1920)
No.26, 1st Floor, Red Cross Bhavan, Race Course Road, Bengaluru-560001, **Phone: 080 - 22264205 / 22268435**

REQUIRES - FOR ONE POST EACH
1) PUBLIC RELATION OFFICER
2) YOUTH RED CROSS COORDINATOR
3) JR. ACCOUNTANT
4) SECOND DIVISION ASST.
5) PHARMACIST
6) DRIVER CUM HELPER

NOTE: Service conditions and salary are negotiable depending upon qualification and experience. Application in own handwriting with testimonials should reach the undersigned at the above address on or before 21ST JUNE 2023 before 4.00 p.m. with mobile / landline telephone number, e-mail id and self-address.

For all further details and information please visit www.redcrosskarnataka.org
S/d- General Secretary

REQUIRED
1) FIELD EXECUTIVE Good Communication. in Kannada/ English/ Hindi Qualification: PUC/ Degree
2) OFFICE ASSISTANT Good Communication in Kannada/ English /Hindi Qualification: PUC /Degree
3) BILLING DATA ENTRY MS Excel And/MS World with good typing and basic English Communication.
4) DRIVERS Yellow Board Vehicle and White Board Vehicle
KNOWLEDGE INVENTION
99,5th Block, 5th Cross, SSI Area, RAJAJINAGAR Bangalore-560010
Call : 9611532268

REQUIRED
PROJECT MANAGER having Knowledge of Establishing and Handling from Production to Marketing of **NAMKEENS** and **MASALA PRODUCTS** for a Company.
PROJECT MANAGER, having Knowledge of Establishing **JEWELRY BUSINESS** from Manufacturing to Marketing for a Company.
Candidates with good experience may send resumes to lakpathy1961@gmail.com
Call: 83107 22535

WANTED FEMALE Telecaller & Billing Executive Retail 2 Wheeler Showroom Koramangala Good Communication Skills. 9945083900, 9731028676.

JOB OPPORTUNITY for Retired Men, House wife & Graduates in Reputed Company. Age 40 to 75, Bangalorians only, Earn upto 40,000/- Contact-9741401834

Wanted

Wanted
AN INDO AMERICAN COLLABORATION PRIVATE LTD CO. engaged with manufacturing of Rubber and Plastic Moulds & Moulded parts used in Medical, Aerospace, Automotive and Machine Tools etc.. located in **Peenya, Bangalore.**
Immediate Requirement for CMM Operator
with Minimum 2 Yrs Exp.
Share resume to: finance@srpblr.in
9964273413
7019184894

Engg/ Production Technical

WANTED CNC MACHINE SHOP TRAINEES BE and DIPLOMA MECHANICAL FRESHER'S 1 Year Training Period Stipend: 6 months Rs.15,000/-, 7-12 months Rs.17,000/-. Ph: 26585172 mail@ayyappa-cnc.com

Walk-in

CARREER & Business opportunity with flexible work, unlimited earnings.'0' investment with MNC for any age group at MG road. call:6360948345

Marketing & Sales

A_KERALA based_Mattress Manufacturing Company`is Looking for`well Experienced Marketing personnel from`the`same industry for_their Bangalore office Call-9606393481

AUTOMOTIVE

Four Wheelers Selling

Others

ACCIDENT VEHICLE PB-07-BV-8586, Skoda Rapid Ambition, 2019, With-RC & Without RC Phone: 7087050842/ 9844073989

RENTAL PROPERTIES

Accommodation Available

Commercial

FOR RENT 3500 Sqft Commercial Property located at Gonikoppal besides State Highway-Mysore to Virajpet, Kannur Route, with all amenities, ample Parking. Suitable for Showrooms, Banks, Restaurants, Supermarkets, Contact: 9448224984.

REAL ESTATE BUYING

Farm House/ Land/ Resorts

Multiple Locations

ADELIE INTERNATIONAL SCHOOL, Chain of schools backed by Eduweft group looking to take over management of Preschools, CBSE,CISCE & Residential Schools (Long lease/ Partnership/ Investment) Looking for multiple locations across Karnataka. Requirement: Excellent Location. Contact: Sumanth Narayan, Mobile: 9606353036 Email: info@eduweft.com, www.eduweft.com.

REAL ESTATE SELLING

Flat

Basavanagudi

SALE PRIME LOCATIONS 2 BHK FLATS, CARPARK, 24hrs CAUVERY WATER, ELECTRICITY, SECURITY, LIFTS, GARDEN FACILITIES: 9886019240/ 26623994

Bommanahalli

BULK SALE: 15 Studio Flats (32'x55' Site) Built-up 6400 Sft, A-khata, Near Bommanahalli Metro, Getting 1,40000 Rent- Vamshadhara, Owner- 9342247637

Farm House/ Land/ Resorts

Multiple Locations

1/2 ACRE converted eKhata furnished 15 AC rooms resto cafe 6-9L income nandi hills rd connecting STRR 9.1Cr Ph 7019346409

BUSINESS

Business Offers

Finance

NEED INVESTORS for one of the Leading Pvt Ltd., in Bangalore and Mysore. Attractive, Guaranteed RETURNS. Contact 8296092609.

INVEST 30K to-3Lakhs in Trading Multibusiness Good Returns (Monthly) Secured/ Fixed.Referrals Also Welcome. Contact-7892818780

GET OWN BUSINESS 10 LAKHS INVESTMENT MONTHLY INCOME 1L FOR GREEN HERBAL AYURVEDIC: 8892501007/ 9606701007

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

Business For Sale

BAR LICENCE CL-2, CL-7, CL-9. BUY/ SELL/ RENT CONTACT- 9538897774 RMSGROUP7774@GMAIL.COM

PERSONAL

Change of Name

CHANGE OF NAME
I, **MOHSIN ASHFAQ AHMED,** R/at No. 62, 14th Cross, 20th Main, Venkateshwara Layout, Bangalore-560068, have changed my name to **MOHSIN ASHFAK AHMED,** vide affidavit Reg. No. 259/2023, dated 01.06.2023 before Notary N. Narayana Swamy, Bangalore. Henceforth I shall be known as **MOHSIN ASHFAK AHMED** only.

CHANGE OF name I, Girish kumar venkatagowda mugulur. R/o- Ward- 01, Bapujinagar, kudligi, hospete, have changedmy name to Girish kumar Mugulur Venkatagowda vide affidavit sworn before notary Onkarappa Virupanna, koppal. Dated- 15-05-2023.

M ALAGUMEENA, Wife/o, 14834077M, SEP/DVRSPLVEH, GOPISAMY M, Vill- Nattarpatti, Vilampatti, Nilakottai, Dindigul, Tamil Nadu changed name M ALAGUMEENA to G ALAGUMEENA 06/06/2023 Notary K.V. Mani, Bangalore

CONNECT ಕ್ಲಾಸಿಫೈಡ್ಸ್

22,000 Sqft COMMERCIAL SPACE for JD/ SALE
Commercial Convention Suitable for Hotels/ Hospitals/ Mall & Work station.
from M.G Road 10 kms near Hennur Cross.
CALL: 97406 96764


RAMAN POLYTECHNIC
12, Magadi Main Road, Kamakshipalya, (Near Sumanahalli Bus Stop) Bengaluru-560079
Mobile: 080-23488623, 23284817, 80500 66771, 63609 03500
Website: www.ramaneducation.org
♦ Civil ♦ Mechanical ♦ Electrical ♦ Electronics ♦ Computer Science ♦ Automobile
ASC - RAMAN P.U. COLLEGE
Science ♦ Commerce | CONTACT: 6360127984
RAMAN I.T.I. COLLEGE
♦ Fitter ♦ Electronic Mechanic ♦ Electrician
CALIFORNIA PUBLIC SCHOOL
ICSE & State Syllabus. Nursery to X std | CONTACT: 9481305504
RMN-23403

ಸುಮಾರು ₹ 37 ಲಕ್ಷ ವಂಚನೆ; ದಾಬಸ್‌ಪೇಟೆ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್

ಫೇಸ್‌ಬುಕ್ ಗೆಳತಿ ಬಲೆಗೆ ಸ್ವಾಮೀಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಫೇಸ್‌ಬುಕ್'ನಲ್ಲಿ ಪರಿಚಯವಾಗಿ ವಿಡಿಯೊ ಕರೆ ಮೂಲಕ ಸಲುಗೆಯಿಂದ ಮಾತನಾಡುತ್ತಿದ್ದ ಯುವತಿಯ ಬಲೆಗೆ ಬಿದ್ದ ಕಂಬಾಳು ಮಹಾ ಸಂಸ್ಥಾನದ ಚನ್ನವೀರ ಶಿವಾಚಾರ್ಯ ಸ್ವಾಮೀಜಿ ಸುಮಾರು ₹ 37 ಲಕ್ಷ ಕಳೆದುಕೊಂಡಿರುವ ಬಗ್ಗೆ ದಾಬಸ್‌ಪೇಟೆ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.


ಚನ್ನವೀರ ಶಿವಾಚಾರ್ಯ ಸ್ವಾಮೀಜಿ

'ಚನ್ನವೀರ ಶಿವಾಚಾರ್ಯ ಸ್ವಾಮೀಜಿ ಅವರು ಹಣ ವರ್ಗಾವಣೆ ದಾಖಲೆ ಸಮೇತ ವಂಚನೆ ಬಗ್ಗೆ ದೂರು ನೀಡಿದ್ದಾರೆ. ಆರೋಪಿ ಎನ್ನಲಾದ ಯುವತಿ ವರ್ಷಾ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಸ್ವಾಮೀಜಿಯನ್ನು ವಂಚಿಸಿರುವ ಪ್ರಕರಣದಲ್ಲಿ ಒಬ್ಬನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ
ಮಲ್ಲಿಕಾರ್ಜುನ ಬಾಲದಂಡಿ, ಬೆಂಗಳೂರು ಗ್ರಾಮಾಂತರ ಎಸ್ಪಿ

'ಸ್ವಾಮೀಜಿಯನ್ನು 2020ರಲ್ಲಿ ಪರಿಚಯ ಮಾಡಿಕೊಂಡಿದ್ದ ಯುವತಿ, ನಾನಾ ಕಾರಣ ನೀಡಿ ಹಣ ಪಡೆದಿದ್ದಾಳೆ. ಹಣ ವರ್ಗಾವಣೆಗೆ ಸಂಬಂಧಪಟ್ಟ ಎಲ್ಲ ದಾಖಲೆಗಳು ಸ್ವಾಮೀಜಿ ಬಳಿ ಇವೆ. ಯಾವ ಖಾತೆಗೆ ಹಣ ಜಮೆ ಆಗಿದೆ. ಬೇರೆ ಯಾರೆಲ್ಲ ಖಾತೆಗೆ ಹಣ ವರ್ಗಾವಣೆಯಾಗಿದೆ ಎಂಬುದನ್ನು ಪರಿಶೀಲಿಸಲಾಗುತ್ತಿದೆ' ಎಂದು ಹೇಳಿದರು.

ದೂರಿನ ವಿವರ: 'ಫೇಸ್‌ಬುಕ್'ನಲ್ಲಿ ವರ್ಷಾ ಹೆಸರಿನ ಖಾತೆಯಿಂದ

ಅಪರಾಧ ಸುದ್ದಿ

2020ರಲ್ಲಿ ಫ್ರೆಂಡ್ ರಿಕ್ವೆಸ್ಟ್ ಬಂದಿತ್ತು. ಅದನ್ನು ಸ್ವೀಕರಿಸಿದ್ದೆ. ನಂತರ, ಯುವತಿ ಚಾಟಿಂಗ್ ಮಾಡಲಾರಂಭಿಸಿದ್ದಳು. 'ಆಧ್ಯಾತ್ಮಿಕವಾಗಿ ಆಸಕ್ತಿ ಇದೆ' ಎಂದು ಹೇಳಿ, ಮೊಬೈಲ್ ನಂಬರ್ ಪಡೆದುಕೊಂಡಿದ್ದಳು' ಎಂದು ಸ್ವಾಮೀಜಿ ದೂರಿನಲ್ಲಿ ತಿಳಿಸಿದ್ದಾರೆ.

'ಮೊಬೈಲ್ ನಂಬರ್ ಪಡೆದ ಬಳಿಕ ವಾಟ್ಸ್‌ಆ್ಯಪ್‌ನಲ್ಲಿ ಸಂದೇಶ ಕಳಿಸುತ್ತಿದ್ದಳು. ತಾನೊಬ್ಬ ಅನಾಥೆ ಎನ್ನುತ್ತಿದ್ದ ವರ್ಷಾ, ವಿಡಿಯೊ ಕರೆ ಮಾಡಲಾರಂಭಿಸಿದ್ದಳು. ಹಲವು ಬಾರಿ ವಿಡಿಯೊ ಕರೆ ಮಾಡಿದ್ದ ಯುವತಿ, ಎಂದಿಗೂ ಮುಖ ತೋರಿಸಿರಲಿಲ್ಲ' ಎಂದೂ ಸ್ವಾಮೀಜಿ ದೂರಿನಲ್ಲಿ ಹೇಳಿರುವುದಾಗಿ ಮೂಲಗಳು ತಿಳಿಸಿವೆ.

'ಹೋಟೆಲ್ ಮ್ಯಾನೇಜ್‌ಮೆಂಟ್ ಕೋರ್ಸ್ ಮಾಡುತ್ತಿರುವುದಾಗಿ ಹೇಳಿದ್ದ ಯುವತಿ, ನನ್ನಿಂದ ₹ 2 ಲಕ್ಷ ಪಡೆದಿದ್ದಳು. ತನ್ನ ಹೆಸರಿನಲ್ಲಿ ಜಮೀನಿದ್ದು, ಅದನ್ನು ಮಠಕ್ಕೆ ಬರೆಯುವುದಾಗಿ ಹೇಳಿ, ಹಂತ ಹಂತವಾಗಿ ₹ 35 ಲಕ್ಷ ಪಡೆದಿದ್ದಳು.'

'ಜಮೀನು ದಾಖಲೆ ತರುವ ವೇಳೆ ತನ್ನ ಮೇಲೆ ಹಲ್ಲೆಯಾಗಿದ್ದು, ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ದಾಖಲಾಗಿರುವುದಾಗಿ ಯುವತಿ ಹೇಳಿದ್ದಳು. ಆಸ್ಪತ್ರೆ ಬಿಲ್ ಪಾವತಿಸಲು ಸಹ ಹಣ ಕೇಳಿದ್ದಳು. ಆಕೆ ಮೇಲೆ ಅನುಮಾನ ಬಂದಿತ್ತು. ಪರಿಚಯಸ್ಥರೊಬ್ಬರನ್ನು ಆಸ್ಪತ್ರೆಗೆ ಕಳುಹಿಸಿ ವಿಚಾರಿಸಿದಾಗ, ವರ್ಷಾ ಎಂಬುವವರು ಯಾರೂ ದಾಖಲಾಗಿಲ್ಲವೆಂಬುದು ಗೊತ್ತಾಗಿತ್ತು. ಅವಾಗಲೇ ವರ್ಷಾ ಸ್ನೇಹಿತೆ ಎನ್ನಲಾದ ಮಂಜುಳಾಗೆ ಕರೆ ಮಾಡಿದ್ದೆ. ₹ 55 ಲಕ್ಷ ಸಾಲ ಮಾಡಿ ವರ್ಷಾರನ್ನು ಆಸ್ಪತ್ರೆಯಿಂದ ಕರೆದುಕೊಂಡು ಬಂದಿರುವುದಾಗಿ ಹೇಳಿದ್ದರು. ಆಸ್ಪತ್ರೆಗೆ ನೀಡಿರುವ ಹಣ ನೀಡಬೇಕು. ಇಲ್ಲದಿದ್ದರೆ, ವರ್ಷಾ ಜೊತೆಗಿನ ಸಲುಗೆ ವಿಷಯವನ್ನು ಎಲ್ಲರಿಗೂ ಹೇಳಿ ಮರ್ಯಾದೆ ತೆಗೆಯುವುದಾಗಿ ಬೆದರಿಸಿದ್ದರು' ಎಂದು ಸ್ವಾಮೀಜಿ ದೂರಿನಲ್ಲಿ ಉಲ್ಲೇಖಿಸಿರುವುದಾಗಿ ಮೂಲಗಳು ಹೇಳಿವೆ.

ಮಠದಲ್ಲಿ ಗಲಾಟೆ: 'ವರ್ಷಾ ಕಡೆಯವರು ಎನ್ನಲಾದ ಮಂಜುಳಾ ಹಾಗೂ ಇತರರು ಮೇ 23ರಂದು ಮಠಕ್ಕೆ ಹೋಗಿ ಗಲಾಟೆ ಮಾಡಿದ್ದರು. ₹ 55 ಲಕ್ಷ ವಾಪಸು ಕೊಡುವಂತೆ ಸ್ವಾಮೀಜಿಯನ್ನು ಬೆದರಿಸಿದ್ದರು. ಇದಾದ ನಂತರವೇ ಸ್ವಾಮೀಜಿ ಠಾಣೆಗೆ ದೂರು ನೀಡಿದ್ದಾರೆ' ಎಂದು ಪೊಲೀಸ್ ಅಧಿಕಾರಿ ಮಾಹಿತಿ ನೀಡಿದರು.

'ಮಂಜುಳಾ ಹಾಗೂ ಇತರರಿಗೆ, ವರ್ಷಾ ಜೊತೆಗೆ ಏನು ಸಂಬಂಧ? ಎಂಬುದು ತನಿಖೆಯಿಂದ ತಿಳಿಯಬೇಕಿದೆ. ಸ್ವಾಮೀಜಿ ₹50 ಲಕ್ಷದವರೆಗೂ ಕಳೆದುಕೊಂಡಿರುವ ಅನುಮಾನವೂ ಇದೆ' ಎಂದರು.

ಉಸಿರುಗಟ್ಟಿಸಿ ಯುವತಿ ಹತ್ಯೆ: ಪ್ರಿಯಕರ ಪರಾರಿ

ಹೈದರಾಬಾದ್‌ನಿಂದ ಭೇಟಿಗೆಂದು ಬಂದು ಕೊಲೆ • ನೇಣು ಬಿಗಿಯಲು ಯತ್ನಿಸಿದ್ದ ಆರೋಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೀವನ್‌ಬಿಮಾನಗರ ಠಾಣೆ ವ್ಯಾಪ್ತಿಯಲ್ಲಿ ಆಕಾಂಕ್ಷಾ ಬಿದ್ಯಾಸರ್ (23) ಎಂಬುವವರನ್ನು ಉಸಿರುಗಟ್ಟಿಸಿ ಹತ್ಯೆ ಮಾಡಲಾಗಿದ್ದು, ಪ್ರಿಯಕರ ಅರ್ಪಿತ್ ಗುರಿಜಾಲ್ (29) ಕೃತ್ಯ ಎಸಗಿರುವ ಅನುಮಾನ ವ್ಯಕ್ತವಾಗಿದೆ.

'ಹೈದರಾಬಾದ್‌ನ ಆಕಾಂಕ್ಷಾ, ಬಿ.ಕಾಂ. ಪದವೀಧರರು. ನಗರದ ಮಾರುಕಟ್ಟೆ ವಿಸ್ತರಣೆ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಕೋಡಿಹಳ್ಳಿಯಲ್ಲಿರುವ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ಫ್ಲ್ಯಾಟ್‌ನಲ್ಲಿ ಸ್ನೇಹಿತೆ ಜೊತೆ ನೆಲೆಸಿದ್ದರು. ಇದೇ ಫ್ಲ್ಯಾಟ್‌ನಲ್ಲಿಯೇ ಸೋಮವಾರ ಆಕಾಂಕ್ಷಾ ಅವರನ್ನು ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿರುವ ಆರೋಪಿ ಅರ್ಪಿತ್ ಪರಾರಿಯಾಗಿದ್ದಾನೆ' ಎಂದು ಪೊಲೀಸರು ಹೇಳಿದರು.

'ದೆಹಲಿಯ ಅರ್ಪಿತ್, ಉದ್ಯೋಗ ಹುಡುಕಿಕೊಂಡು ನಗರಕ್ಕೆ ಬಂದಿದ್ದ. ಆಕಾಂಕ್ಷಾ ಕೆಲಸ ಮಾಡುತ್ತಿದ್ದ ಕಂಪನಿಗೆ ಸೇರಿದ್ದ. ಸಹೋದ್ಯೋಗಿಗಳಾಗಿದ್ದ ಇಬ್ಬರ ನಡುವೆ ಸ್ನೇಹ ಬೆಳೆದಿತ್ತು. ನಂತರ, ಇಬ್ಬರೂ ಪ್ರೀತಿಸಲಾರಂಭಿಸಿದ್ದರು. ಆರಂಭದಲ್ಲಿ ಒಂದೇ ಮನೆಯಲ್ಲಿ ಸಹ ಜೀವನ ನಡೆಸುತ್ತಿದ್ದರು' ಎಂದು ತಿಳಿಸಿದರು.


ಆಕಾಂಕ್ಷಾ


ಅರ್ಪಿತ್

ಹೈದರಾಬಾದ್‌ಗೆ ಸ್ಥಳಾಂತರ: 'ಕೆಲ ತಿಂಗಳ ಹಿಂದೆಯಷ್ಟೇ ನಗರ ತೊರೆದಿದ್ದ ಅರ್ಪಿತ್, ಹೈದರಾಬಾದ್‌ನಲ್ಲಿರುವ ಕಂಪನಿಗೆ ಕೆಲಸಕ್ಕೆ ಸೇರಿದ್ದ. ಒಂಟಿಯಾದ ಆಕಾಂಕ್ಷಾ, ಸ್ನೇಹಿತೆ ಜೊತೆ ಸೇರಿ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ಫ್ಲ್ಯಾಟ್‌ನಲ್ಲಿ ವಾಸವಿದ್ದರು. ಆರೋಪಿ ಆಗಾಗ ಆಕಾಂಕ್ಷಾ ಅವರನ್ನು ಭೇಟಿಯಾಗುತ್ತಿದ್ದ' ಎಂದು ಪೊಲೀಸರು ಹೇಳಿದರು.

'ಭೇಟಿ ವಿಚಾರವಾಗಿ ಇಬ್ಬರ ನಡುವೆ ಇತ್ತೀಚೆಗೆ ವೈಮನಸ್ಸು ಮೂಡಿತ್ತು. ಪ್ರತಿ ಬಾರಿ ಮೊಬೈಲ್‌ನಲ್ಲಿ ಮಾತನಾಡುವಾಗಲೂ ಇಬ್ಬರೂ ಜಗಳವಾಡುತ್ತಿದ್ದರು. ಈ ಬಗ್ಗೆ ಸ್ನೇಹಿತೆ ಹೇಳಿಕೆ ನೀಡಿದ್ದಾರೆ' ಎಂದರು.

ಹತ್ಯೆ ಬಳಿಕ ನೇಣು ಬಿಗಿಯಲು ಯತ್ನ: 'ಆರೋಪಿ ಅರ್ಪಿತ್, ಸೋಮವಾರ ಬೆಂಗಳೂರಿಗೆ ಬಂದಿದ್ದ. ಆಕಾಂಕ್ಷಾ ಜೊತೆ ನಗರದ ಹಲವೆಡೆ ಸುತ್ತಾಡಿದ್ದ. ಮಧ್ಯಾಹ್ನ ಇಬ್ಬರೂ ಫ್ಲ್ಯಾಟ್‌ಗೆ ಬಂದಿದ್ದರು. ಪುನಃ ಜಗಳ ಶುರುವಾಗಿದೆ. ಇದೇ ಸಂದರ್ಭದಲ್ಲಿ ಆರೋಪಿ, ಆಕಾಂಕ್ಷಾ ಮೇಲೆ ಹಲ್ಲೆ ಮಾಡಿ ಉಸಿರುಗಟ್ಟಿಸಿ ಕೊಂದಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

'ಕೊಲೆ ಬಳಿಕ ಮೃತದೇಹದ ಕುತ್ತಿಗೆಗೆ ಬಟ್ಟೆ ಕಟ್ಟಿದ್ದ ಆರೋಪಿ, ಫ್ಯಾನ್‌ಗೆ ನೇಣು ಬಿಗಿಯಲು ಯತ್ನಿಸಿದ್ದ. ಆದರೆ, ಅದು ಸಾಧ್ಯವಾಗಿರಲಿಲ್ಲ. ಹೀಗಾಗಿ, ಮೃತದೇಹವನ್ನು ನೆಲದ ಮೇಲೆಯೇ ಮಲಗಿಸಿ ಫ್ಲ್ಯಾಟ್‌ನಿಂದ ಪರಾರಿಯಾಗಿದ್ದಾನೆ. ಸ್ನೇಹಿತೆ ಸಂಜೆ ಫ್ಲ್ಯಾಟ್‌ಗೆ ವಾಪಸು ಬಂದಿದ್ದಾಗ ಮೃತದೇಹ ಕಂಡಿತ್ತು' ಎಂದು ತಿಳಿಸಿದರು.

'ಸ್ನೇಹಿತೆಯೇ ಠಾಣೆಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಹೋದ ಸಿಬ್ಬಂದಿ, ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆಂದು ಆಸ್ಪತ್ರೆಗೆ ಸಾಗಿಸಿದ್ದಾರೆ. 'ಮಗಳದ್ದು ಕೊಲೆ' ಎಂದು ತಂದೆ ದೂರು ನೀಡಿದ್ದಾರೆ. ಪರಾರಿಯಾಗಿರುವ ಆರೋಪಿ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ' ಎಂದು ಹೇಳಿದರು.

'ರಘುವರ್ಯತೀರ್ಥರ ಮಧ್ಯಾರಾಧನೆ'

ಪ್ರಜಾವಾಣಿ ವಾರ್ತೆ

ಗಂಗಾವತಿ (ಕೊಪ್ಪಳ ಜಿಲ್ಲೆ): ಉತ್ತರಾದಿ ಮಠದ ಪರಂಪರೆಯ ಪೂರ್ವ ಯತಿಗಳಾದ ರಘುವರ್ಯ ತೀರ್ಥರ ಮಧ್ಯಾರಾಧನೆ ಅಂಗವಾಗಿ ತಾಲ್ಲೂಕಿನ ಆನೆಗೊಂದಿ ಸಮೀಪದ ನವವೃಂದಾವನ ಗಡ್ಡೆಯಲ್ಲಿ ಮಂಗಳವಾರ ಸತ್ಯಾತ್ಮತೀರ್ಥ ಶ್ರೀಪಾದಂಗಳವರು ವಿಶೇಷ ಪೂಜೆ ನೆರವೇರಿಸಿದರು.

ಸತ್ಯಾತ್ಮತೀರ್ಥರು ರಘುವರ್ಯರ ಮೂಲ ವೃಂದಾವನಕ್ಕೆ ಪಂಚಾಮೃತ ಅಭಿಷೇಕ, ಪೂಜೆ, ಮಂಗಳಾರಾತಿ ನೆರವೇರಿಸಿದರು. ಭಕ್ತರಿಗೆ ತಪ್ತ ಮುದ್ರಧಾರಣೆ ನೀಡಿದರು. ಮೂಲ ರಾಮದೇವರಿಗೆ ಪೂಜೆ ನೆರವೇರಿಸಿದರು.

ಉತ್ತರಾದಿಮಠಕ್ಕೆ ಅವಕಾಶ: ಆರಾಧನೆ ನಡೆಸಲು ಉತ್ತರಾದಿಮಠದವರು, ಸುಧಾಸಮರ್ಪಣ ಸಂಸ್ಮರಣೋತ್ಸವ ನಡೆಸಲು ರಾಯರ ಮಠದವರು ಅನುಮತಿ ನೀಡುವಂತೆ ಜಿಲ್ಲಾಡಳಿತವನ್ನು ಕೋರಿದ್ದರು. ಪ್ರಕರಣ ನ್ಯಾಯಾಲಯದಲ್ಲಿ ಇರುವುದರಿಂದ ಅಲ್ಲಿಯೇ ಅನುಮತಿ ಪಡೆಯಬೇಕು ಎಂದು ಜಿಲ್ಲಾಡಳಿತ ಹೇಳಿದ್ದರಿಂದ ಉತ್ತರಾದಿಮಠವು ಧಾರವಾಡದ ಹೈಕೋರ್ಟ್ ಮೊರೆ ಹೋಗಿತ್ತು. ಹೈಕೋರ್ಟ್, ಆರಾಧನೆ ನಡೆಸಲು ಸೋಮವಾರ ಉತ್ತರಾದಿಮಠಕ್ಕೆ ಅವಕಾಶ ಕೊಟ್ಟಿತ್ತು.


ಆನೆಗೊಂದಿ ಸಮೀಪದ ನವವೃಂದಾವನದಲ್ಲಿ ಮಂಗಳವಾರ ಸತ್ಯಾತ್ಮತೀರ್ಥ ಶ್ರೀಪಾದಂಗಳವರು ಪೂಜೆ ಸಲ್ಲಿಸಿದರು

ಈ ವಿಷಯ ಗೊತ್ತಾಗುತ್ತಿದ್ದಂತೆ ಸಾಕಷ್ಟು ಸಂಖ್ಯೆಯಲ್ಲಿ ಭಕ್ತರು ಮಧ್ಯಾರಾಧನೆಗೆ ನವವೃಂದಾವನ ಗಡ್ಡೆಗೆ ಬಂದು ದರ್ಶನ ಪಡೆದರು. ಬುಧವಾರ ಉತ್ತರಾರಾಧನೆ ನಡೆಯಲಿದ್ದು, ಸತ್ಯಾತ್ಮತೀರ್ಥರೇ ಪೂಜೆ ನೆರವೇರಿಸುವರು.

ತೀತ್ವಾಲ್‌ನಲ್ಲಿ ಶಾರದಾಂಬೆ ಪ್ರಾಣ ಪ್ರತಿಷ್ಠೆ

ಪ್ರಜಾವಾಣಿ ವಾರ್ತೆ

ಶೃಂಗೇರಿ: ಕಾಶ್ಮೀರದ ತೀತ್ವಾಲ್‌ನ ಶಾರದಾ ದೇವಿ ದೇಗುಲದಲ್ಲಿ ಶೃಂಗೇರಿ ಶಾರದಾಂಬೆಯ ಪಂಚಲೋಹದ ಮೂರ್ತಿಗೆ ಪ್ರಾಣ ಪ್ರತಿಷ್ಠಾಪನೆ ಯನ್ನು ಸೋಮವಾರ ಶೃಂಗೇರಿ ಶಾರದಾ ಪೀಠದ ವಿಧುಶೇಖರಭಾರತೀ ಸ್ವಾಮೀಜಿ ನೇರವೇರಿಸಿದರು.

ಶಾರದಾಂಬೆ ಪ್ರತಿಷ್ಠಾಪನೆ ಮತ್ತು ಕುಂಭಾಭಿಷೇಕದ ಪ್ರಯುಕ್ತ ಭಾನುವಾರ ಮತ್ತು ಸೋಮವಾರ ವಿವಿಧ ಧಾರ್ಮಿಕ ಕಾರ್ಯಗಳು ನಡೆದವು. ವಿಧುಶೇಖರಭಾರತೀ ಸ್ವಾಮೀಜಿ ಶಾರದಾ ಪೀಠದ ಆರಾಧ್ಯ ದೈವ ಶ್ರೀಚಕ್ರ ಯಂತ್ರ ಸ್ಥಾಪನೆ ಮಾಡಿ, ವಿಶೇಷ ಪೂಜೆ ಸಲ್ಲಿಸಿ, ಕಲಶ ಪೂಜೆಯೊಂದಿಗೆ ಕುಂಭಾಭಿಷೇಕ ನೆರವೇರಿಸಿದರು.


ವಿಧುಶೇಖರ ಭಾರತಿ ಸ್ವಾಮೀಜಿ ಕಾಶ್ಮೀರದ ತೀತ್ವಾಲ್‌ನಲ್ಲಿರುವ ಶೃಂಗೇರಿ ಶಾರದಾಂಬೆ ಪಂಚಲೋಹದ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆ ನೇರವೇರಿಸಿದರು

ಶಾರದಾ ಮಠದ ಪುರೋಹಿತರಾದ ಶಿವಕುಮಾರ ಶರ್ಮ, ತಂತ್ರಿ ಸೀತಾರಾಮ ಶರ್ಮ ನೇತೃತ್ವದ ತಂಡ ಧಾರ್ಮಿಕ ಕಾರ್ಯ ನಡೆಸಿಕೊಟ್ಟಿತು.

ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

'ಅರಸು ಹಾದಿಯಲ್ಲೇ ಸರ್ಕಾರದ ಹೆಜ್ಜೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವರಾಜ ಅರಸು ಅವರು ಮುತ್ಸದ್ದಿ ರಾಜಕಾರಣಿ. ಮುಖ್ಯಮಂತ್ರಿಯಾಗಿ ಅವರು ಮಾಡಿದ ಕೆಲಸ ಎಲ್ಲ ರಾಜಕಾರಣಿಗಳಿಗೂ ಸ್ಫೂರ್ತಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿಧಾನಸೌಧದ ಆವರಣದಲ್ಲಿ ಮಂಗಳವಾರ ಮಾಜಿ ಮುಖ್ಯಮಂತ್ರಿ ದಿ.ದೇವರಾಜ ಅರಸು ಅವರ ಪುಣ್ಯಸ್ಮರಣೆ ಅಂಗವಾಗಿ ಅರಸು ಪ್ರತಿಮೆಗೆ ಮಾಲಾರ್ಪಣೆ ಮಾಡಿದ ನಂತರ ಅವರು ಮಾತನಾಡಿದರು.

ಸಾಮಾಜಿಕ ನ್ಯಾಯದ ಹರಿಕಾರರಾಗಿದ್ದ ಅರಸು ಹಲವು ಸಾಮಾಜಿಕ, ಕ್ರಾಂತಿಕಾರಿ ತೀರ್ಮಾನಗಳನ್ನು ಕೈಗೊಂಡಿದ್ದರು. ಭೂ ಸುಧಾರಣಾ ಕಾಯ್ದೆ, ಜೀತಪದ್ಧತಿ ಮುಕ್ತಿ, ಮಲಹೊರುವ ಪದ್ಧತಿ ನಿಷೇಧಕ್ಕೆ ಶ್ರಮಿಸಿದ್ದರು. ರೈತರ ಸಾಲ ವಿಮೋಚನಾ ಕಾಯ್ದೆ ಜಾರಿಗೆ ತಂದಿದ್ದರು. 'ಹಾವನೂರು ಆಯೋಗ' ರಚಿಸಿ ಹಿಂದುಳಿದ ಜಾತಿಗಳಿಗೆ ಮೀಸಲಾತಿ ಕಲ್ಪಿಸಿದ್ದರು. ಧ್ವನಿಯಿಲ್ಲದ ಜನರ ದನಿಯಾಗಿದ್ದರು. ರಾಜಕೀಯ ವ್ಯವಸ್ಥೆಯಲ್ಲಿಯೂ ಸಾಮಾಜಿಕ ನ್ಯಾಯ ತರಲು ಶ್ರಮಿಸಿದ್ದರು ಎಂದರು.

ಉಳುವವನೆ ಭೂ ಒಡೆಯ ಎಂಬ ಕ್ರಾಂತಿಕಾರಿ ತೀರ್ಮಾನಗಳನ್ನು ಮಾಡಿದ್ದರು. ಅವರ ಕೆಲಸಗಳನ್ನು ಮುಂದುವರಿಸಿಕೊಂಡು ಹೋಗುವ ಕೆಲಸವನ್ನು ನಮ್ಮ ಸರ್ಕಾರ ಮಾಡುತ್ತಿದೆ ಎಂದರು.

ಬಿಜೆಪಿ ರಾಜ್ಯ ಘಟಕದಲ್ಲಿ ಬದಲಾವಣೆ ಸಂಭವ

ನವದೆಹಲಿ: ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಸೋಲಿನ ಹಿಂದೆಯೇ, ಕರ್ನಾಟಕ ಸೇರಿದಂತೆ ಪಕ್ಷದ ಕೆಲ ರಾಜ್ಯಗಳ ಘಟಕಗಳಲ್ಲಿನ ಸಾಂಸ್ಥಿಕ ಬದಲಾವಣೆ ಕುರಿತು ಹಿರಿಯ ಮುಖಂಡರು ಚರ್ಚೆ ನಡೆಸಿದ್ದಾರೆ.

ಪಕ್ಷದ ಅಧ್ಯಕ್ಷ ಜೆ.ಪಿ.ನಡ್ಡಾ, ಗೃಹ ಸಚಿವ ಅಮಿತ್ ಶಾ, ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಸಭೆ ನಡೆಸಿ ಚರ್ಚಿಸಿದ್ದಾರೆ. 'ಜಾತಿ ಸಮೀಕರಣ ಮತ್ತು ಪಕ್ಷದ ಹಿತಾಸಕ್ತಿ ಗಮನದಲ್ಲಿಟ್ಟುಕೊಂಡು ಸಾಂಸ್ಥಿಕ ಬದಲಾವಣೆ ಆಗಲಿದೆ' ಎಂದು ಸಾಂಸ್ಥಿಕ ಬದಲಾವಣೆ ಪ್ರಕ್ರಿಯೆ ಉಸ್ತುವಾರಿಯ ಪ್ರಮುಖರೊಬ್ಬರು ತಿಳಿಸಿದ್ದಾರೆ.

ಕರ್ನಾಟಕವೂ ಸೇರಿ ವಿವಿಧ ಘಟಕಗಳಲ್ಲಿ ಬದಲಾವಣೆ ಆಗಲಿದೆ. ಉತ್ತರ ಪ್ರದೇಶ, ಆಂಧ್ರ ಪ್ರದೇಶ, ತೆಲಂಗಾಣದಲ್ಲಿಯೂ ಬದಲಾವಣೆ ಆಗಬಹುದು ಎಂದು ಮೂಲಗಳು ತಿಳಿಸಿವೆ.

ಕಾರ್ಪೆಂಟರ್‌ಗೆ 3 ವರ್ಷ ಜೈಲು

ಬೆಂಗಳೂರು: ಕಾರ್ಪೆಂಟರ್ ಕೆಲಸಕ್ಕಾಗಿ ಮನೆಯೊಂದಕ್ಕೆ ಹೋಗಿದ್ದ ವೇಳೆ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ್ದ ಪ್ರಬೀರ್ ಅದಕ್ (42) ಎಂಬಾತನಿಗೆ ಮೂರು ವರ್ಷ ಕಠಿಣ ಜೈಲು ಶಿಕ್ಷೆ ವಿಧಿಸಿ ನಗರದ 1ನೇ ತ್ವರಿತ ವಿಶೇಷ ನ್ಯಾಯಾಲಯ (ಎಫ್‌ಟಿಎಸ್‌ಸಿ) ಆದೇಶ ಹೊರಡಿಸಿದೆ. ಶಿಕ್ಷೆ ಜೊತೆ ₹ 25 ಸಾವಿರ ದಂಡವನ್ನೂ ವಿಧಿಸಲಾಗಿದೆ.

ನಿಧನ ವಾರ್ತೆ

ಸಿ.ನಂದನ

ಬೆಂಗಳೂರು: ಬಾಲಾಜಿ ನಗರದ ನಾಗರಿಕರ ಹಿತರಕ್ಷಣಾ ವೇದಿಕೆಯ ಕಾರ್ಯಕಾರಿ ಸಮಿತಿ ಸದಸ್ಯೆ ಸಿ.ನಂದನ (50) ಅವರು ಮಂಗಳವಾರ ನಿಧನರಾದರು.


ನಂದನ


ಮೃತರಿಗೆ ಪತಿ ಜಯಣ್ಣ ಹಾಗೂ ಪುತ್ರಿ ಇದ್ದಾರೆ. ಬಂಡೆಮಠ ರುದ್ರಭೂಮಿಯಲ್ಲಿ ಮಂಗಳವಾರ ಸಂಜೆ ಅಂತ್ಯ ಸಂಸ್ಕಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.


ನಗರದಲ್ಲಿ ಇಂದು

16ನೇ ವರ್ಷದ ವಾರ್ಷಿಕೋತ್ಸವ, ಕಾಲಭೈರವೇಶ್ವರಸ್ವಾಮಿ (ದೊಡ್ಡರಸಿನಕೆರೆ) ಬಸಪ್ಪ ದರ್ಶನ ಹಾಗೂ ಸಾಮೂಹಿಕ ಗಣಹೋಮ: ಪಂಚಾಮೃತ ಅಭಿಷೇಕ, ಹೋಮ– ಬೆಳಿಗ್ಗೆ 7ಕ್ಕೆ, ಮಹಾಮಂಗಳಾರತಿ ಪ್ರಸಾದ ವಿನಿಯೋಗ– ಮಧ್ಯಾಹ್ನ 12ಕ್ಕೆ, ಸಂಕಷ್ಟಹರ ಚತುರ್ಥಿಪೂಜೆ– ಸಂಜೆ 5.30ಕ್ಕೆ, ರಥೋತ್ಸವ– ಸಂಜೆ 6ಕ್ಕೆ, ಆಯೋಜನೆ: ಅಭಯಹಸ್ತ ಬಲಮುರಿ ಗಣಪತಿ ದೇವಸ್ಥಾನ ಸೇವಾ ಟ್ರಸ್ಟ್, ಸ್ಥಳ: ಜ್ಞಾನಭಾರತಿ ಬಡಾವಣೆ, ವಳಗೇರಹಳ್ಳಿ

ರಾಷ್ಟ್ರೀಯ ಸೇವಾ ಯೋಜನೆ **ವಿಶೇಷ ಶಿಬಿರದ ಉದ್ಘಾಟನೆ:** ಎಸ್.ಟಿ. ಸೋಮಶೇಖರ್, ಅತಿಥಿಗಳು: ಕೆ.ಆರ್. ನಿರ್ಮಲ್ ಕುಮಾರ್, ಎನ್.ಎಸ್. ವಿಜಯ, ಎಂ. ಕೃಷ್ಣದಾಸ್, ನಂದಿನಿ ಬಿ.ಎಲ್., ಅಧ್ಯಕ್ಷತೆ: ಬಿ.ಸಿ. ಶಿವಲಿಂಗೇಗೌಡ, ಆಯೋಜನೆ: ಬಿ.ಇ.ಎಸ್. ಕಾಲೇಜು, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ರಾಮೋಹಳ್ಳಿ, ಕೆಂಗೇರಿ ಹೋಬಳಿ, ಬೆಳಿಗ್ಗೆ 11

ಡಾ.ಬಿ.ಆರ್. ಅಂಬೇಡ್ಕರ್ ಅವರ ಜಯಂತಿ ಆಚರಣೆ: ಅಧ್ಯಕ್ಷತೆ: ಪಂಕಜ್ ಕುಮಾರ್ ಪಾಂಡೆ, ಅತಿಥಿಗಳು: ಗೌರವ್ ಗುಪ್ತ, ಎಚ್.ಎನ್. ನಾಗಮೋಹನದಾಸ್, ಆರ್. ನಾಗರಾಜ, ನರೇಂದ್ರ ಕುಮಾರ್, ಕೃಷ್ಣಗೌಡ ತಾಯಣ್ಣವರ, ಆಯೋಜನೆ: ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಕ.ವಿ.ನಿ.ನಿ. ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ನೌಕರರ ಸಂಘ, ಸ್ಥಳ: ಕೆ.ಇ.ಬಿ. ಎಂಜಿನಿಯರ್ಸ್ ಅಸೋಸಿಯೇಷನ್ ಸಭಾಂಗಣ, ರೇಸ್‌ಕೋರ್ಸ್ ರಸ್ತೆ, ಮಧ್ಯಾಹ್ನ 3





ಮೀನಿಗೆ ಕಂಡೀತೆ ಕನ್ನಡಿಯ ಬಿಂಬ!


ಕನ್ನಡಿಯಲ್ಲಿನ ತನ್ನ ಬಿಂಬವನ್ನು ಕಂಡ ಮೀನು ಅದು ತನ್ನದೇ ಚಿತ್ರವೆಂದು ಗುರುತಿಸಿತಂತೆ! ಹಾಗೆಯೇ ಅಪರಿಚಿತ ದೇಹದೊಂದಿಗೆ ಜೋಡಿಸಿದ್ದ ತನ್ನದೇ ಮುಖವನ್ನೂ ಗುರುತಿಸಿತಂತೆ. ಆದರೆ ತನ್ನದೇ ದೇಹದೊಂದಿಗೆ ಬೇರೆ ಮುಖವಿದ್ದ ಚಿತ್ರವನ್ನು ಮಾತ್ರ ಗುರುತಿಸಲು ಸಾಧ್ಯವಾಗಲಿಲ್ಲ.

ಅಮೃತೇಶ್ವರಿ ಬಿ.

ಮಾನವನು ಇಡೀ ಜೀವಸಂಕುಲದ ಒಂದು ವಿಶೇಷ ಜೀವಿ ಎಂದರೆ ಅತಿಶಯೋಕ್ತಿಯೇನಲ್ಲ. ಆಹಾರಶೈಲಿ, ಆಹಾರ ಉತ್ಪಾದನೆ, ಉಡುಗೆ-ತೊಡುಗೆ, ವಾಸಕ್ಕೆ ಮನೆ, ಸಾರಿಗೆ-ಸಂಪರ್ಕ – ಹೀಗೆ ಹಲವು ಸೌಕರ್ಯಗಳನ್ನು ಮಾಡಿಕೊಂಡು ಜೀವನದ ಗುಣಮಟ್ಟವನ್ನು ಸುಧಾರಿಸಿಕೊಳ್ಳುತ್ತಲೇ ಬರುತ್ತಿರುವ ಮನುಷ್ಯನಿಗೆ ಮತ್ತಾವ ಪ್ರಾಣಿ ಸಾಟಿಯಾಗಬಲ್ಲದು ಹೇಳಿ? ಜೊತೆಗೆ ನಿರಂತರ ಜ್ಞಾನಾರ್ಜನೆಯಲ್ಲಿ ತೊಡಗಿ, ಹೊಸ ಹೊಸ ವಿದ್ಯೆಗಳನ್ನು ಕಲಿತು ತಂತ್ರಜ್ಞಾನಗಳನ್ನು ಆವಿಷ್ಕಾರ ಮಾಡುತ್ತಲೇ ತನ್ನ ಬುದ್ಧಿಶಕ್ತಿಯನ್ನು ಮೆರೆಯುತ್ತಿದ್ದಾನೆ. ಇದಕ್ಕೆ ಕಾರಣ ಮನುಷ್ಯನಿಗೆ ದಕ್ಕಿರುವ ಮೆದುಳು ಹಾಗೂ ಅದರ ವಿಶೇಷ ಸಾಮರ್ಥ್ಯ.

ಇತರೆ ಪ್ರಾಣಿಗಳಂತೆಯೇ ಊಟ, ನಿದ್ರೆ, ಸಂತಾನೋತ್ಪತ್ತಿ, ಮರಣ ಎನ್ನುವ ನಾಲ್ಕೇ ಹಂತಗಳಲ್ಲಿ ಜೀವನ ಕಳೆಯುತ್ತಿದ್ದ ಮನುಷ್ಯನ ಮೆದುಳು ವಿಕಾಸವಾಗುತ್ತಲೇ ತನ್ನ ಬಗ್ಗೆ ತಾನು ಅರಿಯುವುದು ಕಲಿತ, ತಾನು ಹೇಗೆ ಕಾಣಿಸುತ್ತೇನೆ ಎಂದು ಕಲ್ಪಿಸಿಕೊಂಡ. ತನ್ನ ಅಂದಾಜನ್ನು ಖಚಿತಪಡಿಸಿಕೊಂಡ. ಆಗಲೇ ಜಗತ್ತಿಗೆ ದರ್ಪಣದ ದರ್ಶನವಾಯಿತು. ಈ ರೀತಿಯ ಮೆದುಳಿನ ನಿರಂತರ ವಿಕಾಸವೇ ನಮ್ಮ ಇಂದಿನ ಅದ್ಭುತ ಜೀವನಶೈಲಿಗೆ ಹಾಗೂ ಬೇರೆಲ್ಲಾ ಪ್ರಾಣಿಗಳ ಮೇಲೆ ನಿಯಂತ್ರಣವನ್ನು ಹೊಂದಲು ಕಾರಣ.

ಮನುಷ್ಯನ ಕಲಿಕಾ ಹಾಗೂ ಕಲ್ಪನಾ ಸಾಮರ್ಥ್ಯ ಬೇರೆ ಪ್ರಾಣಿಗಳಿಗಿಂತ ವಿಶೇಷ, ಭಿನ್ನ ಹಾಗೂ ಸಂಕೀರ್ಣ; ಅವನು ವಿಜ್ಞಾನವನ್ನು ಕಲಿತ, ತಂತ್ರಜ್ಞಾನಗಳನ್ನು ಆವಿಷ್ಕರಿಸಿದ. ಬದುಕು ಸುಗಮವಾಯಿತು. ಮುಂದೆ ಇಷ್ಟೆಲ್ಲಾ ಯೋಚಿಸಬಲ್ಲ ಮನುಷ್ಯನಿಗೆ ತನ್ನಂತೆಯೇ ಯೋಚಿಸುವ, ಕಲ್ಪಿಸಿಕೊಳ್ಳಬಲ್ಲ ಹಾಗೂ ಕಲಿಯುವ ಶಕ್ತಿ ಹಾಗೂ ಮೆದುಳು ಬೇರಾವ ಜೀವಿಗಿದೆ ಎಂದು ತಿಳಿಯುವ ಕುತೂಹಲ ಉಂಟಾಯಿತು. ಹಾಗಾಗಿ ಬೇರೆ ಬೇರೆ ಪ್ರಾಣಿಗಳನ್ನು ಅಧ್ಯಯನ ಮಾಡತೊಡಗಿದ. ಆಗ ತಿಳಿಯಿತು ಮಾನವನ ಹಳೆಯ ನೆಂಟರಾದ ಚಿಂಪಾಂಜಿ-ಮಂಗಗಳಿಗೂ ತಾವು ಹೇಗಿದ್ದೇವೆ ಎಂದು ಕಲ್ಪಿಸಿಕೊಳ್ಳುವ, ತಮ್ಮನ್ನು ಗುರುತಿಸಿಕೊಳ್ಳುವ ಸಾಮರ್ಥ್ಯವಿದೆ ಎಂದು. ಅರ್ಥಾತ್ ಅವುಗಳೂ ಕನ್ನಡಿಯಲ್ಲಿ ಕಾಣುವ ಬಿಂಬ ತನ್ನದೇ ಎಂದು ಅರ್ಥಮಾಡಿಕೊಳ್ಳಬಲ್ಲವಂತೆ. ಕನ್ನಡಿಯಲ್ಲಿ ನೋಡುವ ಮುಂಚೆ ಬಹುತೇಕ ತಾನು ಹೇಗಿದ್ದೇನೆ ಎನ್ನುವ ಅಂದಾಜು ನಮಗಿರುತ್ತದೆ. ಇತರೆ ಪ್ರಾಣೀಗಳಿಗೂ ಇರುತ್ತದೆಯೇ? ಒಂದು ವೇಳೆ ಅವುಗಳಿಗೆ ದರ್ಪಣ ಹಿಡಿದರೆ ತಮ್ಮನ್ನು ನೋಡಿಕೊಂಡು ಯಾರೆಂದು ಭಾವಿಸುತ್ತವೆ? ಹೇಗೆ ಪ್ರತಿಕ್ರಿಯಿಸುತ್ತವೆ? ಈ ಪ್ರಶ್ನೆಗಳು ಜಪಾನಿನ ಒಸಾಕ ವಿಶ್ವವಿದ್ಯಾಲಯದ ಸಂಶೋಧಕರ ಕುತೂಹಲವಾಗಿತ್ತು.



ತಮ್ಮ ಪ್ರಶ್ನೆಗಳಿಗೆ ಉತ್ತರ ಹುಡುಕಲು ಹೊರಟ ಮೆಸನೋರಿ ಕೊಡ ಮತ್ತು ಸಂಗಡಿಗರು ಆರಿಸಿಕೊಂಡಿದ್ದು ಲ್ಯಾಬ್ರೊಯಿಡೀಸ್ ಡಿಮಿಡಿಯೇಟಸ್ ಎನ್ನುವ ಮಡಿವಾಳ ಮೀನು. ಇವುಗಳಿಗೆ ಮನುಷ್ಯರಂತೆಯೇ ಕನ್ನಡಿ ನೋಡಿದಾಗ ಅಲ್ಲಿ ಕಾಣುವುದು ತಮ್ಮದೇ ಚಿತ್ರವೆಂದು ತಿಳಿಯುತ್ತದಂತೆ. ಇತರೆ ಪ್ರಾಣಿಗಳು ಹೇಗೆ ಅವುಗಳ ಪ್ರತಿಬಿಂಬವನ್ನು ಗುರುತಿಸಬಲ್ಲವು ಎನ್ನುವುದನ್ನು ತಮ್ಮ ಸಂಶೋಧನೆಯ ಮೂಲಕ ಸಾಬೀತುಪಡಿಸಿದ್ದಾರೆ ಕೊಡ ಮತ್ತು ಸಂಗಡಿಗರು.

ಮನುಷ್ಯರು ಭಾವಚಿತ್ರವನ್ನು ಅದು ತಮ್ಮದೋ ಅಥವಾ ಇತರದ್ದೋ ಎಂದು ಬಹಳ ಸುಲಭವಾಗಿ ಪತ್ತೆ ಮಾಡಬಲ್ಲರು. ಮನದಲ್ಲಿ ಈಗಾಗಲೇ ದಾಖಲಾಗಿರುವ ಅಂಶಗಳನ್ನು ಅಂದಾಜಿಸಿ ಕನ್ನಡಿ ಅಥವಾ ಛಾಯಾಚಿತ್ರದಲ್ಲಿರುವ ಮುಖಗಳನ್ನು ಗುರುತಿಸಬಲ್ಲರು. ಹಾಗಾಗಿ ಈ ಭಾವಚಿತ್ರಗಳು ಅಥವಾ ಚಿತ್ರಪಟಗಳು ಪ್ರಾಣಿಗಳ ಮೆದುಳಿನ ಗ್ರಹಿಕೆ, ಕಲಿಕೆ, ಜ್ಞಾಪಕಶಕ್ತಿ, ಆಲೋಚನಾ ಶಕ್ತಿ, ಭಾವನೆಗಳು ಮತ್ತು ಅರಿವಿನ ಮಟ್ಟವನ್ನು ಪರೀಕ್ಷಿಸಲು ಉತ್ತಮ ಸಾಧನಗಳಾಗುತ್ತವೆ. ಆದರೆ ವಿಡಿಯೊಗಳಂತೆ ಇವುಗಳಲ್ಲಿ ಚಲನೆ ಇಲ್ಲದಿರುವುದು ಪ್ರಾಣಿಗಳಿಗೆ ಮೊದಲ ಹಂತದಲ್ಲಿ ಅದು ತಾವೇ ಎಂದು ಗುರುತಿಸುವುದು ಕಷ್ಟವಾಗಬಹುದು ಹಾಗೂ ಅವುಗಳ ಪ್ರತಿಕ್ರಿಯೆಯನ್ನು ಅರಿಯುವುದು ನಮಗೂ ಅಸಾಧ್ಯ. ಆದರೆ ಡಿಮಿಡಿಯೇಟಸ್ ಮಡಿವಾಳ ಮೀನುಗಳು ಬೇರೆ ಮೀನುಗಳು, ಕೆಲವೊಮ್ಮೆ ಮನುಷ್ಯರ ಮುಖಗಳನ್ನು ಆಗಿಂದಾಗ್ಗೆ ನೋಡಿದ್ದೇ ಆದರೆ ಸುಲಭವಾಗಿ ಪತ್ತೆ ಮಾಡುತ್ತವೆಯಂತೆ. ಹಾಗಾಗಿ ಇವು ಮನುಷ್ಯನಲ್ಲದೇ ಇತರೆ ಯಾವ ಪ್ರಾಣಿಗಳು ಬಿಂಬವನ್ನು ನೋಡಿದಾಗ ಹೇಗೆ ವರ್ತಿಸುತ್ತವೆ ಎಂದು ಅಧ್ಯಯನ ಮಾಡಲು ಉತ್ತಮ ಮಾದರಿಗಳಾಗಿವೆಯಂತೆ.

ಇದನ್ನು ಖಚಿತಪಡಿಸಿಕೊಳ್ಳಲು ಕೊಡ ಮತ್ತು ಸಂಗಡಿಗರು ಈ ಮೀನುಗಳಿಗೆ ಕನ್ನಡಿ ಪರೀಕ್ಷೆಯನ್ನು ನೀಡಿದ್ದಾರೆ. ಇವು ಅತ್ಯುತ್ತಮ ಅಂಕಗಳನ್ನು ಪಡೆದು ಪರೀಕ್ಷೆಯಲ್ಲಿ ಉತ್ತೀರ್ಣವೂ ಆಗಿವೆ. ಮೊದಲಿಗೆ ಸುಮಾರು 26 ಹೆಣ್ಣು ಮಡಿವಾಳ ಮೀನುಗಳನ್ನು ಹಿಡಿದು ತಂದು ಪ್ರತಿಯೊಂದನ್ನೂ ಪ್ರತ್ಯೇಕ ಅಕ್ವೇರಿಯಂನಲ್ಲಿ ಇರಿಸಿದ್ದಾರೆ. ಒಂದು ವಾರದ ನಂತರ ಅಂದರೆ ಅವು ಗಾಜಿನ ಪೆಟ್ಟಿಗೆಗೆ ಹೊಂದಿಕೊಂಡ ಮೇಲೆ ಪ್ರಯೋಗಗಳನ್ನು ಆರಂಭಿಸಿದ್ದಾರೆ. ಗಾಜಿನ ಪೆಟ್ಟಿಗೆಯ ಒಂದು ಕಡೆಗೆ ಉತ್ತಮ ಗುಣಮಟ್ಟದ ಕನ್ನಡಿಯನ್ನು ಇರಿಸಿಲಾಗಿತ್ತು. ಅವುಗಳ ಎಲ್ಲಾ ಚಲನವಲನಗಳನ್ನು ವೀಡಿಯೋ ಮಾಡಿಕೊಳ್ಳಲಾಯಿತು. ಅವುಗಳ ಪ್ರತಿಕ್ರಿಯೆಯನ್ನು ಗಮನಿಸಿದವರೇ ಮೂರು ಹಂತಗಳಲ್ಲಿ ವಿವರಿಸುತ್ತಾರೆ ಕೊಡ. ಮೊದಲಿಗೆ, ಪ್ರತಿಬಿಂಬವನ್ನು ಕಂಡೊಡನೆ ಆಕ್ರಮಣಕಾರಿಯಾಗಿ ವರ್ತಿಸಿದುವಂತೆ. ಮತ್ತೊಂದು ಮೀನು ತನ್ನ ಜಾಗಕ್ಕೆ ಬಂದಿದೆ ಎನ್ನುವಂತೆ ಕಚ್ಚಿ, ದಾಳಿಮಾಡಲು ಮುನ್ನುಗ್ಗಿದುವಂತೆ. ಸ್ವಲ್ಪ ಸಮಯದ ನಂತರ ಶಾಂತವಾಗಿ ನಾವು ಹೊಸಬರನ್ನು ನೋಡಿ ಆಶ್ಚರ್ಯ ಅಥವಾ ವಿಚಿತ್ರವಾಗಿ ನೋಡುವಂತೆ, ವಿಲಕ್ಷಣವಾಗಿ ವರ್ತಿಸಿದವಂತೆ. ಕೊನೆಗೆ ತಮ್ಮದೇ ಬಿಂಬವಿರಬಹುದೇನೋ ಎನ್ನವುದು ಅರ್ಥವಾದಂತೆ ನಡೆದುಕೊಳ್ಳುತ್ತಿದ್ದುವಂತೆ. ಸುಮಾರು ಐದು ದಿನಗಳಾಗುತ್ತಿದ್ದಂತೆ ಏನೋ ಅರಿವಿಗೆ ಬಂದಂತೆ ದಾಳಿ ಮಾಡುವ ಹಾಗೂ ವಿಲಕ್ಷಣ ವರ್ತನೆಯನ್ನು ನಿಲ್ಲಿಸಿ, ಪುಟ್ಟಮಕ್ಕಳು ಕನ್ನಡಿಯ ಮುಂದೆ ನಲಿಯುವ ಹಾಗೆ ತಮ್ಮದೇ ಮುಖ, ದೇಹ, ಹಾವಭಾವಗಳನ್ನು ಗಮನಿಸತೊಡಗಿದುವಂತೆ. ಎಂಟನೇ ದಿನ 'ಮಿರರ್ ಮಾರ್ಕ್ ಟೆಸ್ಟ್' ಎನ್ನುವ ಮತ್ತೊಂದು ಪರೀಕ್ಷೆಗೆ ಮೀನುಗಳನ್ನು ಒಡ್ಡಲಾಯಿತು. ಅವುಗಳ ಕೊರಳಿಗೆ ಕಂದುಬಣ್ಣದ ಎಲಾಸ್ಟಿಕ್ ಪಟ್ಟಿಯೊಂದನ್ನು ಕಟ್ಟಿ ಪುನಃ ಕನ್ನಡಿಯಲ್ಲಿನ ಅವುಗಳ ಪ್ರತಿಬಿಂಬಕ್ಕೆ ಹೇಗೆ ಪ್ರತಿಕ್ರಿಯಿಸುತ್ತವೆ ಎಂದು ನೋಡಿದರು. ಇದರ ಫಲಿತಾಂಶಗಳ ಪ್ರಕಾರವೂ ಮೀನುಗಳು ತಮ್ಮ ಸ್ವಪರಿಚಯವನ್ನು ಮರೆತಿರಲಿಲ್ಲ. ವಿಚಿತ್ರವಾಗಿ ವರ್ತಿಸಲಿಲ್ಲ. ಅರ್ಥಾತ್ ಪರೀಕ್ಷೆಯಲ್ಲಿ ಮೀನುಗಳು ಉತ್ತೀರ್ಣ!

ಇದುವರೆಗೂ ಪ್ರತ್ಯೇಕವಾಗಿರಿಸಿದ್ದ ಮೀನುಗಳಿಗೆ ಒಂಬತ್ತನೇ ದಿನ ಅರಿವಳಿಕೆಯನ್ನು ನೀಡಿ, ಅವುಗಳ ಸಾಕಷ್ಟು ಛಾಯಾಚಿತ್ರಗಳನ್ನು ಕ್ಲಿಕ್ಕಿಸಿಕೊಂಡರು. ಅವುಗಳಿಂದ ನಂತರ ನಾಲ್ಕು ರೀತಿಯ ಭಾವಚಿತ್ರಗಳನ್ನು ತಯಾರಿಸಿದರು. ಪರೀಕ್ಷೆಗೊಳಪಡಿಸಿದ ಅದೇ ಮೀನುಗಳ ಸಾಮಾನ್ಯ ಚಿತ್ರ, ಪರಿಚಯವಿಲ್ಲದ ಒಂದು ಮೀನಿನ ಮುಖಕ್ಕೆ ಪರಿಚಯವಿಲ್ಲದ ಮತ್ತೊಂದು ಮೀನಿನ ದೇಹ, ಪರೀಕ್ಷೆ ಎದುರಿಸಿದ ಒಂದು ಮೀನಿನ ಮುಖ ಹಾಗೂ ಅಪರಿಚಿತ ದೇಹ ಮತ್ತು ಅಪರಿಚಿತ ಮುಖ ಹಾಗೂ ಪರಿಚಿತ ದೇಹ. ಹೀಗೆ ವಿವಿಧ ರೀತಿಯ ಛಾಯಾಚಿತ್ರಗಳು ತಯಾರಾದವು. ಈಗ ಅವನ್ನು ಪರೀಕ್ಷೆಗೆ ಒಳಪಡುವ ಮೀನಿರುವ ಗಾಜಿನ ಪೆಟ್ಟಿಗೆಯ ಮೇಲೆ ಹೊರಗಡೆ ಮೇಲ್ಭಾಗದಲ್ಲಿ ಇರಿಸಿದರು. ನಾಲ್ಕೂ ಬಗೆಯ ಛಾಯಾಚಿತ್ರಗಳನ್ನು ನಿಗದಿತ ಅವಧಿಯ ಅಂತರದಲ್ಲಿ ಬದಲಾಯಿಸಿ ಮೀನಿಗೆ ಪ್ರದರ್ಶಿಸಲಾಯಿತು. ಆಗ ಮೀನು ತನ್ನ ಹಾಗೂ ಅಪರಿಚಿತ ಮೀನಿನ ಚಿತ್ರಗಳನ್ನು ಗುರುತಿಸುವುದನ್ನು ಸಂಶೋಧಕರು ಗಮನಿಸಿದ್ಧಾರೆ. ಈಗಾಗಲೇ ಕನ್ನಡಿಯಲ್ಲಿನ ತನ್ನ ಬಿಂಬವನ್ನು ಕಂಡಿದ್ದ ಮೀನು ತನ್ನದೇ ಚಿತ್ರವೆಂದು ಗುರುತಿಸಬಲ್ಲದು ಎಂದು ಅಭಿಪ್ರಾಯ ಪಟ್ಟಿದ್ದರು. ಅವು ಹಾಗೆಯೇ ನಡೆದುಕೊಂಡವಂತೆ ಹಾಗೂ ಅಪರಿಚಿತ ದೇಹದೊಂದಿಗೆ ಜೋಡಿಸಿದ್ದ ತನ್ನದೇ ಮುಖವನ್ನು ಗಮನಿಸಿದಾಗಲೂ ಅವು ಪರಿಚಯವಿದ್ದಂತೆಯೇ ವರ್ತಿಸಿದವಂತೆ. ಆದರೆ ತನ್ನದೇ ದೇಹದೊಂದಿಗೆ ಬೇರೆ ಮುಖವಿದ್ದ ಚಿತ್ರವನ್ನು ಅವುಗಳಿಗೆ ಗುರುತಿಸಲು ಸಾಧ್ಯವಾಗದೇ ಸೋತುಬಿಟ್ಟವಂತೆ. ಅರ್ಥಾತ್, ಅವುಗಳ ಮೆದುಳು ಮನುಷ್ಯನ ಮೆದುಳಿನಷ್ಟು ವಿಕಾಸವಾಗಿಲ್ಲವಾದ್ದರಿಂದ ಸಂಯುಕ್ತವಾದ ಸಂಕೀರ್ಣ ಚಿತ್ರಗಳನ್ನು ಗುರುತಿಸಾಗಲಿಲ್ಲ ಎನ್ನವುದು ಕೊಡ ಅವರ ಅಭಿಪ್ರಾಯ.

ನಮ್ಮಂತೆ ಅವುಗಳಿಗೆ ಸ್ವ-ಅರಿವಿಲ್ಲದಿದ್ದರೂ ಪ್ರತಿಬಿಂಬದಲ್ಲಿ ಕಾಣುವ ತನ್ನ ಹಾಗೂ ಪರಿಚಿತ ಮುಖಗಳನ್ನು ಅವು ನೆನಪಿಟ್ಟುಕೊಳ್ಳಬಲ್ಲವು, ತನ್ನದೇ ಎಂದು ಅರ್ಥಮಾಡಿಕೊಳ್ಳಬಲ್ಲವು. ಆದರೆ ಇವುಗಳ ಸ್ವ-ಅರಿವಿನ ಸಾಮರ್ಥ್ಯದ ಬಗ್ಗೆ ಇನ್ನೂ ತಿಳಿಯುವುದಿದೆ. ಹಾಗಾಗಿ ಇದು ಇತರೆ ಪ್ರಾಣಿಗಳ ಮೆದುಳಿನ ಗ್ರಹಿಕಾ ಸಾಮರ್ಥ್ಯವನ್ನು ಅಧ್ಯಯನ ಮಾಡಲು ಅತ್ಯುತ್ತಮ ಅಡಿಪಾಯವಾಗಲಿದೆ ಎನ್ನುತ್ತಾರೆ, ಕೊಡ. ಅಂತೂ ಹೀಗೆ ದಿನೇ ದಿನೇ ಯಾವ ಯಾವ ಪ್ರಾಣಿಗಳ ಮೆದುಳಲ್ಲಿ ಕಲಿಯುವ, ಅರಿಯುವ ಹಾಗೂ ನೆನಪಿಡುವ ಶಕ್ತಿ ಇದೆ ಎನ್ನುವುದು ನಮಗೆ ತಿಳಿಯುತ್ತಲಿದೆ. ಈ ವಿಕಸನ ಕ್ರಿಯೆ ನಿರಂತರವೂ ಹೌದು. ಹಾಗೊಂದು ವೇಳೆ ನಾವಲ್ಲದೇ ಬೇರೆ ಪ್ರಾಣಿಗಳೂ ಬುದ್ಧಿವಂತರಾಗಿಬಿಟ್ಟರೆ, ಆಲೋಚನೆ ಮಾಡುವಂತಾಗಿಬಿಟ್ಟರೆ ಮನುಷ್ಯನು ನಿಸರ್ಗದ ಎಲ್ಲಾ ಜೀವಿಗಳ ಮೇಲಿಟ್ಟಿರುವ ಹಿಡಿತಕ್ಕೆ ಏನಾದೀತೋ?

ಈ ಸಂಶೋಧನೆಯು ಇತ್ತೀಚೆಗೆ 'ಪ್ರೊಸೀಡಿಂಗ್ಸ್ ಆಫ್ ನ್ಯಾಷನಲ್ ಅಕಾಡೆಮಿ ಆಫ್ ಸೈನ್ಸಸ್'ನಲ್ಲಿ ವರದಿಯಾಗಿತ್ತು.

ಮೊಟ್ಟೆ: ಗಂಡೋ? ಹೆಣ್ಣೋ?

ಕೊಳ್ಳೇಗಾಲ ಶರ್ಮ

ಮೊಟ್ಟೆಯಲ್ಲಿ ಗಂಡು, ಹೆಣ್ಣು ಎಂದಿರಾ?

ಮೊಟ್ಟೆ ಎಂದರೆ ಇನ್ನೂ ಹುಟ್ಟದ ಕೋಳಿ ಅಥವಾ ಹುಂಜವಷ್ಟೆ. ಅದರೊಳಗೆ ಇರುವುದು ಕೋಳಿಯೋ ಹುಂಜವೋ ಎಂದು ತಿಳಿಯುವುದು, ಮೊಟ್ಟೆ ಮೊದಲೋ ಕೋಳಿ ಮೊದಲೋ ಎಂಬುದನ್ನು ಅರ್ಥ ಮಾಡಿಕೊಂಡವರಿಗೂ ಬಹುಶಃ ಸಾಧ್ಯವಾಗಲಿಕ್ಕಿಲ್ಲ! ಮೊಟ್ಟೆ ಒಡೆದ ಮೇಲಷ್ಟೆ ಅದು ಕೋಳಿಯೋ ಹುಂಜವೋ ಎನ್ನುವುದನ್ನು ತಿಳಿಯಬಹುದು. ಈ ಸಂಕಟ ಕೋಳಿ ಹಾಗೂ ಮೊಟ್ಟೆ ಉದ್ಯಮಕ್ಕೆ ಸದಾ ಸವಾಲು. ಅಂತಹ ಸವಾಲಿಗೆ ಉತ್ತರ ಎನ್ನುವ ಹಾಗೆ ಅಮೆರಿಕೆಯ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಎಂಜಿನಿಯರ್‌ಗಳು ಒಂದು ಹೊಸ ತಂತ್ರವನ್ನು ರೂಪಿಸಿದ್ದಾರಂತೆ. ಮೊಟ್ಟೆಯಿಂದ ಸೂಸುವ ಗಾಳಿಯನ್ನೇ ಮೂಸಿ ಅದು ಗಂಡೋ ಹೆಣ್ಣೋ ಎಂದು ನಿರ್ಧರಿಸಬಹುದಂತೆ.

ಮೊಟ್ಟೆ ಒಂದು ಸಹಜವಾದ ಪ್ಯಾಕೇಜಷ್ಟೆ. ಬೆಳೆಯುತ್ತಿರುವ ಕೋಳಿಯನ್ನೋ ಹುಂಜವನ್ನೋ ಭದ್ರವಾದ, ಆದರೆ ಗಾಳಿ, ತೇವಾಂಶ ಸಂಗ್ರಹವಾಗದಂತಹ ರಂಧ್ರಭರಿತ ಹೊದಿಕೆಯೊಳಗೆ ಪ್ಯಾಕ್ ಮಾಡಿದ ವಸ್ತುವೇ ಮೊಟ್ಟೆ. ಈ ಹೊದಿಕೆಯನ್ನು ಒಡೆದರೆ ಒಳಗಿರುವ ಜೀವ ಬದುಕುವುದಿಲ್ಲ ಎನ್ನುವುದು ಎಲ್ಲರಿಗೂ ಗೊತ್ತಷ್ಟೆ. ಹಾಗಿರುವಾಗ, ಒಳಗಿರುವ ಭ್ರೂಣವು ಹುಂಜವಾಗಿ ಬೆಳೆಯುತ್ತದೆಯೋ, ಅಥವಾ ಕೋಳಿಯಾಗಿ ಬೆಳೆಯುತ್ತದೆಯೋ ಎನ್ನುವುದು ಚಿದಂಬರರಹಸ್ಯವೇ ಸರಿ. ಈ ಗುಟ್ಟನ್ನು ರಟ್ಟು ಮಾಡಲು ಸದ್ಯಕ್ಕೆ ಮೊಟ್ಟೆಯೊಳಗೆ ಸೂಜಿ ಚುಚ್ಚಿ, ರಸವನ್ನು ಹೀರಿ, ಅದರಲ್ಲಿರುವ ಡಿಎನ್ಎಯನ್ನು ವಿಶ್ಲೇಷಿಸುವುದೊಂದೇ ಹಾದಿ. ಇದು ಭ್ರೂಣಕ್ಕೂ ಅಪಾಯಕಾರಿ; ಜೊತೆಗೆ ಉತ್ತರ ದೊರೆಯುವುದರೊಳಗೆ ಮೊಟ್ಟೆ ಸಾಕಷ್ಟು ಬಲಿತಿರಲೂ ಬಹುದು. ಹೀಗಾಗಿ ತಕ್ಷಣವೇ ಮೊಟ್ಟೆಯನ್ನು ಗಂಡೋ ಹೆಣ್ಣೋ ಎಂದು ಗುರುತಿಸುವ ತಂತ್ರಕ್ಕೆ ಬಹಳ ಬೇಡಿಕೆ ಇದೆ. ಕಾರಣ ಇಷ್ಟೆ. ಮೊಟ್ಟೆ ಇಡುವ ಉದ್ಯಮಕ್ಕೆ ಬೇಕಾದ ಹೆಣ್ಣು ಕೋಳಿಗಳನ್ನಷ್ಟೆ ಇಟ್ಟುಕೊಂಡು ಗಂಡು ಕೋಳಿಮರಿಯನ್ನು ಕೊಲ್ಲುತ್ತಾರೆ. ಹೀಗೆ ಪ್ರತಿ ವರ್ಷವೂ ಪ್ರಪಂಚದಾದ್ಯಂತ ಏನಿಲ್ಲವೆಂದರೂ ಇಂದು ಪ್ರಪಂಚದ ಒಟ್ಟಾರೆ ಜನಸಂಖ್ಯೆಗೆ ಸಮಾನವಾದಷ್ಟು ಕೋಳಿಮರಿಗಳನ್ನು ಕೊಲ್ಲಲಾಗುತ್ತದೆ.

ಮೊಟ್ಟೆಯ ಸ್ಥಿತಿಯಲ್ಲಿಯೇ ಅವುಗಳ ವಿಧಿ ತಿಳಿದರೆ, ಆ ಮೊಟ್ಟೆಗಳನ್ನು ಮರಿಯಾಗದಂತೆ ತಡೆಯಬಹುದಲ್ಲ?

> ಮೊಟ್ಟೆಗಳ ಉಸಿರೇ ಅವುಗಳು ಕೋಳಿಯೋ ಹುಂಜವೋ ಎಂದು ಸೂಚಿಸುತ್ತವೆಯಂತೆ.


ಈ ಕೋಟಿಗಟ್ಟಲೆ ಹತ್ಯೆಯ ಸಂಕಟ ತಡೆಯಬಹುದಲ್ಲ ಎನ್ನುವುದು ಆಶಯ. ಈ ಆಶಯದಿಂದ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಮೆಕ್ಯಾನಿಕಲ್ ಎಂಜಿ.ನಿಯರಿಂಗ್ ವಿಭಾಗದ ಥಾಮಸ್ ಟರ್ಪೆನ್ ಮತ್ತು ಸಂಗಡಿಗರು ಮೊಟ್ಟೆಯ ವಾಸನೆಗಳಿಂದಲೇ ಅವು ಗಂಡೋ ಹೆಣ್ಣೋ ಎಂದು ಗುರುತಿಸಬಹುದೇ ಎಂದು ಪ್ರಶ್ನಿಸಿ ಪ್ರಯೋಗಗಳನ್ನು ಕೈಗೊಂಡಿದ್ದಾರೆ. ರಂಧ್ರಮಯವಾದ ಹೊದಿಕೆಯೊಳಗಿಂದ ಭ್ರೂಣ ಉಸಿರಾಡುತ್ತದಷ್ಟೆ. ಆ ಸಮಯದಲ್ಲಿ ಅದು ಹೊರಸೂಸಿದ ಗಾಳಿಯಲ್ಲಿ ಹಲವಾರು ರಾಸಾಯನಿಕಗಳಿರುತ್ತವೆ. ಈ ರಾಸಾಯನಿಕಗಳನ್ನು ಗುರುತಿಸಿದರೆ ಬಹುಶಃ ಮೊಟ್ಟೆ ಗಂಡಾಗುತ್ತದೋ ಹೆಣ್ಣಾಗುತ್ತದೋ ಎಂಬುದು ತಿಳಿಯಬಹುದು.

ಆದರೆ ಇದಕ್ಕಾಗಿ ಮೊಟ್ಟೆಯಿಂದ ಹೊರ ಸೂಸುವ ಗಾಳಿಯನ್ನು ಹಿಡಿಯಬೇಕಷ್ಟೆ. ಟರ್ಪೆನ್ ಮತ್ತು ಸಂಗಡಿಗರು ಇದಕ್ಕಾಗಿ ಮೊಟ್ಟೆಗಳನ್ನು ಜತನದಿಂದ ಎತ್ತಿ ಇಡಲು ಬಳಸುವ ರಬ್ಬರಿನ ಹೀರಕಗಳನ್ನೇ ಪರಿವರ್ತಿಸಿದ್ದಾರೆ. ಪುಟ್ಟ ರಬ್ಬರಿನ ಬೋಗುಣಿಯಂತಹ ಈ ಹೀರಕಗಳನ್ನು ಒತ್ತಿದಾಗ ಗಾಳಿ ಹೊರಹೋಗಿ, ನಿರ್ವಾತ ಉಂಟಾಗುತ್ತದೆ. ಮೊಟ್ಟೆ ಅದಕ್ಕೆ ಭದ್ರವಾಗಿ ಅಂಟಿಕೊಳ್ಳುತ್ತದೆ. ಈ ಹೀರಕವನ್ನೇ ಸ್ವಲ್ಪ ಮಾರ್ಪಡಿಸಿ, ಅದು ಮೊಟ್ಟೆಯ ಸುತ್ತಲೂ ಇರುವ ಗಾಳಿಯನ್ನು ಸಂಗ್ರಹಿಸುವಂತೆ ಮಾಡಿದ್ದಾರೆ. ಹೀಗೆ ಸಂಗ್ರಹಿಸಿದ ಮೊಟ್ಟೆಯ ಉಸಿರನ್ನು 'ಜಿಸಿ-ಎಂಸಿ' ಎನ್ನುವ ತಂತ್ರದಿಂದ ವಿಶ್ಲೇಷಿಸಿದ್ದಾರೆ. ಜಿಸಿ-ಎಂಸಿ, ಅರ್ಥಾತ್ 'ಗ್ಯಾಸ್ ಕ್ರೊಮಾಟೊಗ್ರಫಿ-ಮಾಸ್ ಸ್ಪೆಕ್ಟ್ರೋಮೆಟ್ರಿ' ತಂತ್ರ ಅತ್ಯಲ್ಪ ರಾಸಾಯನಿಕವಿದ್ದರೂ ಅದನ್ನು ಗುರುತಿಸಿ, ಅದರ ಅಣುಗಾತ್ರಕ್ಕೆ ತಕ್ಕಂತೆ ವಿಂಗಡಿಸುತ್ತದೆ. ಹೀಗೆ ಒಂದಿಷ್ಟು ಉಸಿರಿನಲ್ಲಿ ಇರಬಹುದಾದ ಎಲ್ಲ ರಾಸಾಯನಿಕದ ಅಣುಗಳನ್ನೂ ಗಾತ್ರಕ್ಕೆ ಅನುಗುಣವಾಗಿ ವಿಂಗಡಿಸಬಹುದು.

ಅನಂತರ ವಿವಿಧ ಮೊಟ್ಟೆಗಳ ಉಸಿರಿನಲ್ಲಿ ಇರುವ ವಿವಿಧ ರಾಸಾಯನಿಕಗಳನ್ನು ಗುರುತಿಸಿದ್ದಾರೆ. ಗಂಡಿನಲ್ಲಿ ಯಾವ್ಯಾವ ರಾಸಾಯನಿಕಗಳಿವೆ, ಹೆಣ್ಣಿನ ಉಸಿರಿನಲ್ಲಿ ಯಾವ್ಯಾವುದಿವೆ ಎಂದು ಪತ್ತೆ ಮಾಡಿದ್ದಾರೆ. ಇದಕ್ಕಾಗಿ ಡಿಎನ್ಎ ತಂತ್ರವನ್ನು ಬಳಸಿ ಮೊದಲೇ ಮೊಟ್ಟೆ, ಗಂಡೋ ಹೆಣ್ಣೋ ಎಂದು ಪರಿಶೀಲಿಸಲಾಗಿತ್ತು. ವಿಶ್ಲೇಷಣೆಯ ನಂತರ ದೊರೆತ ಫಲಿತಾಂಶದ ಆಧಾರದ ಮೇಲೆ ಯಾವ್ಯಾವ ರಾಸಾಯನಿಕಗಳಿದ್ದರೆ ಗಂಡುಗಳೆಂದು ತಿಳಿಯಬಹುದು ಎಂದು ಅರ್ಥ ಮಾಡಿಕೊಂಡು ಆ ರಾಸಾಯನಿಕಗಳು ಹೆಚ್ಚಿರುವ ಮೊಟ್ಟೆಗಳನ್ನು ಗುರುತಿಸಲು ಪ್ರಯತ್ನಿಸಿದ್ದಾರೆ. ವಿವಿಧ ವಯಸ್ಸಿನ ಮೊಟ್ಟೆಗಳಿಂದ ಸಂಗ್ರಹಿಸಿದ ಉಸಿರಿನಲ್ಲಿ ಎಂಟನೆಯ ದಿನದ ಮೊಟ್ಟೆಗಳಿಂದ ಬಂದ ಉಸಿರಿನಲ್ಲಿ ಹೀಗೆ ಸ್ಪಷ್ಟವಾದ ವ್ಯತ್ಯಾಸ ಇರುತ್ತದೆಂದು ತಿಳಿಯಿತು.

ಗಂಡೋ ಹೆಣ್ಣೋ ಎಂದು ಪರೀಕ್ಷಿಸದ ಎಂಟು ದಿನ ವಯಸ್ಸಾದ ಮೊಟ್ಟೆಗಳನ್ನೂ ಇದೇ ತಂತ್ರದಿಂದ ವಿಶ್ಲೇಷಿಸಿ, ಗಂಡುಮೊಟ್ಟೆಗಳನ್ನೂ ಹೆಣ್ಣುಮೊಟ್ಟೆಗಳನ್ನೂ ವಿಂಗಡಿಸಲು ಪ್ರಯತ್ನಿಸಿದ್ದಾರೆ. ಎಂಟು ದಿನಗಳ ವಯಸ್ಸಿನ ಮೊಟ್ಟೆಗಳನ್ನು ಹೀಗೆ ಪರಿಶೀಲಿಸಿದಾಗ ಹತ್ತರಲ್ಲಿ ಎಂಟು ಬಾರಿ ನಿಖರವಾದ ಫಲಿತಾಂಶ ಸಿಕ್ಕಿತಂತೆ. ಅಂದರೆ ಹತ್ತು ಮೊಟ್ಟೆಗಳನ್ನು ಪರಿಶೀಲಿಸಿದಾಗ, ಎಂಟು ಮೊಟ್ಟೆಗಳು ಗಂಡೋ ಹೆಣ್ಣೋ ಎಂದು ಖಚಿತವಾಗಿ ಹೇಳಬಹುದಾಯಿತು. ಕೇವಲ ಇಪ್ಪತ್ತು ಶತಾಂಶದ ಲಿಂಗವೇನೆಂದು ಗೊತ್ತಾಗಲಿಲ್ಲ ಎಂದು ಇವರು ಪ್ರಕಟಿಸಿದ್ದಾರೆ.

ಅಂತೂ ಹುಟ್ಟುವ ಮೊದಲೇ ಕೋಳಿಯೋ ಹುಂಜವೋ ಎಂದು ತಕ್ಕ ಮಟ್ಟಿಗಾದರೂ ತೀರ್ಮಾನಿಸುವುದು ಸಾಧ್ಯ ಎಂದಾಯಿತು. ಆದರೂ ಇದು ಸುಲಭವಲ್ಲ ಎನ್ನಿ. ಈ ಸಂಶೋಧನೆಯ ವಿವರಗಳನ್ನು ಪಿಎಲ್ಓಎಸ್ ಒನ್ ಪತ್ರಿಕೆ ಪ್ರಕಟಿಸಿದೆ.





ಕಡತಗಳ ಬ್ಯಾಕಪ್ ಡಿಜಿಟಲ್ ಶಿಸ್ತು

ಅವಿನಾಶ್ ಬಿ.

ಆಧಾರ್, ಪಾನ್ ಕಾರ್ಡ್, ಡಿಎಲ್, ಅಂಕಪಟ್ಟಿ, ಸರ್ಟಿಫಿಕೆಟ್‌ಗಳೇ ಮುಂತಾಗಿ ನಮ್ಮ ಜೀವನಕ್ಕೆ ಬೇಕಾದ ಅತ್ಯಂತ ಪ್ರಮುಖ ಕಡತಗಳು, ಅಮೂಲ್ಯ ನೆನಪುಗಳನ್ನು ಕಾಪಿಡುವ ಚಿತ್ರ, ವಿಡಿಯೊಗಳು, ಕಚೇರಿಯ ಕೆಲಸಕ್ಕೆ ಸಂಬಂಧಿಸಿದ ಮಾಹಿತಿ ಕಡತಗಳು - ಇವೆಲ್ಲವನ್ನೂ ಬಳಸುವುದು ಎಷ್ಟು ಮುಖ್ಯವೋ, ಈ ಡಿಜಿಟಲ್ ಯುಗದಲ್ಲಿ ರಕ್ಷಿಸಿಕೊಳ್ಳುವುದು ಕೂಡ ಅಷ್ಟೇ ಮುಖ್ಯವಾಗುತ್ತದೆ. ಗ್ಯಾಜೆಟ್‌ಗಳು ನಮ್ಮ ಜೀವನದ ಅವಿಭಾಜ್ಯ ಅಂಗವಾಗಿರುವ ಈ ಕಾಲದಲ್ಲಿ ಅವುಗಳನ್ನು ಬಳಸುವಲ್ಲಿಯೂ ಶಿಸ್ತು ಇರಬೇಕಾಗುತ್ತದೆ.

ಉದಾಹರಣೆಗೆ, ಪ್ರಮುಖ ಕಡತಗಳನ್ನು ನಾವು ನಮ್ಮ ಸ್ಮಾರ್ಟ್‌ಫೋನ್‌ಗಳಲ್ಲಿ ಇಟ್ಟುಕೊಂಡಿರುತ್ತೇವೆ. ಅತಿಯಾದ ಕಡತಗಳ ಭಾರದಿಂದಾಗಿಯೋ, ತಂತ್ರಾಂಶ - ಯಂತ್ರಾಂಶಗಳ ವೈಫಲ್ಯದಿಂದಾಗಿಯೋ, ಈ ಫೋನ್ ಒಂದು ದಿನ ದಿಢೀರನೇ ಕೈಕೊಡುತ್ತದೆ; ಆನ್ ಆಗುವುದಿಲ್ಲ. ಅದರ ಮದರ್‌ಬೋರ್ಡ್ ಸಮಸ್ಯೆಗೆ ಸಿಲುಕಿರಬಹುದು ಅಥವಾ ಯಾವುದಾದರೂ ವೈರಸ್, ಫಿಶಿಂಗ್, ರ‍್ಯಾನ್ಸಮ್-ವೇರ್ ಮುಂತಾದ ಮಾಲ್‌ವೇರ್‌ಗಳು (ಕುತಂತ್ರಾಂಶಗಳು) ಬಾಧಿಸಿರಬಹುದು; ಇಲ್ಲವೇ ಗ್ಯಾಜೆಟ್ ಕಳೆದುಹೋಗಬಹುದು. ಇಂಥ ಸಂದರ್ಭಗಳಲ್ಲಿ ಈ ಅಮೂಲ್ಯ ಕಡತಗಳನ್ನೂ ಕಳೆದುಕೊಳ್ಳಬೇಕಾಗಬಹುದು.

ಫೋಟೊ, ವಿಡಿಯೊ ಅಥವಾ ಬೇರಾವುದೇ ಡಾಕ್ಯುಮೆಂಟ್ ರೂಪದಲ್ಲಿರುವ ಡಿಜಿಟಲ್ ಕಡತಗಳ ನಿರ್ವಹಣೆಯಲ್ಲಿ ಒಂದಿಷ್ಟು ಶಿಸ್ತು ಅಳವಡಿಸಿಕೊಂಡರೆ ಮತ್ತು ಇವುಗಳ ಬ್ಯಾಕಪ್ ಇರಿಸಿಕೊಂಡಲ್ಲಿ, ಈ ಅಮೂಲ್ಯ ದಾಖಲೆಗಳನ್ನು ಕಳೆದುಕೊಂಡು ಪರಿತಪಿಸಬೇಕಾದ ಪ್ರಮೇಯವನ್ನು ತಪ್ಪಿಸಬಹುದು. ಸ್ಮಾರ್ಟ್‌ಫೋನ್, ಟ್ಯಾಬ್ಲೆಟ್ ಅಥವಾ ಲ್ಯಾಪ್‌ಟಾಪ್ ಕಳೆದುಹೋಗುವ ಸಾಧ್ಯತೆಗಳು ಕೂಡ ಹೆಚ್ಚಿರುವ ಈ e-ಕಾಲದಲ್ಲಿ ಡಿಜಿಟಲ್ ಶಿಸ್ತು ಅತ್ಯಂತ ಮುಖ್ಯ.

ಆ ಶಿಸ್ತುಬದ್ಧತೆಯಲ್ಲಿ ಒಂದನೆಯ ಕ್ರಮ ಎಂದರೆ, ವಾಟ್ಸ್ಆ್ಯಪ್, ಟೆಲಿಗ್ರಾಂ ಮುಂತಾದ ಸಾಮಾಜಿಕ ಜಾಲತಾಣಗಳಲ್ಲಿ ಬಂದಿದ್ದನ್ನೆಲ್ಲ ಡೌನ್‌ಲೋಡ್ ಮಾಡಿಕೊಳ್ಳದಿರುವುದು. ಮತ್ತು ಡೌನ್‌ಲೋಡ್ ಮಾಡಿಕೊಂಡರೂ, ಅದರ ಅಗತ್ಯ ಮುಂದೆ ಇದೆಯೇ ಎಂದು ತೀರ್ಮಾನಿಸಿಕೊಂಡು, ಅಗತ್ಯವಿಲ್ಲದಿದ್ದರೆ ತಕ್ಷಣವೇ ಡಿಲೀಟ್ ಮಾಡಿಕೊಳ್ಳುವುದು ಸೂಕ್ತ. ಅಥವಾ ವಾರಕ್ಕೊಮ್ಮೆ ಈ ಪ್ರಕ್ರಿಯೆ ಮಾಡಬಹುದು. ಹೀಗಾದರೆ, ಸ್ಮಾರ್ಟ್‌ಫೋನ್‌ನಲ್ಲಿ ಸಾಕಷ್ಟು ಸ್ಥಳಾವಕಾಶವೂ ಇರುವಂತಾಗುತ್ತದೆ. ಇಲ್ಲದಿದ್ದರೆ, ಬಂದಿರುವ ಎಲ್ಲ ಫೋಟೊ, ವಿಡಿಯೊಗಳನ್ನು ಡೌನ್‌ಲೋಡ್ ಮಾಡಿಕೊಂಡು, ಸ್ಮಾರ್ಟ್‌ಫೋನ್‌ನ ಮೆಮೊರಿ (ಸ್ಥಳಾವಕಾಶ) ಭರ್ತಿಯಾಗಿ, ಫೋನ್ ಹ್ಯಾಂಗ್ ಆಗುವುದು ಅಥವಾ ವಿಳಂಬದ ಕಾರ್ಯಾಚರಣೆ, ಇಲ್ಲವೇ ಕೊನೆಗೊಂದು ದಿನ ಸಂಪೂರ್ಣವಾಗಿ ಕೈಕೊಡುವುದಕ್ಕೆ (ಯಂತ್ರಾಂಶ-ತಂತ್ರಾಂಶ ವೈಫಲ್ಯದಿಂದ) ಕಾರಣವಾಗಬಹುದು. ಹೀಗಾಗಿ ಡಿಜಿಟಲ್ ಶಿಸ್ತು ಅನಿವಾರ್ಯ.

ಎರಡನೆ ಶಿಸ್ತು ಎಂದರೆ, ಕಡತಗಳ ಬ್ಯಾಕಪ್ ಇರಿಸಿಕೊಳ್ಳುವುದು. ಅಂದರೆ, ಅತ್ಯಂತ ಪ್ರಮುಖವಾದ ದಾಖಲೆಗಳನ್ನು ಕ್ಲೌಡ್‌ನಲ್ಲಿ (ಅಂತರಜಾಲದಲ್ಲಿ ಲಭ್ಯವಿರುವ ಡ್ರೈವ್‌ಗಳಲ್ಲಿ) ಕಾಪಿಟ್ಟುಕೊಳ್ಳುವುದು ಅಥವಾ ಸೇವ್ ಮಾಡಿಡುವುದು. ಬೇಕೆಂದಾಗ ಬೇಕೆಂದಲ್ಲಿಂದ ಅದನ್ನು ಪುನಃ ಡೌನ್‌ಲೋಡ್ ಮಾಡಿಕೊಳ್ಳಲು ಇದು ಸೂಕ್ತ. ಅಂತರಜಾಲ ಸಂಪರ್ಕವಿದ್ದರಾಯಿತು. ಗೂಗಲ್ ಡ್ರೈವ್ (ಜಿಮೇಲ್‌ನ ಮೂಲಕ ಉಚಿತವಾಗಿ 15GB ಸ್ಟೋರೇಜ್ ಲಭ್ಯ; ಹೆಚ್ಚುವರಿ ಬೇಕಿದ್ದರೆ ಮಾಸಿಕ ಶುಲ್ಕ ಪಾವತಿಸಿ ಪಡೆಯಬಹುದು) ಅಥವಾ ಡ್ರಾಪ್‌ಬಾಕ್ಸ್, ಬಾಕ್ಸ್, ಪಿ-ಕ್ಲೌಡ್, ಮೈಕ್ರೋಸಾಫ್ಟ್ ಒನ್ ಡ್ರೈವ್, ಆ್ಯಪಲ್ ಐಕ್ಲೌಡ್ - ಹೀಗೆ ಸಾಕಷ್ಟು ಇತರ ಆಯ್ಕೆಗಳೂ ಇವೆ. ಉಚಿತವಾಗಿ ಒಂದಿಷ್ಟು ಸ್ಟೋರೇಜ್ ಜಾಗ ಲಭ್ಯವಿರುತ್ತವೆ ಮತ್ತು ಹೆಚ್ಚುವರಿ ಬೇಕಿದ್ದರೆ ಮಾಸಿಕ ಶುಲ್ಕ ಪಾವತಿಸಬೇಕಾಗುತ್ತದೆ.

ಮೂರನೆಯದು, ನಮ್ಮ ಸ್ಮಾರ್ಟ್‌ಫೋನ್‌ನ ಅತ್ಯಂತ ಮುಖ್ಯವಾದ ಫೈಲ್‌ಗಳನ್ನು ನಮ್ಮದೇ ಹಾರ್ಡ್ ಡಿಸ್ಕ್ (ಕಂಪ್ಯೂಟರ್ ಅಥವಾ ಬೇಕೆಂದಲ್ಲಿಗೆ ಒಯ್ಯಬಹುದಾದ ಎಕ್ಸ್‌ಟರ್ನಲ್ ಹಾರ್ಡ್ ಡ್ರೈವ್) ಒಂದರಲ್ಲಿ ಕಾಲಕಾಲಕ್ಕೆ ಸೇವ್ ಮಾಡಿಟ್ಟುಕೊಳ್ಳುವುದು. ಇಲ್ಲಿಯೂ ಕೂಡ, ಬೇಕಾಗಿರುವುದನ್ನಷ್ಟೇ ಆಯ್ಕೆ ಮಾಡಿಕೊಂಡರೆ, ಮುಂದಕ್ಕೆ ಅಗತ್ಯವೆನಿಸಿದಾಗ ಹುಡುಕುವುದು ಸುಲಭವಾಗುತ್ತದೆ.

ಬ್ಯಾಕಪ್ ಇರಿಸಿಕೊಳ್ಳುವಾಗಲೂ ಸ್ವಲ್ಪ ಶಿಸ್ತು ಇರಬೇಕಾಗುತ್ತದೆ. ನಿರ್ದಿಷ್ಟ ವಿಷಯದ ಫೋಲ್ಡರ್‌ಗಳನ್ನು ರಚಿಸಿಕೊಂಡು, ತತ್ಸಂಬಂಧಿತ ಫೈಲುಗಳನ್ನು ಆಯಾ ಫೋಲ್ಡರ್‌ನಲ್ಲಿ ಇರಿಸುವಂತಿರಬೇಕು. ಉದಾಹರಣೆಗೆ, ಶಿಕ್ಷಣ ಸಂಬಂಧಿತ ಕಡತಗಳು, ಕಚೇರಿ ಕಡತಗಳು, ಕೌಟುಂಬಿಕ ಚಿತ್ರ-ವಿಡಿಯೊಗಳು, ಬದುಕಿನ ಅಮೂಲ್ಯ ಕ್ಷಣಗಳು - ಹೀಗೆ ವಿಂಗಡಿಸಿಕೊಂಡಲ್ಲಿ, ಮುಂದೆ ಹುಡುಕಿ ಬಳಸುವುದು ಸುಲಭವಾಗುತ್ತದೆ.

ಎಲ್ಲಕ್ಕೂ ಮುಖ್ಯವಾಗುವುದು ಒಂದು ಸಶಕ್ತವಾದ ಆ್ಯಂಟಿ-ಮಾಲ್‌ವೇರ್ ಬಳಕೆ. ನಮ್ಮ ಕಂಪ್ಯೂಟರಿನಲ್ಲಿ ಇದು ಇಲ್ಲದಿದ್ದರೆ, ಡೇಟಾ (ದತ್ತಾಂಶ) ನಾಶ, ಹಾರ್ಡ್ ಡ್ರೈವ್ ವೈಫಲ್ಯಗಳಿಂದಾಗಿ ಯಾವುದೇ ಕಡತಗಳೂ ಮರಳಿ ಸಿಗಲಾರದಂತೆ ನಾಶವಾಗುವ ಆತಂಕವಿದ್ದೇ ಇದೆ. ಇದಕ್ಕಾಗಿ ಸೂಕ್ತ ಮುನ್ನೆಚ್ಚರಿಕೆ ಮತ್ತು ಸದ್ಬಳಕೆಯ ವಿಧಾನ ಅನುಸರಿಸುವುದು ಸೂಕ್ತ.

ಹಕ್ಕುಪತ್ರ ವಿತರಣೆ: ತನಿಖೆಗೆ ಸೂಚನೆ

ಬೆಂಗಳೂರು: ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಿಧಾನಸಭಾ ಚುನಾವಣೆ ಪ್ರಕ್ರಿಯೆ ನಡೆಯುತ್ತಿದ್ದಾಗಲೇ ನಿಯಮ ಉಲ್ಲಂಘಿಸಿ ಆಗಿನ ಶಾಸಕರ ಭಾವಚಿತ್ರದೊಂದಿಗೆ ಮುಖ್ಯಮಂತ್ರಿ ನಿವೇಶನ ಯೋಜನೆಯಡಿ 10,500 ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸಿರುವ ಆರೋಪದ ಕುರಿತು ತನಿಖೆ ನಡೆಸುವಂತೆ ವಸತಿ ಸಚಿವ ಬಿ.ಜೆಡ್. ಜಮೀರ್ ಅಹಮದ್ ಖಾನ್ ಅವರು ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಮಂಗಳವಾರ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧಿಕಾರಿಗಳು ವಿಷಯ ಪ್ರಸ್ತಾಪಿಸಿದರು. 'ಮುಖ್ಯಮಂತ್ರಿ ಮತ್ತು ವಸತಿ ಸಚಿವರ ಭಾವಚಿತ್ರದ ಸಹಿತ ಹಕ್ಕುಪತ್ರ ವಿತರಿಸಬೇಕು. ಚುನಾವಣೆ ಅವಧಿಯಲ್ಲಿ ವಿತರಿಸುವಂತಿಲ್ಲವೆಂಬ ಸೂಚನೆ ನೀಡಲಾಗಿತ್ತು. ಆದರೆ, ಕಾನೂನು ಉಲ್ಲಂಘಿಸಿ ಹಕ್ಕುಪತ್ರ ವಿತರಿಸಲಾಗಿದೆ' ಎಂದು ಅಧಿಕಾರಿಗಳು ದೂರಿದರು.

'ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಿ. ಬಡವರಿಗೆ ಅನ್ಯಾಯ ಆಗಬಾರದು' ಎಂದು ಸಚಿವರು ಸೂಚಿಸಿದರು.

ಮೀಸಲಾತಿ ಹೆಚ್ಚಳ: ಹಿಂದುಳಿದ, ದಲಿತ ಸ್ವಾಮೀಜಿಗಳ ಸಭೆಯಲ್ಲಿ ಸಿಎಂ ಸಿದ್ದರಾಮಯ್ಯ ಭರವಸೆ

9ನೇ ಪರಿಚ್ಛೇದಕ್ಕೆ ಸೇರಿಸಲು ಒತ್ತಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಶಿಕ್ಷಣ ಮತ್ತು ಉದ್ಯೋಗದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಾತಿ ಹೆಚ್ಚಿಸಿರುವುದನ್ನು ಸಂವಿಧಾನದ 9ನೇ ಪರಿಚ್ಛೇದಕ್ಕೆ ಸೇರ್ಪಡೆಗೊಳಿಸಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.


ಮುಖ್ಯಮಂತ್ರಿಯವರ ಗೃಹ ಕಚೇರಿ ಕೃಷ್ಣಾದಲ್ಲಿ ಮಂಗಳವಾರ ಹಿಂದುಳಿದ ವರ್ಗ ಮತ್ತು ದಲಿತ ಸಮುದಾಯಗಳ ಮಠಾಧೀಶರ ಒಕ್ಕೂಟದ ನಿಯೋಗದ ಅಹವಾಲನ್ನು ಸ್ವೀಕರಿಸಿ ಅವರು ಮಾತನಾಡಿದರು.

ಬಿಜೆಪಿ ಸರ್ಕಾರವು ತರಾತುರಿಯಲ್ಲಿ ಮೀಸಲಾತಿ ಹೆಚ್ಚಳ ಮಾಡಿರುವುದು ಚುನಾವಣಾ ಗಿಮಿಕ್. ಮೀಸಲಾತಿ ಹೆಚ್ಚಳ ಕುರಿತ ಕಾಯ್ದೆ ಜಾರಿಗೊಳಿಸಿದರೂ ಅದನ್ನು ಸಂವಿಧಾನದ 9ನೇ ಪರಿಚ್ಛೇದಕ್ಕೆ ಸೇರ್ಪಡೆಗೊಳಿಸಲು ಚುನಾವಣೆ ಘೋಷಣೆಯ ಎರಡು ದಿನ ಮೊದಲಷ್ಟೇ ಕೇಂದ್ರಕ್ಕೆ ಪ್ರಸ್ತಾವನೆ ಕಳುಹಿಸಿತ್ತು. ಹಿಂದುಳಿದ ವರ್ಗಗಳ ಮೀಸಲಾತಿಯಲ್ಲಿ ಹಾಗೂ ಪರಿಶಿಷ್ಟ ಜಾತಿ ಒಳ ಮೀಸಲಾತಿ ಕಲ್ಪಿಸುವ ನಿರ್ಧಾರದಲ್ಲಿ ಹಿಂದಿನ ಸರ್ಕಾರ ಗೊಂದಲ ಸೃಷ್ಟಿಸಿದೆ ಎಂದರು.

ಎಲ್ಲ ಸಮುದಾಯಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಒಳಮೀಸಲಾತಿ ಕಲ್ಪಿಸುವಂತೆ ತಾವು ನೀಡಿದ್ದ ಸಲಹೆಯನ್ನು ನಿರ್ಲಕ್ಷಿಸಿದ ಪರಿಣಾಮ ವಿವಿಧ ಸಮುದಾಯಗಳ ವಿರೋಧವನ್ನು ಬಿಜೆಪಿ ಎದುರಿಸಬೇಕಾಯಿತು. ಸಾಮಾಜಿಕ ನ್ಯಾಯದ ಕುರಿತು ಬದ್ಧತೆ ಇಲ್ಲದೇ ಹೋದರೆ ಇಂತಹ ಗೊಂದಲಗಳಾಗುತ್ತವೆ. ಜನಸಂಘ ಹಾಗೂ ಬಿಜೆಪಿ ಹಿಂದಿನಿಂದಲೂ ಮೀಸಲಾತಿ ವಿರೋಧಿ ನಿಲುವನ್ನೇ ಹೊಂದಿದ್ದವು. ಈಗ ಮೀಸಲಾತಿ ಹೆಚ್ಚಿಸಿರುವುದು ರಾಜಕೀಯ ಗಿಮಿಕ್. ಇದರ ಕುರಿತು ಎಚ್ಚರದಿಂದ ಇರಬೇಕು ಎಂದು ಸಿದ್ದರಾಮಯ್ಯ ಹೇಳಿದರು.

'ನಮ್ಮ ಸರ್ಕಾರವು ಮೀಸಲಾತಿಯಲ್ಲಿನ ಎಲ್ಲ ಗೊಂದಲಗಳನ್ನು ಸರಿಪಡಿಸಲಿದೆ' ಎಂದು ಭರವಸೆ ನೀಡಿದರು.


ಕನಕಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ, ಭೋವಿಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಕುಂಚಿಟಿಗ ಮಹಾಸಂಸ್ಥಾನ ಮಠದ ಡಾ.ಶಾಂತವೀರ ಸ್ವಾಮೀಜಿ, ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ವಾಲ್ಮೀಕಿ ಗುರುಪೀಠ ರಾಜನಹಳ್ಳಿಯ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ, ಈಶ್ವರಾನಂದಪುರಿ ಸ್ವಾಮೀಜಿ, ನಾರಾಯಣ ಗುರುಪೀಠದ ರೇಣುಕಾನಂದ ಸ್ವಾಮೀಜಿ, ಮಡಿವಾಳ ಗುರುಪೀಠದ ರೇಣುಕಾನಂದ ಸ್ವಾಮೀಜಿ, ಗಾಣಿಗ ಗುರುಪೀಠದ ಬಸವಕುಮಾರ ಸ್ವಾಮೀಜಿ, ಛಲವಾದಿ ಗುರುಪೀಠದ ನಾಗಿದೇವ ಸ್ವಾಮೀಜಿ, ಶಿವಶರಣ ಅಂಬಿಗರ ಚೌಡಯ್ಯ ಗುರುಪೀಠದ ಶಾಂತಭೀಷ್ಮ ಅಂಬಿಗರ ಚೌಡಯ್ಯ, ತೆಲಂಗಾಣ ಕುಂಚಿಗರ ಗುರುಪೀಠದ ಕುಂಚಿಗರ ಗುಂಡಯ್ಯ ಸ್ವಾಮೀಜಿ, ಯಾದವ ಮಹಾಸಂಸ್ಥಾನದ ಕೃಷ್ಣ ಯಾದವಾನಂದ ಸ್ವಾಮೀಜಿ, ಮೇದಾರ ಕೇತೇಶ್ವರ ಗುರುಪೀಠದ ಇಮ್ಮಡಿ ಕೇತೇಶ್ವರ ಸ್ವಾಮೀಜಿ, ಬೆಂಗಳೂರು ರಾಮಾನುಜ ಮಠದ ತ್ರಿದಂಡಿ ವೆಂಕಟ ರಾಮಾನುಜ ಜೀಯರ್ ಸ್ವಾಮೀಜಿ ಇದ್ದರು.



ಕನಕಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಿಹಿ ತಿನಿಸಿದರು.

'13 ಸಂಸದರ ತೇಜೋವಧೆ' ಸ್ಪಷ್ಟನೆಗೆ ಡಿವಿಎಸ್ ಆಗ್ರಹ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಪಕ್ಷದ 13 ಮಂದಿ ಸಂಸದರ ತೇಜೋವಧೆ ಮಾಡುವ ಪ್ರಯತ್ನ ನಡೆದಿದೆ. ಈ ಗೊಂದಲಕ್ಕೆ ತೆರೆ ಎಳೆಯಲು ಪಕ್ಷದ ರಾಜ್ಯ ಮತ್ತು ರಾಷ್ಟ್ರೀಯ ನಾಯಕರು ಮುಂದಾಗಬೇಕು' ಎಂದು ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಸಂಸದ ಡಿ.ವಿ. ಸದಾನಂದಗೌಡ ಆಗ್ರಹಿಸಿದ್ದಾರೆ.

'ಲೋಕಸಭಾ ಚುನಾವಣೆಗೆ ಇನ್ನೂ ಒಂದು ವರ್ಷ ಬಾಕಿ ಇದೆ. ನಮಗೆಲ್ಲ ವಯಸ್ಸಾಗಿದೆ, ಅನಾರೋಗ್ಯದ ಕಾರಣ ಟಿಕೆಟ್ ನೀಡುವುದಿಲ್ಲವೆಂದು ವ್ಯವಸ್ಥಿತವಾಗಿ ಅಪಪ್ರಚಾರ ನಡೆಸಲಾಗುತ್ತಿದೆ' ಎಂದು ಅವರು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಅಸಮಾಧಾನ ಹೊರಹಾಕಿದರು. 'ಪಕ್ಷ ಚುನಾವಣೆಯಲ್ಲಿ ಸೋತಿರುವುದನ್ನೇ ನೆಪ ಮಾಡಿಕೊಂಡು ಮನೋಸ್ಥೈರ್ಯವನ್ನು ಕುಗ್ಗಿಸುವ ಕೆಲಸ ನಡೆದಿದೆ. ನಮ್ಮ ಪಕ್ಷದ ನಾಯಕರನ್ನು ನಿರ್ವೀರ್ಯಗೊಳಿಸುವ ಪ್ರಯತ್ನ ನಡೆದಿದೆ. ಆದ್ದರಿಂದ ನಾಯಕರು ಸ್ಪಷ್ಟನೆ ನೀಡಲೇಬೇಕು' ಎಂದು ಆಗ್ರಹಿಸಿದರು.

'ಈ ರೀತಿ ಸುದ್ದಿಯನ್ನು ಹರಿಬಿಟ್ಟವರ ಹಿಂದೆ ಯಾರಿದ್ದಾರೆ ಗೊತ್ತಿಲ್ಲ. ಆದರೆ, ಇದು ಒಳ್ಳೆಯದಲ್ಲ. 13 ಮಂದಿ ಕೆಲಸವೇ ಮಾಡಿಲ್ಲ. ಮುದುಕರಾಗಿದ್ದಾರೆ, ಇನ್ನು ಕೆಲವರು ಅನಾರೋಗ್ಯ ಪೀಡಿತರು ಹೀಗಾಗಿ ಲೋಕಸಭಾ ಚುನಾವಣೆಯಲ್ಲಿ ಟಿಕೆಟ್ ಸಿಗುವುದಿಲ್ಲ ಎಂಬ ರೀತಿಯಲ್ಲಿ ಕೆಲವು ಮಾಧ್ಯಮಗಳಲ್ಲಿ ವ್ಯಾಖ್ಯಾನಿಸಲಾಗುತ್ತಿದೆ. ನಾವೆಲ್ಲ ಮುದುಕರಲ್ಲ. 12 ಸಂಸದರು ನನಗೆ ಕರೆ ಮಾಡಿ ಅಳಲು ತೋಡಿಕೊಂಡಿದ್ದಾರೆ. ಈ ಗೊಂದಲಗಳಿಗೆ ಇತಿ ಶ್ರೀ ಹಾಡಬೇಕಾದವರು ಯಾರೂ ಮಾತನಾಡುತ್ತಿಲ್ಲ. ಆದಷ್ಟು ಬೇಗ ಸ್ಪಷ್ಟನೆ ನೀಡಬೇಕು. ಇಲ್ಲವಾದರೆ, ಬೇರೆ ಬೇರೆ ಸಂದೇಶಗಳು ರವಾನೆಯಾಗುತ್ತವೆ' ಎಂದು ಸದಾನಂದಗೌಡ ಹೇಳಿದರು.

ಪೋಕ್ಸೊ: ಕಟ್ಟುನಿಟ್ಟಿನ ಜಾರಿಗೆ ಹೈಕೋರ್ಟ್ ತಾಕೀತು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯಗಳಿಗೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರಗಳಿಗೆ (ಪೊಲೀಸರಿಗೆ) ದೂರು ನೀಡಲು ಅವಕಾಶ ಕಲ್ಪಿಸುವ ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ) ಕಾಯ್ದೆ–2012ರ ಕಲಂ 19ರ ಕಟ್ಟುನಿಟ್ಟಿನ ಜಾರಿಗೆ ಅಗತ್ಯ ಕ್ರಮ ಕೈಗೊಳ್ಳಬೇಕು' ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

ಬಾಲಕಿಯ ಗರ್ಭಪಾತ ಮಾಡಿಸಿದ ಆರೋಪಕ್ಕೆ ಸಂಬಂಧಿಸಿದಂತೆ ತಮ್ಮ ವಿರುದ್ಧದ ಪ್ರಕರಣವನ್ನು ರದ್ದುಪಡಿಸುವಂತೆ ಕೋರಿ ಚಿಕ್ಕಮಗಳೂರಿನ ಡಾ.ಚಂದ್ರಶೇಖರ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಸಂತ್ರಸ್ತೆಯ ವಯಸ್ಸು 12 ವರ್ಷ ಎಂಬುದಾಗಿ ನನಗೆ ಗೊತ್ತಾಗಲಿಲ್ಲ. ಆಕೆ ಸೀರೆ ಉಟ್ಟಿದ್ದಳು. ಆಕೆ ವಯಸ್ಕಳಿರಬಹುದು ಎಂದು ಅಂದಾಜಿಸಿ ಚಿಕಿತ್ಸೆ ನೀಡಿದ್ದೇನೆ ಮತ್ತು ದೂರು ನೀಡಲು ಮುಂದಾಗಲಿಲ್ಲ ಎಂದು ಅರ್ಜಿದಾರರು ತಿಳಿಸಿದ್ದಾರೆ. ಆದರೆ, ಅರ್ಜಿದಾರರು ಸ್ತ್ರೀ ರೋಗ ತಜ್ಞರಾಗಿದ್ದು, 35 ವರ್ಷಗಳ ವೃತ್ತಿ ಅನುಭವ ಹೊಂದಿರುವುದಾಗಿ ತಿಳಿಸಿದ್ದಾರೆ. ಹಲವು ವರ್ಷಗಳ ಕಾಲ ಸರ್ಕಾರಿ ಸೇವೆಯನ್ನೂ ಸಲ್ಲಿಸಿದ್ದೇನೆ ಎಂದಿದ್ದಾರೆ. ಇವರ ವಿರುದ್ಧದ ಆರೋಪ ಗಂಭೀರವಾಗಿದ್ದು, ವಿಚಾರಣೆ ಮುಂದುವರೆಯಬೇಕಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

'ಅಪ್ರಾಪ್ತ ವಯಸ್ಸಿನವರ ವಿರುದ್ಧದ ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ ಜಾಗ್ರತೆ ವಹಿಸಬೇಕು. ಅಂತೆಯೇ, ವೈದ್ಯರು ಪೊಲೀಸರಿಗೆ ತಿಳಿಸುವ ಜವಾಬ್ದಾರಿಯನ್ನೂ ಹೊಂದಿರುತ್ತಾರೆ. ಮಕ್ಕಳ ಮೇಲೆ ದೌರ್ಜನ್ಯ ನಡೆದಿದೆ ಎಂಬ ಮಾಹಿತಿ ಸಿಕ್ಕ ತಕ್ಷಣ ಸ್ಥಳೀಯ ಪೊಲೀಸರಿಗೆ ತಿಳಿಸಬೇಕು ಎಂದು ಕಲಂ 19 ವಿವರಿಸುತ್ತದೆ. ಈ ಪ್ರಕರಣದಲ್ಲಿ ಅರ್ಜಿದಾರರು ಇಂತಹ ಕ್ರಮಕ್ಕೆ ಮುಂದಾಗದೇ ಇರುವುದು ಗಂಭೀರ ಲೋಪ' ಎಂದು ನ್ಯಾಯಪೀಠ ಅರ್ಜಿ ಜಾಗೊಳಿಸಿದೆ.

'ಪೋಕ್ಸೊ ಕಾಯ್ದೆಯ ಕಲಂ 19ರ ಕಟ್ಟುನಿಟ್ಟಿನ ಜಾರಿಯಲ್ಲಿ ವೈದ್ಯರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಇದು ವಿಫಲವಾದಲ್ಲಿ ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ನಡೆಸುವ ಅಪರಾಧಿಗಳು ಕಾನೂನಿನ ಹಿಡಿತದಿಂದ ತಪ್ಪಿಸಿಕೊಳ್ಳುತ್ತಾರೆ. ಅಂತಿಮವಾಗಿ ಇದು ಕಾಯ್ದೆಯ ಮೂಲ ಉದ್ದೇಶವನ್ನೇ ವಿಫಲಗೊಳಿಸುತ್ತದೆ ಎಂದು ಸುಪ್ರೀಂಕೋರ್ಟ್ ಹಲವು ಪ್ರಕರಣಗಳಲ್ಲಿ ವಿವರಿಸಿದೆ. ಆದ್ದರಿಂದ, ರಾಜ್ಯ ಸರ್ಕಾರ ಕಲಂ 19 ಅನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು' ಎಂದು ಪೀಠ ತಾಕೀತು ಮಾಡಿದೆ.

ಗೋವಧೆಗೆ ಕಾನೂನು ಅವಕಾಶ ನೀಡುವುದಕ್ಕೆ ತೀವ್ರ ವಿರೋಧ

ಸಂತರಿಂದ ಹೋರಾಟದ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಮಂಗಳೂರು: 'ಯಾವ ಕಾರಣಕ್ಕೂ ಗೋವಧೆಗೆ ಕಾನೂನಿನಲ್ಲಿ ಅವಕಾಶ ಕೊಡಬಾರದು. ಒಂದೊಮ್ಮೆ ಅವಕಾಶ ಕೊಟ್ಟರೆ ಬೀದಿಗಿಳಿದು ಹೋರಾಟ ಮಾಡಬೇಕಾಗುತ್ತದೆ' ಎಂದು ಸಂತರು ಎಚ್ಚರಿಸಿದರು.

ಮಂಗಳವಾರ ಇಲ್ಲಿ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಗುರುಪುರ ವಜ್ರದೇಹಿ ಮಠದ ರಾಜಶೇಖರಾನಂದ ಸ್ವಾಮೀಜಿ, ಕೇಮಾರು ಸಾಂದೀಪಿನಿ ಮಠದ ಈಶ ವಿಠಲದಾಸ ಸ್ವಾಮೀಜಿ, ಚಿಲಿಂಬಿ ಮಠದ ವಿದ್ಯಾನಂದ ಸರಸ್ವತಿ ಸ್ವಾಮೀಜಿ, ಶಂಕರಪುರ ದ್ವಾರಕಾಮಯಿ ಮಠದ ಸಾಯಿ ಈಶ್ವರ ಗುರೂಜಿ ಅವರು, 'ಎಮ್ಮೆ ಕಡಿಯಬಹುದಾದರೆ ಹಸು ಯಾಕೆ ಕಡಿಯಬಾರದು ಎಂಬ ರಾಜ್ಯದ ಪಶುಸಂಗೋಪನಾ ಸಚಿವ ವೆಂಕಟೇಶ್ ಅವರ ಹೇಳಿಕೆ ಖಂಡನೀಯ' ಎಂದರು.

ಪ್ರಾಚೀನ ಕಾಲದಿಂದಲೂ ಗೋ ಹತ್ಯೆಗೆ ಅವಕಾಶ ಇರಲಿಲ್ಲ. 1948ರ ಕರ್ನಾಟಕ ಗೋವಧೆ ನಿಷೇಧ ಕಾಯ್ದೆಯಲ್ಲಿ ಗೋವಂಶ (ದನ, ಎತ್ತು, ಕರುಗಳು) ವಧೆಯನ್ನು ನಿಷೇಧಿಸಲಾಗಿತ್ತು. 1964ರಲ್ಲಿ ಸುಪ್ರೀಂ ಕೋರ್ಟ್ ತೀರ್ಪಿನಿಂದಾಗಿ 12 ವರ್ಷವಾದ ನಂತರ ಎತ್ತು, ಎಮ್ಮೆ, ಕೋಣಗಳನ್ನು ಸರ್ಕಾರದಿಂದ ಅಧಿಕಾರ ಪಡೆದ ವೈದ್ಯರ ಪ್ರಮಾಣಪತ್ರ ಪಡೆದು, ವಧಿಸಬಹುದಾಗಿತ್ತಾದರೂ, 1964ರ ಕಾಯ್ದೆಯಲ್ಲಿ ಯಾವುದೇ ವಯಸ್ಸಿನ ದನಗಳ ವಧೆಯನ್ನು ನಿಷೇಧಿಸಲಾಗಿತ್ತು. 1948ರಲ್ಲಿ ಕೆ.ಸಿ.ರೆಡ್ಡಿ ನೇತೃತ್ವದ ಸರ್ಕಾರ ಮತ್ತು 1964ರಲ್ಲಿ ಎಸ್. ನಿಜಲಿಂಗಪ್ಪ ನೇತೃತ್ವದ ಕಾಂಗ್ರೆಸ್ ಸರ್ಕಾರ ಜಾರಿಗೆ ತಂದ ಕಾಯ್ದೆಯ ವಿಚಾರಗಳನ್ನು ಈಗ ಕಾಂಗ್ರೆಸ್ ಸರ್ಕಾರದ ಸಚಿವರೇ ವಿರೋಧಿಸುತ್ತಿದ್ದಾರೆ ಎಂದು ರಾಜಶೇಖರಾನಂದ ಸ್ವಾಮೀಜಿ ಹೇಳಿದರು.

ಕರ್ನಾಟಕ ಗೋವಧೆ ನಿಯಂತ್ರಣ ಮತ್ತು ಸಂರಕ್ಷಣಾ ಕಾಯ್ದೆ–2020 ಬಂದ ಮೇಲೆ ಕರಾವಳಿಯಲ್ಲಿ ಅಕ್ರಮ ಗೋ ಸಾಗಣೆ ಪ್ರಕರಣಗಳು ಶೇ 80ರಷ್ಟು ಕಡಿಮೆಯಾಗಿವೆ. ಹೆಚ್ಚು ವಯಸ್ಸಾದ ಗೋವುಗಳಿಂದಲೂ ಪ್ರಯೋಜನಗಳಿವೆ. ಅವುಗಳನ್ನು ದೇಶದ ಅಭಿವೃದ್ಧಿಗೆ ಪೂರಕವಾಗಿ ಉಳಿಸಬೇಕಾಗಿದೆ ಎಂದು ಹೇಳಿದರು.

'ಗೃಹ ಸಚಿವರು ಕರಾವಳಿಯಲ್ಲಿ ಕೋಮು ದ್ವೇಷ ನಿಗ್ರಹ ಘಟಕ ಸ್ಥಾಪಿಸುವುದಾಗಿ ಹೇಳಿರುವುದು ಸ್ವಾಗತಾರ್ಹ. ನಮ್ಮ ಸಂಸ್ಕೃತಿ ಉಳಿಸಿಕೊಂಡು ಹೋಗುವ ಕಾರ್ಯ ಈ ಘಟಕದಿಂದ ಆಗಲಿ' ಎಂದು ರಾಜಶೇಖರಾನಂದ ಸ್ವಾಮೀಜಿ ಆಶಿಸಿದರು.

'ಯಾರ ಹೊಟ್ಟೆ ತುಂಬಲು ಪ್ರೇರಣೆ ನೀಡುತ್ತಿದ್ದೀರಿ?'



ಪ್ರಭು ಚವಾಣ್

ಬೀದರ್: 'ಯಾರ ಹೊಟ್ಟೆ ತುಂಬಲು ಗೋವುಗಳನ್ನು ಕಡಿಯಲು ಪ್ರೇರಣೆ ನೀಡುತ್ತಿದ್ದೀರಿ' ಎಂದು ಪಶುಸಂಗೋಪನಾ ಇಲಾಖೆಯ ಮಾಜಿ ಸಚಿವರೂ ಆಗಿರುವ ಶಾಸಕ ಪ್ರಭು ಚವ್ಹಾಣ ಪ್ರಶ್ನಿಸಿದ್ದಾರೆ.

'ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತಿದ್ದಂತೆ ತನ್ನ ನಿಜ ಬಣ್ಣ ತೋರಿಸಲು ಪ್ರಾರಂಭಿಸಿದೆ. ಹಸು ಏಕೆ ಕಡಿಯಬಾರದು ಎಂಬ ಪಶುಸಂಗೋಪನಾ ಸಚಿವ ಕೆ.ವೆಂಕಟೇಶ ಅವರ ಹೇಳಿಕೆ ಖಂಡನಾರ್ಹ' ಎಂದು ಅವರು ತಿಳಿಸಿದ್ದಾರೆ.

ಗೋಹತ್ಯೆ ನಿಷೇಧ ಕಾಯ್ದೆ ವಾಪಸ್ ಇಲ್ಲ: ಎಚ್.ಕೆ.ಪಾಟೀಲ

ಬೆಂಗಳೂರು: 'ಬಿಜೆಪಿ ಸರ್ಕಾರದ ಅವಧಿಯಲ್ಲಿ ಜಾರಿಗೆ ತಂದಿದ್ದ ಜಾನುವಾರು ಹತ್ಯೆ ಪ್ರತಿಬಂಧಕ (ಗೋಹತ್ಯೆ ನಿಷೇಧ) ಕಾಯ್ದೆ ವಾಪಸ್ ಪಡೆಯುವ ಕುರಿತ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ' ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ ಸ್ಪಷ್ಟಪಡಿಸಿದರು.

ಸುದ್ದಿಗಾರರ ಪ್ರಶ್ನೆಗೆ ಮಂಗಳವಾರ ಪ್ರತಿಕ್ರಿಯಿಸಿದ ಅವರು, 'ಆ ರೀತಿಯ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲದೇ ಇರುವಾಗ ಆ ಕುರಿತು ಟಿಪ್ಪಣಿ ಅಥವಾ ಚರ್ಚಿಸುವುದು ಸಮಂಜಸವಲ್ಲ' ಎಂದರು.

ರಾಜ್ಯದಲ್ಲಿ ಗೋಹತ್ಯೆ ನಿಷೇಧ ಕಾಯ್ದೆಗೆ ಕೆಲವೊಂದು ತಿದ್ದುಪಡಿ ಮಾಡಲು ರಾಜ್ಯ ಸರ್ಕಾರ ಮುಂದಾಗಿದೆ ಎಂಬ ವಿಚಾರ ಆಡಳಿತಾರೂಢ ಕಾಂಗ್ರೆಸ್ ಮತ್ತು ವಿರೋಧ ಪಕ್ಷ ಬಿಜೆಪಿ ನಡುವೆ ರಾಜಕೀಯ ಸಂಘರ್ಷಕ್ಕೆ ಕಾರಣವಾದ ಬೆನ್ನಲ್ಲೆ ಪಾಟೀಲರು ಈ ಹೇಳಿಕೆ ನೀಡಿದ್ದಾರೆ.

ಬಿಜೆಪಿ ಜತೆ ಕೈಜೋಡಿಸದ ಪಕ್ಷ ಯಾವುದಿದೆ: ದೇವೇಗೌಡ

ಬೆಂಗಳೂರು: 'ದೇಶದಲ್ಲಿ ಬಿಜೆಪಿ ಜತೆ ಕೈಜೋಡಿಸದೇ ಇರುವ ಯಾವುದಾದರೂ ಒಂದು ಪಕ್ಷವನ್ನು ತೋರಿಸಿ. ಆ ನಂತರ ವಿಪಕ್ಷಗಳ ಒಗ್ಗಟ್ಟಿನ ಬಗ್ಗೆ ಮಾತನಾಡುವೆ' ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ಹೇಳಿದರು.

'ವಿರೋಧ ಪಕ್ಷಗಳನ್ನು ಒಗ್ಗೂಡಿಸಲು ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ನಡೆಸುತ್ತಿರುವ ಪ್ರಯತ್ನದಲ್ಲಿ ಜೆಡಿಎಸ್ ಕೈ ಜೋಡಿಸಲಿದೆಯೆ?' ಎಂದು ಸುದ್ದಿಗೋಷ್ಠಿಯಲ್ಲಿ ಪತ್ರಕರ್ತರು ಕೇಳಿದ ಪ್ರಶ್ನೆಗೆ ಅವರು ಈ ರೀತಿ ಮರು ಸವಾಲು ಹಾಕಿದರು.

'ಎಲ್ಲ ಪಕ್ಷಗಳೂ ಬಿಜೆಪಿ ಜತೆ ನೇರವಾಗಿ ಅಥವ ಪರೋಕ್ಷವಾಗಿ ಕೈಜೋಡಿಸಿವೆ. ಅನೇಕ ರಾಜ್ಯಗಳ ಕಾಂಗ್ರೆಸ್ ನಾಯಕರು ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಬಿಜೆಪಿ ಜತೆ ಕೈಜೋಡಿಸಿರುವುದು ಎಲ್ಲರಿಗೂ ಗೊತ್ತಿರುವ ಸತ್ಯ ಅಲ್ಲವೆ' ಎಂದು ಕೇಳಿದರು.

ಜೆಡಿಎಸ್ ಈಗ ಲೋಕಸಭಾ ಚುನಾವಣೆ ಬಗ್ಗೆ ಚಿಂತಿಸುವುದಿಲ್ಲ. ಈಗ ಪಕ್ಷದ ಮುಂದೆ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಬಿಬಿಎಂಪಿ ಚುನಾವಣೆಗಳಿವೆ. ಈ ಚುನಾವಣೆಗಳಲ್ಲಿ ಪಕ್ಷ ಪಡೆಯುವ ಜನಬೆಂಬಲ ಆಧರಿಸಿ ಲೋಕಸಭಾ ಚುನಾವಣೆಯಲ್ಲಿ ಎಷ್ಟು ಕ್ಷೇತ್ರಗಳಲ್ಲಿ? ಯಾವ ಕ್ಷೇತ್ರಗಳಲ್ಲಿ? ಸ್ಪರ್ಧಿಸಬೇಕು ಎಂಬುದನ್ನು ನಿರ್ಧರಿಸಲಾಗುವುದು ಎಂದರು.

ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಜತೆ ಜೆಡಿಎಸ್ ಮೈತ್ರಿ ಸಾಧ್ಯತೆ ಕುರಿತು ಪ್ರಶ್ನಿಸಿದಾಗ, 'ಪತ್ರಿಕೆಗಳಲ್ಲಿ ವರದಿಗಳು ಬರುತ್ತಿವೆ. ಆ ಬಗ್ಗೆ ಪ್ರತಿಕ್ರಿಯಿಸಲು ಹೋಗುವುದಿಲ್ಲ' ಎಂದರು.

ಎಸ್ಸೆಸ್ಸೆಲ್ಸಿ ಪೂರಕ ಪರೀಕ್ಷೆ: ವಿದ್ಯಾರ್ಥಿಗಳಿಗೆ ಪ್ರಯಾಣ ಉಚಿತ

ಬೆಂಗಳೂರು: ಎಸ್ಸೆಸ್ಸೆಲ್ಸಿ ಪೂರಕ ಪರೀಕ್ಷೆಯು ಜೂನ್ 12ರಿಂದ 19ರ ತನಕ ನಡೆಯಲಿದ್ದು, ವಿದ್ಯಾರ್ಥಿಗಳು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಬಹುದಾಗಿದೆ.

ವಿದ್ಯಾರ್ಥಿಗಳು ತಮ್ಮ ವಾಸದ ಸ್ಥಳದಿಂದ ನಿಯೋಜಿತ ಪರೀಕ್ಷಾ ಕೇಂದ್ರದವರೆಗೆ ಪರೀಕ್ಷೆಗೆ ತೆರಳುವಾಗ ಹಾಗೂ ವಾಪಸ್ ಬರುವಾಗ ಎಸ್ಸೆಸ್ಸೆಲ್ಸಿ ಪೂರಕ ಪರೀಕ್ಷೆ ಪ್ರವೇಶ ಪತ್ರವನ್ನು ತೋರಿಸಿ ನಿಗಮದ ನಗರ, ಹೊರವಲಯ, ಸಾಮಾನ್ಯ ಹಾಗೂ ವೇಗದೂತ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಮೂವರ ರಾಜೀನಾಮೆಯಿಂದ ತೆರವಾದ ಸ್ಥಾನಗಳು

ಪರಿಷತ್: 30ಕ್ಕೆ ಉಪಚುನಾವಣೆ

ಪ್ರಜಾವಾಣಿ ವಾರ್ತೆ

ಚುನಾವಣಾ ವೇಳಾಪಟ್ಟಿ	
ಜೂನ್ 13	ಚುನಾವಣಾ ಅಧಿಸೂಚನೆ ಪ್ರಕಟ
ಜೂನ್ 20	ನಾಮಪತ್ರ ಸಲ್ಲಿಕೆಗೆ ಕೊನೆಯ ದಿನ
ಜೂನ್ 21	ನಾಮಪತ್ರ ಪರಿಶೀಲನೆ
ಜೂನ್ 23	ನಾಮಪತ್ರ ವಾಪಸ್‌ಗೆ ಕಡೆಯ ದಿನ
ಜೂನ್ 30	ಮತದಾನ (ಬೆಳಿಗ್ಗೆ 9ರಿಂದ ಸಂಜೆ 4), ಮತ ಎಣಿಕೆ ಸಂಜೆ 5ರಿಂದ

ನವದೆಹಲಿ: ಕರ್ನಾಟಕ ವಿಧಾನ ಪರಿಷತ್‌ನ ಮೂವರು ಸದಸ್ಯರ ರಾಜೀನಾಮೆಯಿಂದ ತೆರವಾಗಿರುವ ಮೂರು ಸ್ಥಾನಗಳಿಗೆ ಉಪಚುನಾವಣೆ ಇದೇ 30ರಂದು ನಡೆಯಲಿದೆ.

ವಿಧಾನಸಭೆಯಿಂದ ವಿಧಾನ ಪರಿಷತ್‌ಗೆ ಆಯ್ಕೆಯಾಗಿದ್ದ ಬಿಜೆಪಿ ಸದಸ್ಯರಾದ ಲಕ್ಷ್ಮಣ ಸವದಿ, ಬಾಬುರಾವ್ ಚಿಂಚನಸೂರು ಹಾಗೂ ಆರ್.ಶಂಕರ್ ಅವರು ವಿಧಾನಸಭಾ ಚುನಾವಣೆಗೆ ಮುನ್ನ ತಮ್ಮ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಸವದಿ ಹಾಗೂ ಚಿಂಚನಸೂರು ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದರು. ಶಂಕರ್ ಎನ್‌ಸಿಪಿಯಿಂದ ಕಣಕ್ಕೆ ಇಳಿದಿದ್ದರು. ಈ ಪೈಕಿ, ಸವದಿ ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದಾರೆ.

ಚಿಂಚನಸೂರು ಸದಸ್ಯತ್ವದ ಅವಧಿ 2024ರ ಜೂನ್ 17ರ ವರೆಗೆ, ಶಂಕರ್ ಅವಧಿ 2026ರ ಜೂನ್ 30 ಹಾಗೂ ಸವದಿ ಅವಧಿ 2028ರ ಜೂನ್ 14ರವರೆಗೆ ಇತ್ತು.

ಈ ಚುನಾವಣೆಯಲ್ಲಿ ವಿಧಾನಸಭೆ ಸದಸ್ಯರು ಮತ ಚಲಾಯಿಸಲಿದ್ದಾರೆ. ವಿಧಾನಸಭೆಯ ಬಲಾಬಲದ ಪ್ರಕಾರ, ಕಾಂಗ್ರೆಸ್ ಎರಡು ಸ್ಥಾನಗಳನ್ನು ಹಾಗೂ ಬಿಜೆಪಿ ಒಂದು ಸ್ಥಾನ ಗೆಲ್ಲಬಹುದು. ಉಭಯ ಸದನಗಳ ಸದಸ್ಯರೂ ಅಲ್ಲದ ಎನ್.ಎಸ್.ಬೋಸರಾಜು ಅವರು ಸಚಿವರಾಗಿದ್ದಾರೆ. ಒಂದು ಸ್ಥಾನಕ್ಕೆ ಬೋಸರಾಜು ಅವರನ್ನು ಪಕ್ಷವು ಕಣಕ್ಕೆ ಇಳಿಸಲಿದೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಕಲುಷಿತ ನೀರು ಕುಡಿದು ಮಗು ಸಾವು ಶಂಕೆ

ಒಂದನೇ ಪುಟದಿಂದ...

ಬಸರಿಹಾಳ ಗ್ರಾಮದ ಹೊನ್ನಮ್ಮ ಶಿವಪ್ಪ (55) ಮೇ 31ರಂದು ಮೃತಪಟ್ಟಿದ್ದು, ಇದಕ್ಕೂ ಕಲುಷಿತ ನೀರು ಸೇವನೆ ಕಾರಣವಾಗಿರಬಹುದು ಎಂದು ಗ್ರಾಮಸ್ಥರು ಅನುಮಾನ ವ್ಯಕ್ತಪಡಿಸಿದ್ದಾರೆ. ಗ್ರಾಮದಲ್ಲಿ ಪ್ರಾಥಮಿಕ ಚಿಕಿತ್ಸಾ ಕೇಂದ್ರ ತೆರೆಯಲಾಗಿದೆ.

ಆಗಿದ್ದೇನು?: ಬಸರಿಹಾಳ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಹಿಂಭಾಗದ ಮನೆಗಳಿಗೆ ಅಳವಡಿಸಿರುವ ನಲ್ಲಿಯಲ್ಲಿ ಹಲವು ದಿನಗಳಿಂದ ನೀರು ಬರುತ್ತಿರಲಿಲ್ಲ. ಹೀಗಾಗಿ ಅಲ್ಲಿನ ನಿವಾಸಿಗಳು ನಲ್ಲಿಯನ್ನು ತಳಮಟ್ಟದವರೆಗೆ ಕತ್ತರಿಸಿ ನೀರು ಪಡೆಯುತ್ತಿದ್ದಾರೆ. ನಲ್ಲಿ ಸಮೀಪದಲ್ಲೇ ಅಡುಗೆ ಸಾಮಗ್ರಿ ಇಟ್ಟಿದ್ದಾರೆ. ಬಟ್ಟೆ ಸ್ವಚ್ಛಗೊಳಿಸಿದ್ದಾರೆ. ಬಟ್ಟೆ ಒಗೆದ ಸೋಪಿನ ನೀರು, ಕುಡಿಯುವ ನೀರಿನ ಕೊಳವೆಗೆ ಸೇರಿದ್ದರಿಂದ ಹೀಗಾಗಿದೆ ಎಂದು ಕನಕಗಿರಿ ತಹಶೀಲ್ದಾರ್ ಸಂಜಯ ಕಾಂಬ್ಳೆ 'ಪ್ರಜಾವಾಣಿ'ಗೆ ತಿಳಿಸಿದರು.

45 ಜನ ಆಸ್ಪತ್ರೆಗೆ: ಕುಷ್ಟಗಿ ತಾಲ್ಲೂಕಿನಲ್ಲಿ ನೀರಿನ ಕೊಳವೆ ಹಾಳಾಗಿ ಅದರಲ್ಲಿ ಕಲುಷಿತ ನೀರು ಸೇರಿಕೊಳ್ಳುತ್ತಿದ್ದು, ಅದೇ ನೀರನ್ನು ಕುಡಿದ ಜನರಲ್ಲಿ ವಾಂತಿ– ಭೇದಿ ಕಾಣಿಸಿಕೊಂಡಿದೆ.

ಜುಮಲಾಪುರ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರು ಪೂರೈಸುವ ಜಲಜೀವನ್ ಮಿಷನ್ ಕಾಮಗಾರಿಯ ಕೊಳವೆ ಒಡೆದಿದೆ. ಅಸ್ವಸ್ಥಗೊಂಡ 45 ಜನರನ್ನು ದೋಟಿಹಾಳ, ಕುಷ್ಟಗಿ, ಇಳಕಲ್, ಸಿಂಧನೂರು ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ.

ಕಿಡ್ನಿ ವೈಫಲ್ಯದಿಂದ ಸಾವು: ಬಸರಿಹಾಳ ಗ್ರಾಮದ ಹೊನ್ನಮ್ಮ ಶಿವಪ್ಪ ಹೃದಯ ಕಾಯಿಲೆ ಹಾಗೂ ನ್ಯುಮೋನಿಯಾದಿಂದ ಬಳಲುತ್ತಿದ್ದರು. ಮೂತ್ರಪಿಂಡ ವಿಫಲಗೊಂಡ ಕಾರಣದಿಂದ ಮರಣ ಹೊಂದಿದ್ದಾರೆ ಎಂದು ಡಿಎಚ್ಒ ಡಾ. ಅಲಕಾನಂದ ಮಳಗಿ ಪ್ರತಿಕ್ರಿಯಿಸಿದ್ದಾರೆ.

'ಅವಿಶ್ವಾಸ ಮಂಡಿಸಿದರೆ ಪೀಠದಲ್ಲಿ ಇರಲ್ಲ'

ಬೆಂಗಳೂರು: 'ನನ್ನ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿದರೆ ಒಂದು ಕ್ಷಣವೂ ಪೀಠದಲ್ಲಿ ಕುಳಿತುಕೊಳ್ಳುವುದಿಲ್ಲ' ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮಂಗಳವಾರ ಭೇಟಿ ಮಾಡಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಸದ್ಯ ಪರಿಷತ್‌ನಲ್ಲಿ ಕಾಂಗ್ರೆಸ್‌ಗೆ ಬಹುಮತ ಇಲ್ಲ. 2024ರ ಜೂನ್‌ವರೆಗೂ ಸಭಾಪತಿ ಸ್ಥಾನಕ್ಕೆ ಯಾವುದೇ ಸಮಸ್ಯೆ ಇಲ್ಲ. ಮುಂದಿನ ವರ್ಷ ಕೆಲವು ಸ್ಥಾನಗಳು ತೆರವಾಗಲಿವೆ. ಆಗ ಬಿಜೆಪಿ ಬಹುಮತ ಕಳೆದುಕೊಳ್ಳಬಹುದು. ಆದರೆ, ಈಗ ಆ ರೀತಿಯ ಪರಿಸ್ಥಿತಿ ಇಲ್ಲ' ಎಂದರು.

'ಸಿದ್ದರಾಮಯ್ಯ ಅವರನ್ನು ಸೌಜನ್ಯದಿಂದ ಭೇಟಿ ಮಾಡಿದ್ದೇನೆ. ಅವರ ಮತ್ತು ನನ್ನ ಗೆಳೆತನ ಮೊದಲಿನಿಂದಲೂ ಗಟ್ಟಿಯಾಗಿದೆ' ಎಂದರು.

'ಕೇಸರಿ' ಪಾಠ; ಕೊಕ್ ದಿಟ

ಒಂದನೇ ಪುಟದಿಂದ...

'ಪರಿಷ್ಕೃತ ಪಠ್ಯಪುಸ್ತಕಗಳು ಈಗಾಗಲೇ ಶಾಲೆಗಳನ್ನು ತಲುಪಿವೆ. ಹಾಗಾಗಿ, ಗೊಂದಲವಾಗದಂತೆ ನಿರ್ಧಾರ ತೆಗೆದುಕೊಳ್ಳಬೇಕಿದೆ. ವಿವಾದಿತ ಪಾಠಗಳನ್ನು ಸಂಪೂರ್ಣ ಕೈಬಿಟ್ಟು ಬೋಧನೆ ಮಾಡುವಂತೆ ಆದೇಶ ಹೊರಡಿಸಬೇಕು. ನಂತರ ಇನ್ನಷ್ಟು ಚರ್ಚೆ ನಡೆಸಿ, ಕೈಬಿಟ್ಟ ಪಾಠಗಳ ಬದಲು ಯಾವ ಪಾಠಗಳನ್ನು ಮಾಡಬೇಕು ಎನ್ನುವ ಕುರಿತು ಒಂದೆರಡು ತಿಂಗಳಲ್ಲಿ ಎರಡನೇ ಆದೇಶ ಹೊರಡಿಸಬೇಕು' ಎಂದು ಸಲಹೆ ನೀಡಿದರು.

ಹಿಂದಿನ ಸರ್ಕಾರದ ಅವಧಿಯಲ್ಲಿ ರೋಹಿತ್ ಚಕ್ರತೀರ್ಥ ಸಮಿತಿ ಬದಲಿಸಿದ, ಸೇರಿಸಿದ ಪಾಠಗಳು, ಹಿಂದಿನ ಪಾಠಗಳನ್ನೇ ಉಳಿಸಿಕೊಂಡು ಮಾಡಿದ ತಿದ್ದುಪಡಿಗಳು, ತಿದ್ದುಪಡಿಗಳಿಂದ ಆಗಿರುವ ಸಮಸ್ಯೆಗಳು, ಮಕ್ಕಳ ಕಲಿಕೆಯ ಮೇಲೆ ಬೀರಬಹುದಾದ ಪರಿಣಾಮಗಳನ್ನು ಅಧ್ಯಯನ ಮಾಡಲು, ಮತ್ತೊಂದು ಸುತ್ತು ಪಠ್ಯ ಪರಿಷ್ಕರಣಾ ಕಾರ್ಯ ಕೈಗೊಳ್ಳಬೇಕು. ಅದಕ್ಕಾಗಿ ನೂತನ 'ಪಠ್ಯ ಪರಿಷ್ಕರಣಾ ಸಮಿತಿ' ರಚಿಸಬೇಕು. ಸಮಿತಿ ವರದಿ ಆಧರಿಸಿ ಮುಂದಿನ ಶೈಕ್ಷಣಿಕ ವರ್ಷಕ್ಕೆ ಹೊಸ ಪಠ್ಯ ಪುಸ್ತಕಗಳನ್ನು ಸಿದ್ಧಪಡಿಸಬೇಕು ಎಂಬ ಚರ್ಚೆ ನಡೆಯಿತು. ಅದಕ್ಕೆ ಮುಖ್ಯಮಂತ್ರಿ, ಸಚಿವರು ಸಹಮತ ವ್ಯಕ್ತಪಡಿಸಿದರು.

ಸಾಹಿತಿ ಬರಗೂರು ರಾಮಚಂದ್ರಪ್ಪ, ಶಿಕ್ಷಣ ತಜ್ಞ ವಿ.ಪಿ. ನಿರಂಜನಾರಾಧ್ಯ ಮತ್ತಿತರರು ಚರ್ಚೆಯಲ್ಲಿ ಭಾಗವಹಿಸಿದ್ದರು.





ಸಫಾರಿ ವೇಳೆ ಕಾಣಿಸಿಕೊಂಡ ಕಪ್ಪು ಚಿರತೆ. ಚಿತ್ರ: ಜೀವನ್ ಕೃಷ್ಣಪ್ಪ (ಮೊದಲ ಚಿತ್ರ). ಉರುಳಿಗೆ ಬಿದ್ದ ಚಿರತೆ ಮೃತಪಟ್ಟಿದೆ

ಕಿನ್ನಿಗೋಳಿ: ಉರುಳಿಗೆ ಬಿದ್ದ ಚಿರತೆ ಸಾವು

ಸುಂಕದಕಟ್ಟೆ: ಕಪ್ಪು ಚಿರತೆ ಪ್ರತ್ಯಕ್ಷ

ಪ್ರಜಾವಾಣಿ ವಾರ್ತೆ

ಎಚ್.ಡಿ.ಕೋಟೆ: ತಾಲ್ಲೂಕಿನ ದಮ್ಮನಕಟ್ಟೆ ಸಫಾರಿ ಕೇಂದ್ರ ವ್ಯಾಪ್ತಿಯ ಸುಂಕದಕಟ್ಟೆ ಬಳಿ ಮಂಗಳವಾರ ಬೆಳಿಗ್ಗೆ ಸಫಾರಿ ವೇಳೆ ದೇಹದ ಮೇಲ್ಭಾಗದಲ್ಲಿ ಗಾಯಗೊಂಡ ಸ್ಥಿತಿಯಲ್ಲಿ ಕಪ್ಪು ಚಿರತೆ ಕಾಣಿಸಿಕೊಂಡಿತು.

12 ವರ್ಷದ ಚಿರತೆಯು ಬಿಸಲವಾಡಿ ಹಾಗೂ ನಾಗರಹೊಳೆ ರಾಷ್ಟ್ರೀಯ ಉದ್ಯಾನದ ಅಂತರಸಂತೆ ಡಿ.ಬಿ. ಕುಪ್ಪೆ ಭಾಗದಲ್ಲಿ 2 ತಿಂಗಳ ಹಿಂದೆ ಕಾಣಿಸಿಕೊಂಡಿತ್ತು.

'ಚಿರತೆಯು ಸಫಾರಿ ವ್ಯಾಪ್ತಿಯಿಂದ ದೂರವಿದ್ದು, ನಾಗರಹೊಳೆ ವ್ಯಾಪ್ತಿಯಲ್ಲಿ ತನ್ನ ಗಡಿ ಗುರುತಿಸಿಕೊಂಡಿತ್ತು' ಎಂದು ಅಂತರಸಂತೆ ವನ್ಯಜೀವಿ ವಲಯ ಅರಣ್ಯಾಧಿಕಾರಿ ಎಸ್.ಎಸ್. ಸಿದ್ದರಾಜು ತಿಳಿಸಿದರು.

'ಹುಲಿಗಳು ಒಂದು ಗಡಿಯನ್ನು ಗುರುತಿಸಿಕೊಂಡ ಬಳಿಕ ಮತ್ತೊಂದು ಕಡೆಗೆ ಹೋಗುವುದಿಲ್ಲ. ಚಿರತೆಗಳು ತಮ್ಮ ಗಡಿ ಪ್ರದೇಶವನ್ನು ಆಗಾಗ್ಗೆ ಬದಲಿಸುತ್ತಿರುತ್ತವೆ' ಎಂದು ವನ್ಯಜೀವಿ ಛಾಯಾಗ್ರಾಹಕ ಜಿ.ಎಸ್.ರವಿಶಂಕರ್ ತಿಳಿಸಿದರು.

ಮೂಲ್ಕಿ (ದಕ್ಷಿಣ ಕನ್ನಡ) ವರದಿ : ತಾಲ್ಲೂಕಿನ ಕಿನ್ನಿಗೋಳಿ ಸಮೀಪದ ಐಕಳ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಉಳೆಪಾಡಿ ಮಿತ್ತಬೆಟ್ಟು ಬಳಿಯ ಗುಡ್ಡದಲ್ಲಿ ಮಂಗಳವಾರ ಉರುಳಿಗೆ ಬಿದ್ದು ಚಿರತೆ ಮೃತಪಟ್ಟಿದೆ.

ಮಿತ್ತಬೆಟ್ಟು ಬಳಿ ಸ್ಥಳೀಯರು ಕಾಡು ಪ್ರಾಣಿಗಳ ಹಾವಳಿ ತಡೆಯಲಾರದೆ ಉರುಳು ಇಟ್ಟಿದ್ದರು. ಆಹಾರ ಹುಡುಕಿ ಬಂದಿದ್ದ ಚಿರತೆ ರಾತ್ರಿ ವೇಳೆ ಉರುಳಿಗೆ ಬಿದ್ದಿರಬಹುದು ಎಂದು ಶಂಕಿಸಲಾಗಿದೆ.

ಸ್ಥಳೀಯ ಮನೆಯವರು ಗುಡ್ಡದಲ್ಲಿ ನಾಯಿ ಬೊಗಳುವ ಶಬ್ದ ಕೇಳಿ ಸ್ಥಳಕ್ಕೆ ತೆರಳಿದಾಗ ಚಿರತೆ ಒದ್ದಾಡುತ್ತಿತ್ತು. ಸ್ವಲ್ಪ ಹೊತ್ತಿನಲ್ಲೇ ಅದು ಮೃತಪಟ್ಟಿತು. ಅರಣ್ಯಾಧಿಕಾರಿಗಳು ಪರಿಶೀಲನೆ ನಡೆಸಿ ಚಿರತೆಯ ಶವವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಿದ್ದಾರೆ.

ಕಿನ್ನಿಗೋಳಿ ಸುತ್ತಮುತ್ತ ಚಿರತೆ ಹಾವಳಿ ಹೆಚ್ಚಾಗಿದ್ದು, ಸಾಕು ನಾಯಿಗಳ ಸಹಿತ ಕೋಳಿಗಳನ್ನು ಕೊಂದು ಹಾಕುತ್ತಿತ್ತು.

ಕೋಮುದ್ವೇಷ ನಿಗ್ರಹ ಘಟಕ

ಒಂದನೇ ಪುಟದಿಂದ...


'ಮತೀಯ ಗೂಂಡಾಗಿರಿ ಪ್ರಕರಣಗಳಿಂದ ಪೊಲೀಸ್ ಇಲಾಖೆಗೂ ಕೆಟ್ಟ ಹೆಸರು ಬರುತ್ತಿದೆ. ಇಂತಹ ಪ್ರಕರಣಗಳು ನಡೆಯದಂತೆ ತಡೆಯುವುದು ಮತ್ತು ಈ ಪ್ರಕರಣಗಳಲ್ಲಿ ಆರೋಪಿಗಳಿಗೆ ಶಿಕ್ಷೆ ಆಗುವಂತೆ ನೋಡಿಕೊಳ್ಳುವುದು ಪೊಲೀಸ್ ಅಧಿಕಾರಿಗಳ ಜವಾಬ್ದಾರಿ. ಇಂತಹ ಪ್ರಕರಣಗಳನ್ನು ಆಗಾಗ ಪರಿಶೀಲಿಸಿ, ಈ ಕುರಿತು ಕ್ರಮ ಕೈಗೊಳ್ಳಬೇಕು. ಇಂತಹ ಕೃತ್ಯಗಳಲ್ಲಿ ತೊಡಗಿರುವವರನ್ನು ಗಡಿಪಾರು ಮಾಡುವುದಕ್ಕೂ ಅವಕಾಶ ಇದೆ' ಎಂದರು.

'ಜಿಲ್ಲೆಯಲ್ಲಿ ಈಚೆಗೆ ಕೋಮುದ್ವೇಷದಿಂದಾಗಿ ನಡೆದ ಆರೇಳು ಕೊಲೆ ಪ್ರಕರಣಗಳಲ್ಲಿ ಕೆಲವು ಸಂತ್ರಸ್ತ ಕುಟುಂಬಗಳಿಗೆ ಸರ್ಕಾರದಿಂದ ಪರಿಹಾರ ನೀಡಿಲ್ಲ ಎಂಬ ದೂರು ಇದೆ. ಮಸೂದ್, ಫಾಝಿಲ್, ದೀಪಕ್ ರಾವ್, ಜಲೀಲ್ ಕುಟುಂಬಗಳಿಗೂ ಪರಿಹಾರ ನೀಡುವ ಬಗ್ಗೆ ಪ್ರಸ್ತಾಪ ಸಲ್ಲಿಸಲು ಸೂಚನೆ ನೀಡಿದ್ದೇನೆ. ಈ ಬಗ್ಗೆ ಸರ್ಕಾರ ಶೀಘ್ರವೇ ಕ್ರಮ ಕೈಗೊಳ್ಳಲಿದೆ' ಎಂದರು.

'ಎ.ಜಿ. ಸಲಹೆ ಆಧರಿಸಿ ಕ್ರಮ'

'ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ನೇಮಕಾತಿ ಸಂಬಂಧ ಅಡ್ವೊಕೇಟ್ ಜನರಲ್ ಅವರ ಸಲಹೆ ಪಡೆದು ಸರ್ಕಾರ ಮುಂದಿನ ಕ್ರಮ ಕೈಗೊಳ್ಳಲಿದೆ' ಎಂದು ಡಾ.ಜಿ.ಪರಮೇಶ್ವರ ತಿಳಿಸಿದರು.

'ನೇಮಕಾತಿ ಪರೀಕ್ಷೆಗೆ ಹಾಜರಾಗಿದ್ದ ಅಭ್ಯರ್ಥಿಗಳು ಹಾಗೂ ಕೆಲವು ಆರೋಪಿಗಳು ಹೈಕೋರ್ಟ್ ಮೊರೆ ಹೋಗಿದ್ದರು. ಈ ಪರೀಕ್ಷೆ ನಡೆದು ಎರಡು ವರ್ಷಗಳಾಗಿವೆ. ನೇಮಕಾತಿಗೆ ಮರುಪರೀಕ್ಷೆ ನಡೆಸಬೇಕೇ ಅಥವಾ ಹಿಂದಿನ ಪರೀಕ್ಷೆ ಅಂಕಗಳನ್ನೇ ಪರಿಗಣಿಸಿ ನೇಮಕಾತಿ ಮುಂದುವರಿಸಬೇಕೇ ಎಂಬ ಜಿಜ್ಞಾಸೆ ಇದೆ. ಈ ಬಗ್ಗೆ ಅಡ್ವೊಕೇಟ್ ಜನರಲ್ ಜೊತೆ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳುತ್ತೇವೆ' ಎಂದರು. 'ಬಿಟ್ ಕಾಯಿನ್ ಹಗರಣದ ಮರು ತನಿಖೆ ಬಗ್ಗೆಯೂ ಪರಿಶೀಲಿಸುತ್ತೇವೆ. ಆರೋಪಿ ಯಾರೇ ಇರಲಿ, ಅವರ ವಿರುದ್ಧ ಕ್ರಮ ನಿಶ್ಚಿತ' ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.



❦ ಸುಭಾಷಿತ ❦

ನಿನ್ನೆ ನಾನು ಬುದ್ಧಿವಂತನಾಗಿದ್ದೆ. ಹೀಗಾಗಿ, ಜಗತ್ತನ್ನು ಬದಲಾಯಿಸಲು ಬಯಸಿದ್ದೆ. ಇಂದು ನಾನು ವಿವೇಕಿಯಾಗಿದ್ದೇನೆ. ಹೀಗಾಗಿ, ನನ್ನಲ್ಲಿ ನಾನು ಬದಲಾವಣೆ ತಂದುಕೊಳ್ಳುತ್ತಿದ್ದೇನೆ. -ರೂಮಿ

ದೇಶದ್ರೋಹ ಕುರಿತ ಕಾನೂನು ಜನರಿಗೆ ಅಪಚಾರ ಎಸಗಿದ ಆಯೋಗ

ಭಾರತೀಯ ದಂಡ ಸಂಹಿತೆಯಲ್ಲಿ (ಐಪಿಸಿ) ಇರುವ, 'ದೇಶದ್ರೋಹ'ಕ್ಕೆ ಸಂಬಂಧಿಸಿದ ಕಾನೂನನ್ನು ಉಳಿಸಿಕೊಳ್ಳಬೇಕು; ಅಷ್ಟೇ ಅಲ್ಲ, ಆ ಕಾನೂನಿನ ಅಡಿಯಲ್ಲಿ ಇನ್ನಷ್ಟು ಕಠಿಣ ಶಿಕ್ಷೆಗೆ ಅವಕಾಶ ಕಲ್ಪಿಸಬೇಕು ಎಂದು ಹೇಳುವ ಮೂಲಕ ಕೇಂದ್ರ ಕಾನೂನು ಆಯೋಗವು ದೇಶದ ಜನರಿಗೆ ಅಪಚಾರ ಎಸಗಿದೆ. 'ದೇಶದ್ರೋಹ'ದ ಅಪರಾಧ ಎಸಗಿದವರ ವಿರುದ್ಧ ಕ್ರಮ ಜರುಗಿಸಲು ಇರುವ ಐಪಿಸಿಯ ಸೆಕ್ಷನ್ 124(ಎ) ಅನ್ನು ರದ್ದು ಮಾಡಿದ್ದೇ ಆದಲ್ಲಿ, 'ದೇಶದ ಏಕತೆ ಹಾಗೂ ಭದ್ರತೆಯ ಮೇಲೆ ಗಂಭೀರ ಹಾಗೂ ಕೆಟ್ಟ ಪರಿಣಾಮಗಳು ಉಂಟಾಗಬಹುದು' ಎಂದು ಆಯೋಗವು ಈಚಿನ ವರದಿಯಲ್ಲಿ ವಾದಿಸಿದೆ. ಐಪಿಸಿ ಸೆಕ್ಷನ್ 124(ಎ) ವಿಚಾರವಾಗಿ ಅಭಿಪ್ರಾಯ ಕೊಡುವಂತೆ ಕೇಂದ್ರವು ಕಾನೂನು ಆಯೋಗವನ್ನು ಕೋರಿತ್ತು. ಈ ಸೆಕ್ಷನ್ ಬಳಕೆ ಮಾಡುವ ಸಂದರ್ಭದಲ್ಲಿ ಪ್ರಾಥಮಿಕ ತನಿಖೆಯನ್ನು ಕಡ್ಡಾಯವಾಗಿಸಬೇಕು ಹಾಗೂ ಕೆಲವು ರಕ್ಷಣೆಗಳನ್ನು ಒದಗಿಸಬೇಕು ಎಂದು ಕೂಡ ಆಯೋಗವು ಹೇಳಿದೆ. ದೇಶದ್ರೋಹಕ್ಕೆ ಸಂಬಂಧಿಸಿದ ಕಾನೂನನ್ನು ಮರುಪರಿಶೀಲನೆ ಮಾಡುವುದಾಗಿ ಕೇಂದ್ರವು ಸುಪ್ರೀಂ ಕೋರ್ಟ್‌ಗೆ ತಿಳಿಸಿದ ಸರಿಸುಮಾರು ಒಂದು ವರ್ಷದ ನಂತರದಲ್ಲಿ ಆಯೋಗವು ವರದಿ ಸಲ್ಲಿಸಿದೆ.

ಮರುಪರಿಶೀಲನೆ ಮಾಡುವುದಾಗಿ ಸರ್ಕಾರ ಹೇಳಿದ ನಂತರದಲ್ಲಿ, ಐಪಿಸಿಯ ಸೆಕ್ಷನ್ 124(ಎ) ಅಡಿಯಲ್ಲಿ ಯಾವುದೇ ಪ್ರಥಮ ಮಾಹಿತಿ ವರದಿ (ಎಫ್‌ಐಆರ್) ದಾಖಲು ಮಾಡಬಾರದು ಎಂದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಸುಪ್ರೀಂ ಕೋರ್ಟ್ ಸೂಚನೆ ನೀಡಿತ್ತು. ಅಲ್ಲದೆ, ಈ ಸೆಕ್ಷನ್ ಅಡಿಯಲ್ಲಿ ಅದಾಗಲೇ ದಾಖಲಾಗಿದ್ದ ಪ್ರಕರಣಗಳ ವಿಚಾರಣೆಯನ್ನು ಅಮಾನತಿನಲ್ಲಿ ಇರಿಸಿತ್ತು. ಮಹಾತ್ಮ ಗಾಂಧಿ, ಬಾಲಗಂಗಾಧರ ತಿಲಕ್ ಅವರಂತಹ ಸ್ವಾತಂತ್ರ್ಯ ಹೋರಾಟಗಾರರ ವಿರುದ್ಧ ಬಳಕೆಯಾಗುತ್ತಿದ್ದ, ವಸಾಹತು ಕಾಲದ ಈ ಕಾನೂನನ್ನು ಕೇಂದ್ರವು ಏಕೆ ರದ್ದು ಮಾಡುತ್ತಿಲ್ಲ ಎಂದು ಕೂಡ ಸುಪ್ರೀಂ ಕೋರ್ಟ್ ಪ್ರಶ್ನಿಸಿತ್ತು. ಈ ಪ್ರಶ್ನೆಯು ಈಗಲೂ ಬಹಳ ಮಹತ್ವ ಪಡೆಯುತ್ತದೆ. ಏಕೆಂದರೆ, ಈಚಿನ ದಿನಗಳಲ್ಲಿ ಇದನ್ನು ವಿರೋಧ ಪಕ್ಷಗಳ ನಾಯಕರ ವಿರುದ್ಧ, ಸರ್ಕಾರದ ಟೀಕಾಕಾರರ ವಿರುದ್ಧ, ಸಾಮಾಜಿಕ ಕಾರ್ಯಕರ್ತರು ಹಾಗೂ ಮಾಧ್ಯಮ ಪ್ರತಿನಿಧಿಗಳ ವಿರುದ್ಧ ಮನಸ್ಸಿಗೆ ತೋಚಿದಂತೆ ಬಳಕೆ ಮಾಡಲಾಗಿದೆ. ಭಿನ್ನ ಅಭಿಪ್ರಾಯಗಳನ್ನು ಹತ್ತಿಕ್ಕಲು ಹಾಗೂ ಟೀಕೆಗಳ ಸದ್ದಡಗಿಸಲು ಇದನ್ನು ಬಳಸಲಾಗಿದೆ. ಈಗ ಕಾನೂನು ಆಯೋಗ ಮಾಡಿರುವ ಶಿಫಾರಸು ಪ್ರತಿಗಾಮಿತನದಿಂದ ಕೂಡಿದೆ. ಇದು ಯಾವುದೇ ಪ್ರಜಾತಂತ್ರ ವ್ಯವಸ್ಥೆಯ ಕನಿಷ್ಠ ಅಗತ್ಯಗಳಲ್ಲಿ ಒಂದಾಗಿರುವ ಅಭಿವ್ಯಕ್ತಿ ಸ್ವಾತಂತ್ರ್ಯದ ಮಹತ್ವಕ್ಕೆ ಧಕ್ಕೆ ತರುತ್ತದೆ. ಈ ಸೆಕ್ಷನ್ ಅಡಿ ಕೊಡಬಹುದಾದ ಶಿಕ್ಷೆಯನ್ನು ಈಗಿನ ಮೂರು ವರ್ಷಗಳ ಬದಲಿಗೆ ಏಳು ವರ್ಷಗಳಿಗೆ ಹೆಚ್ಚಿಸಬೇಕು ಎಂದು ಆಯೋಗವು ಹೇಳಿದೆ. 'ದೇಶದ್ರೋಹ' ಎಂದು ಆರೋಪಿಸುವ ಕೃತ್ಯವು ಹಿಂಸಾಚಾರಕ್ಕೆ ಅಥವಾ ಸಾರ್ವಜನಿಕ ಅವ್ಯವಸ್ಥೆಗೆ ಕಾರಣವಾಗಿದ್ದರೆ ಅಥವಾ ಕಾರಣವಾಗುವಂತೆ ಇದ್ದರೆ ಮಾತ್ರ ಈ ಸೆಕ್ಷನ್ ಬಳಕೆ ಮಾಡಬಹುದು ಎಂದು ಸುಪ್ರೀಂ ಕೋರ್ಟ್ ಹೇಳಿತ್ತು. ಆದರೆ ಈಗ ಆಯೋಗ ಮಾಡಿರುವ ಶಿಫಾರಸು ಆ ವ್ಯಾಪ್ತಿಯನ್ನು ಮೀರಿದೆ. ಹಿಂಸಾಚಾರಕ್ಕೆ ಪ್ರಚೋದನೆ ನೀಡಲು ಒಲವು ಹೊಂದಿರುವುದು ಕೂಡ ಈ ಸೆಕ್ಷನ್ ಅಡಿ ಶಿಕ್ಷೆಗೆ ಅರ್ಹವಾಗುತ್ತದೆ; ಹಿಂಸಾಚಾರವು ವಾಸ್ತವದಲ್ಲಿ ನಡೆದಿರಬೇಕು ಎಂದೇನೂ ಇಲ್ಲ. ಶಿಫಾರಸುಗಳನ್ನು ಒಪ್ಪಿಕೊಂಡರೆ, 'ಒಲವು' ಇತ್ತೇ ಎಂಬುದನ್ನು ಪೊಲೀಸರು ತೀರ್ಮಾನಿಸುವ ಕಾರಣ ಈ ಸೆಕ್ಷನ್ ಇನ್ನಷ್ಟು ಕರಾಳವಾಗಲಿದೆ.



ಈ ಪ್ರಕರಣದಲ್ಲಿ ಕಾನೂನು ಆಯೋಗವು ಸರ್ಕಾರಕ್ಕೆ ವಿವೇಕಯುತ ಮಾರ್ಗದರ್ಶನ ನೀಡುವ ಬದಲು, ಸರ್ಕಾರದ ಮುಖವಾಣಿಯ ರೀತಿಯಲ್ಲಿ ವರ್ತಿಸಿದೆ

ಈ ಪ್ರಕರಣದಲ್ಲಿ ಕಾನೂನು ಆಯೋಗವು ಸರ್ಕಾರಕ್ಕೆ ವಿವೇಕಯುತ ಮಾರ್ಗದರ್ಶನ ನೀಡುವ ಬದಲು, ಸರ್ಕಾರದ ಮುಖವಾಣಿಯ ರೀತಿಯಲ್ಲಿ ವರ್ತಿಸಿದೆ. ವಿಸ್ತಾರ ಕಾಣುತ್ತಲೇ ಇರುವ ಸಾಮಾಜಿಕ ಜಾಲತಾಣಗಳು, ಈಶಾನ್ಯ ರಾಜ್ಯಗಳು ಹಾಗೂ ಕಾಶ್ಮೀರದಲ್ಲಿ ಉಗ್ರಗಾಮಿಗಳು ಮತ್ತು ಮಾವೊವಾದಿಗಳ ಚಟುವಟಿಕೆಗಳು ತಾನು ಬಿಗಿ ನಿಲುವು ತಾಳಲು ಒಂದು ಕಾರಣ ಎಂದು ಆಯೋಗವು ಹೇಳಿದೆ. ಇದು ಸರ್ಕಾರದ ವಾದ ಕೂಡ ಹೌದು. ಸರ್ಕಾರವು 'ನಗರವಾಸಿ ನಕ್ಸಲರು' ಮತ್ತು 'ತುಕ್ಡೆ ತುಕ್ಡೆ ಗ್ಯಾಂಗ್'ನ ಬೆದರಿಕೆಯ ಬಗ್ಗೆ ಒತ್ತಿ ಹೇಳುತ್ತಿರುತ್ತದೆ. ವ್ಯಂಗ್ಯವೆಂದರೆ, 2018ರಲ್ಲಿ ಕಾನೂನು ಆಯೋಗವು ಈ ಕಾನೂನನ್ನು ಪುನರ್ ಪರಿಶೀಲಿಸಬೇಕು ಎಂದು ಹೇಳಿತ್ತು. ಬ್ರಿಟನ್ ಸೇರಿದಂತೆ ಹಲವು ಪ್ರಜಾತಾಂತ್ರಿಕ ದೇಶಗಳು ಈ ಬಗೆಯ ಕಾನೂನನ್ನು ರದ್ದು ಮಾಡಿವೆ. ಭಾರತ ಕೂಡ ಅದೇ ಹಾದಿಯಲ್ಲಿ ಸಾಗಬೇಕು. ಈ ವಿಚಾರದಲ್ಲಿ ಸುಪ್ರೀಂ ಕೋರ್ಟ್ ಸರಿಯಾದ ಕ್ರಮವನ್ನು ಕೈಗೊಳ್ಳಲಿದೆ ಎಂಬ ಆಸೆ ಇರಿಸಿಕೊಳ್ಳಬಹುದು.

ದಿನದ ಟ್ವೀಟ್

ಮನವಿ ಪರಿಗಣಿಸುವರೇ?



ಆರ್ಥಿಕವಾಗಿ ಸಬಲರಾಗಿರುವ ನಾಗರಿಕರು ಗ್ಯಾರಂಟಿ ಸೌಲಭ್ಯಗಳನ್ನು ತ್ಯಜಿಸಿ ಸರ್ಕಾರದ ಹೊರೆಯನ್ನು ತಗ್ಗಿಸುವಂತೆ ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮನವಿ ಮಾಡಿದ್ದಾರೆ. 'ಗೃಹಜ್ಯೋತಿ ಯೋಜನೆಯನ್ನು ಬಿಟ್ಟುಕೊಟ್ಟರೆ, ಆ ಹಣವನ್ನು ಅಭಿವೃದ್ಧಿ ಕಾರ್ಯಗಳಿಗೆ ಬಳಸಬಹುದು' ಎಂದಿದ್ದಾರೆ. ಫಲಾನುಭವಿಗಳು ಈ ಮನವಿಯನ್ನು ಮನ್ನಿಸುವರೇ?!

ನಬಿಲಾ ಜಮಾಲ್, ಪತ್ರಕರ್ತೆ

ಕಿಡಿನುಡಿ



ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯ ಸೋಲು ಅನಿರೀಕ್ಷಿತ. ರಾಜ್ಯದ ಜನತೆ ಕಾಂಗ್ರೆಸ್‌ಗೆ ಜನಾದೇಶ ನೀಡಿದ್ದಾರೆ. ನಾವು ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ಹಿಂದೆ ಅದು ನಡೆಯುತ್ತಿತ್ತು. ಈಗ ಆತ್ಮಾವಲೋಕನಕ್ಕೆ ಆತ್ಮಗಳೇ ಇಲ್ಲದಂತಾಗಿವೆ.

ಡಿ.ವಿ.ಸದಾನಂದ ಗೌಡ, ಬಿಜೆಪಿ ಸಂಸದ

25 ವರ್ಷಗಳ ಹಿಂದೆ

ಭಾನುವಾರ, 7-6-1998

- **ಮುಂದಿನ ತಿಂಗಳು ಭಾರತ- ಪಾಕ್ ಪ್ರಧಾನಿಗಳ ಮಾತುಕತೆ ನಿರೀಕ್ಷೆ**

ಇಸ್ಲಾಮಾಬಾದ್, ಜೂನ್ 6 (ಪಿಟಿಐ)– ದಕ್ಷಿಣ ಏಷ್ಯಾದಲ್ಲಿನ ಶಸ್ತ್ರಾಸ್ತ್ರ ಪೈಪೋಟಿಗೆ ಸಂಬಂಧಿಸಿದಂತೆ ಮಾತುಕತೆಗೆ ಪಾಕ್ ಪ್ರಧಾನಿ ಅವರು ನೀಡಿರುವ ಆಹ್ವಾನವನ್ನು ಭಾರತದ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಸ್ವಾಗತಿಸಿದ್ದಾರೆ. ಮುಂದಿನ ತಿಂಗಳು ಶ್ರೀಲಂಕಾದ ಕೊಲಂಬೊದಲ್ಲಿ ನಡೆಯುವ ಸಾರ್ಕ್ ದೇಶಗಳ ಸಮಾವೇಶದಲ್ಲಿ ಉಭಯ ದೇಶಗಳ ಪ್ರಧಾನಿಗಳು ಮಾತುಕತೆ ನಡೆಸುವ ಸಾಧ್ಯತೆ ಇದೆ.

ಎರಡೂ ದೇಶಗಳು ಅಣ್ವಸ್ತ್ರ ಪರೀಕ್ಷೆ ನಡೆಸಿದ ನಂತರ ಉಂಟಾಗಿರುವ ಬಿಕ್ಕಟ್ಟು ಪರಿಹಾರಕ್ಕೆ ಈ ಮಾತುಕತೆ ನೆರವಾಗಬಹುದೆಂದು ಭಾವಿಸಲಾಗಿದೆ. ಸಾರ್ಕ್ ಸಮ್ಮೇಳನದ ಸಮಯದಲ್ಲಿ ಸಾಧಾರಣವಾಗಿ ಎರಡೂ ದೇಶಗಳ ಪ್ರಧಾನಿಗಳು ಮಾತುಕತೆ ನಡೆಸುತ್ತಾರೆ ಎಂದು ಪಾಕ್ ವಿದೇಶಾಂಗ ಸಚಿವಾಲಯದ ವಕ್ತಾರ ತಾರಿಖ್ ಅಲ್ತಾಫ್ ಅವರು ತಿಳಿಸಿದರು.

- **ರಾಮಮಂದಿರ ನಿರ್ಮಾಣ: ಭರದ ಸಿದ್ಧತೆ- ವಿಎಚ್‌ಪಿ**

ನವದೆಹಲಿ, ಜೂನ್ 6 (ಪಿಟಿಐ)– ಅಯೋಧ್ಯೆಯಲ್ಲಿ ರಾಮಮಂದಿರವನ್ನು ನಿರ್ಮಾಣ ಮಾಡಲು ಭರದ ಸಿದ್ಧತೆ ನಡೆದಿದ್ದು, ಸುಪ್ರೀಂ ಕೋರ್ಟ್ ಸೇರಿದಂತೆ ಭೂಮಿಯಲ್ಲಿನ ಯಾವುದೇ ಶಕ್ತಿ ಅದನ್ನು ತಡೆಗಟ್ಟಲು ಸಾಧ್ಯವಿಲ್ಲ ಎಂದು ವಿಶ್ವ ಹಿಂದೂ ಪರಿಷತ್ತಿನ (ವಿಎಚ್‌ಪಿ) ಪ್ರಧಾನ ಕಾರ್ಯದರ್ಶಿ ಆಚಾರ್ಯ ಗಿರಿರಾಜ ಕಿಶೋರ್ ಅವರು ಹೇಳಿದ್ದಾರೆ.

50 ವರ್ಷಗಳ ಹಿಂದೆ

ಗುರುವಾರ, 7-6-1973

- **ಸಮಿತಿ ಸದಸ್ಯರು ಭಿನ್ನಮತ ವ್ಯಕ್ತಪಡಿಸಿದರೂ ಅಧ್ಯಕ್ಷರು ಸಹಿ ಹಾಕಿದರೆ ವರದಿ ಕ್ರಮಬದ್ಧ**

ಬೆಂಗಳೂರು, ಜೂನ್ 6– ವಿಧಾನ ಮಂಡಲದ ಸಮಿತಿಯ ವರದಿ ಬಗ್ಗೆ ಸಮಿತಿಯ ಸದಸ್ಯರೊಬ್ಬರು ಭಿನ್ನಾಭಿಪ್ರಾಯ ವ್ಯಕ್ತಪಡಿಸಿದರೂ, ಸಮಿತಿಯ ಅಧ್ಯಕ್ಷರು ಸಹಿ ಹಾಕಿದ್ದರೆ ಆ ವರದಿ ಕ್ರಮಬದ್ಧವಾಗಿರುತ್ತದೆ ಎಂದು ವಿಧಾನ ಪರಿಷತ್ತಿನಲ್ಲಿ ಇಂದು ಸಭಾಪತಿ ಶ್ರೀ ಎಸ್.ಡಿ.ಗಾಂವ್‌ಕರ್ ತಿಳಿಸಿದರು.

'ಸಂಸದೀಯ ಸಮಿತಿಗಳ ವರದಿಯು ಹಾಜರಿದ್ದ ಹಾಗೂ ಮತ ನೀಡಿದ ಸಮಿತಿಯ ಬಹುಸಂಖ್ಯಾತ ಸದಸ್ಯರ ತೀರ್ಮಾನಗಳ ಆಧಾರದ ಮೇಲಿರುತ್ತದೆ. ವಿಧೇಯಕಗಳಿಗೆ ಸಂಬಂಧಿಸಿದ ಪರಿಶೀಲಕ ಅಥವಾ ಸಂಯುಕ್ತ ಪರಿಶೀಲಕ ಸಮಿತಿಗಳ ಹೊರತಾಗಿ ಇತರ ಸಮಿತಿಗಳ ವರದಿಗಳಲ್ಲಿ, ಭಿನ್ನಾಭಿಪ್ರಾಯಗಳನ್ನು ಸೇರಿಸುವುದಿಲ್ಲ' ಎಂದು ಹೇಳಿದರು.


- **ಕೋಲಾರ ಜಿಲ್ಲೆಯಲ್ಲಿ ಕೆರೆ ಹೂಳೆತ್ತುವ ಕಾರ್ಯ ನಿಲುಗಡೆ**

ಬೆಂಗಳೂರು, ಜೂನ್ 6– 'ಕೋಲಾರ ಜಿಲ್ಲೆಯಲ್ಲಿನ ಕೆರೆಗಳಲ್ಲಿನ ಹೂಳು ತೆಗೆಯುವುದು ಆರ್ಥಿಕವಾಗಿ ಸರಿ ಹೋಗುವುದಿಲ್ಲ ಎಂದು ಕೈಬಿಡಲಾಗಿದೆ' ಎಂದು ಲೋಕೋಪಯೋಗಿ ಸಚಿವ ಶ್ರೀ ಎಚ್.ಎಂ.ಚನ್ನಬಸಪ್ಪ ಅವರು ಇಂದು ವಿಧಾನಪರಿಷತ್ತಿನಲ್ಲಿ ತಿಳಿಸಿದರು.

ಶ್ರೀ ಎಂ.ವಿ.ವೆಂಕಟಪ್ಪ ಅವರ ಪ್ರಶ್ನೆಗಳಿಗೆ ಉತ್ತರವಿತ್ತ ಸಚಿವರು, ಕೋಲಾರ ಜಿಲ್ಲೆಯಲ್ಲಿ 1647 ಕೆರೆಗಳು ಇವೆಯೆಂದೂ, ಅನೇಕ ವರ್ಷಗಳಿಂದ ಕೆರೆಗಳಲ್ಲಿ ಹೂಳು ತುಂಬಿರುವುದರಿಂದ ಪ್ರತಿವರ್ಷ ಕೆರೆಗಳಲ್ಲಿ ನಿಲ್ಲುವ ನೀರಿನ ಪ್ರಮಾಣ ಕಡಿಮೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆಂದೂ ಹೇಳಿದರು.

ಹಿಂದುತ್ವದ ಪ್ರಖರ ಚಿಂತಕ ಮಲ್ಕಾನಿ ಅವರು ಟಿಪ್ಪು ಕುರಿತು ಹರಿಸಿರುವ ಪ್ರಶಂಸೆಯ ಹೊಳೆ ಹೇಳುವುದೇ ಬೇರೆ...

ಟಿಪ್ಪು ಹಿರಿಮೆಗೆ ಮಸಿ ಬಳಿಯಲು ಸಾಧ್ಯವೇ?



ವಿಶ್ಲೇಷಣೆ

ಪಿ.ಸಾಯಿನಾಥ್

'ಅಕ್ಬರ್, ದಾರಾ ಶಿಕೋ ಹಾಗೂ ಟಿಪ್ಪು ಸುಲ್ತಾನ್ ನಂತಹವರು ಹೀರೊಗಳೆಂದು ಪರಿಗಣಿಸಲ್ಪಡಬೇಕೆ ವಿನಾ ಖಳನಾಯಕರಾಗಿ ಅಲ್ಲ ಎನ್ನುವುದು ನನ್ನ ಅಭಿಪ್ರಾಯ'.

'ಟಿಪ್ಪುವಿನ ಬಗ್ಗೆ ಹೆಚ್ಚೆಚ್ಚು ಓದಿದಷ್ಟೂ ನನಗೆ ಆತನ ವ್ಯಕ್ತಿತ್ವದ ಹಿರಿಮೆ ಮನವರಿಕೆಯಾಗಿದೆ'.

'... (ಟಿಪ್ಪು ಸುಲ್ತಾನ್) ಮಾತ್ರವೇ ಬ್ರಿಟಿಷರ ವಿರುದ್ಧ ಹೋರಾಡುತ್ತಾ ಮಡಿದ ರಾಜಕುಮಾರ'.

'ಬ್ರಿಟಿಷರ ವಿರುದ್ಧ ಹೋರಾಡುವುದಷ್ಟಕ್ಕೇ ಟಿಪ್ಪು ತೃಪ್ತನಾಗಲಿಲ್ಲ, ಶಂಕಿತರಿಗೆ ಚಿತ್ರಹಿಂಸೆ ನೀಡುವುದನ್ನೂ ಸಾರ್ವಜನಿಕ ಕೆಲಸಗಳಿಗೆ ಜನರನ್ನು ಬಲವಂತವಾಗಿ ಕೂಲಿಗಳನ್ನಾಗಿ ಬಳಸಿಕೊಳ್ಳುವುದನ್ನೂ ವಿರೋಧಿಸಿದ್ದ. ಈತ ಪಾನ ನಿಷೇಧವನ್ನು ಜಾರಿಗೆ ತಂದ. ಮರಗಳನ್ನು ಕಡಿಯುವುದನ್ನು ವಿರೋಧಿಸಿದ. ಪ್ರತಿ ನಾಲ್ಕು ಮೈಲಿಗೆ ಒಂದು ಶಾಲೆಯನ್ನು ತೆರೆಯಲು ಯತ್ನಿಸಿದ. ಯಾವಾಗ ಶಸ್ತ್ರ ಉತ್ಪಾದನಾ ಕಾರ್ಖಾನೆಯಿಂದ ಕಾವೇರಿ ನದಿ ಕಲುಷಿತವಾಗುತ್ತಿದೆ ಎಂದು ಗೊತ್ತಾಯಿತೋ ತಕ್ಷಣ ಆತ ಆ ಕಾರ್ಖಾನೆಯನ್ನೇ ಸ್ಥಳಾಂತರಿಸಿದ. ಪರಿಸರವಾದಿಗಳಿಗೆ ಮಾದರಿ ಎನ್ನಬಹುದಾದ ರಾಜನೊಬ್ಬ ಅವನೊಳಗಿದ್ದ'.

'ಭಾರತದ ರಾಜರುಗಳ ಪೈಕಿ ಟಿಪ್ಪು ಮಾತ್ರವೇ ವಿಶ್ವದೃಷ್ಟಿ ಉಳ್ಳವನಾಗಿದ್ದ'.

'ಟಿಪ್ಪುವಿನ ಮರಣದಿಂದಾಗಿ ಭಾರತದ ಸ್ವಾತಂತ್ರ್ಯ ಒಂದೂವರೆ ಶತಮಾನದಷ್ಟು ಮುಂದೆ ಹೋಯಿತು'.

* * *

ಈ ಮೇಲಿನ ಹೇಳಿಕೆಗಳೆಲ್ಲವೂ ಕರ್ನಾಟಕದಲ್ಲಿ ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಕಾಂಗ್ರೆಸ್ ನೇತೃತ್ವದ ಸರ್ಕಾರವು ಪಠ್ಯಪುಸ್ತಕಗಳ ಮೇಲೆ ಬಿಜೆಪಿ ನೇತೃತ್ವದ ಸರ್ಕಾರ ನಡೆಸಿದ ದೌರ್ಜನ್ಯಕ್ಕೆ ಪ್ರತಿಯಾಗಿ ತೂರಿಸಲು ಯತ್ನಿಸುತ್ತಿರುವ ಟಿಪ್ಪು ಸುಲ್ತಾನನ ಬಗೆಗಿನ ಪರಿಷ್ಕೃತ ಅಧ್ಯಾಯದಲ್ಲಿ ಇರುವಂತಹವಲ್ಲ. ಅಥವಾ ಇವು ಟಿಪ್ಪುವಿನ ಆಸ್ಥಾನ ಚರಿತ್ರಕಾರರ ಕೊನೆಯ ಚೀರಾಟವೂ ಅಲ್ಲ. ಟಿಪ್ಪು ಮರಣ ಹೊಂದಿದ್ದು 1799ರಲ್ಲಿ. ಹಾಗಾಗಿ ಈ ರೀತಿಯ ಹೇಳಿಕೆ, ಅದರಲ್ಲೂ ಭಾರತದ ಸ್ವಾತಂತ್ರ್ಯವೇ ಒಂದೂವರೆ ಶತಮಾನದಷ್ಟು ಮುಂದಕ್ಕೆ ಹೋಯಿತು ಎನ್ನುವಂತಹ ಹೇಳಿಕೆ ನೀಡಲು ಇಷ್ಟು ದೀರ್ಘಕಾಲ ಇವರ ಪೈಕಿ ಯಾರೂ ಬದುಕಿರಲು ಸಾಧ್ಯವಿಲ್ಲ.

ಈ ಮೇಲಿನ ಹೇಳಿಕೆಗಳನ್ನು ಬರೆದದ್ದು ಹಾಗೂ ಪ್ರಕಟಿಸಿದ್ದು ಬಿಜೆಪಿಯ ಸ್ಥಾಪಕ ಸದಸ್ಯರಲ್ಲೊಬ್ಬರಾದ ಕೆ.ಆರ್.ಮಲ್ಕಾನಿ ಅವರು. ಇವರು ಬಿಜೆಪಿಯ ಉಪಾಧ್ಯಕ್ಷರಾಗಿ ಹಲವಾರು ವರ್ಷ ಕಾರ್ಯನಿರ್ವಹಿಸಿದ್ದರು. ಈ ಮೇಲಿನ ಹೇಳಿಕೆಗಳನ್ನು ನೀವು ಎಲ್ಲೆಡೆಯೂ ಲಭ್ಯವಿರುವ ಅವರ ಕೃತಿ 'ಇಂಡಿಯಾ ಫಸ್ಟ್'ನ (ಪ್ರ: ಓಶನ್ ಬುಕ್ಸ್, 2019) 204ರಿಂದ 207ರವರೆಗಿನ ಪುಟಗಳಲ್ಲಿ ಕಾಣಬಹುದು.

ಕೇವಲ್‌ರಾಮ್ ರತನ್‌ಮಲ್ ಮಲ್ಕಾನಿ ಅವರು ರಾಷ್ಟ್ರೀಯ ಸ್ವಯಂಸೇವಕ ಸಂಘದ ಒಳಗಿನ ರಹಸ್ಯ ಬಂಡುಕೋರರೇನಲ್ಲ. ಅವರು ಆರ್‌ಎಸ್‌ಎಸ್‌ನ ಅತಿಮುಖ್ಯ ಚಿಂತಕರಲ್ಲಿ ಒಬ್ಬರಾಗಿದ್ದರು ಹಾಗೂ ಆ ಸಂಘಟನೆಯ ಮಾಧ್ಯಮ ವ್ಯಕ್ತಿಯೂ ಆಗಿದ್ದರು. 1940ರ ದಶಕದಲ್ಲಿ 'ದಿ ಹಿಂದೂಸ್ತಾನ್ ಟೈಮ್ಸ್'ನಲ್ಲಿ ಕೆಲಕಾಲ ಕೆಲಸ ಮಾಡಿದ್ದರು (ಅದೇ ಸಮಯದಲ್ಲಿ ಅವರು 'ಆರ್ಗನೈಸರ್' ವಾರಪತ್ರಿಕೆಗೂ ಬರೆಯುತ್ತಿದ್ದರು). ಆನಂತರದಲ್ಲಿ ಅವರು ಪೂರ್ಣಾವಧಿಗೆ ಹಿಂದುತ್ವದ ತೆಕ್ಕೆಗೆ ಬಂದರು. ಆರ್‌ಎಸ್‌ಎಸ್‌ನ ದನಿಯಾಗಿದ್ದ 'ಆರ್ಗನೈಸರ್'ಗೆ ಸುಮಾರು 35 ವರ್ಷದಷ್ಟು ದೀರ್ಘಕಾಲ ಸಂಪಾದಕರಾಗಿದ್ದು ಇವರೊಬ್ಬರೇ. ಇದಲ್ಲದೆ ಬಹುತೇಕ ಅಷ್ಟೇ ಸಮಯ 'ಆರ್ಗನೈಸರ್'ನ ಹಿಂದಿ ಆವೃತ್ತಿ 'ಪಾಂಚಜನ್ಯ'ದ ಸಂಪಾದಕರಾಗಿಯೂ ಕೆಲಸ ಮಾಡಿದ್ದರು. 'ಮದರ್‌ಲ್ಯಾಂಡ್'ನ ಸಂಪಾದಕರೂ ಆಗಿದ್ದರು. ಆರ್‌ಎಸ್‌ಎಸ್‌ನಲ್ಲಿ ಆನಂತರ ಯಾರೂ ಅಷ್ಟು ಎತ್ತರ ಏರಿಲ್ಲ. 1980 ಹಾಗೂ 1990ರ ದಶಕಗಳಲ್ಲಿ ಬಹುತೇಕ ಮಾಧ್ಯಮಗಳು ಇವರನ್ನು ಬಿಜೆಪಿಯ ಮುಖ್ಯ ಇಂಗ್ಲಿಷ್ ವಕ್ತಾರ ಎಂದೇ ಗುರುತಿಸಿದ್ದವು.

ಮಲ್ಕಾನಿಯವರ ಈ ಆರ್‌ಎಸ್‌ಎಸ್ ಹೆಗ್ಗುರುತಿನ ಜೊತೆ ಬಿ.ಸಿ.ನಾಗೇಶ್ ಅವರನ್ನು ಹೋಲಿಸಿ ನೋಡಿದರೆ ಅವರು ತೀರಾ ಪೇಲವವಾಗಿ ತೋರುತ್ತಾರೆ. ಅಷ್ಟಕ್ಕೂ ನಾಗೇಶ್ ಎಂಬುವವರು ಯಾರು? ಅವರು ಇತ್ತೀಚೆಗೆ ಸೋತುಸುಣ್ಣವಾದ ಬಿಜೆಪಿ ನೇತೃತ್ವದ ಸರ್ಕಾರದಲ್ಲಿ ಪ್ರಾಥಮಿಕ ಶಿಕ್ಷಣ ಸಚಿವರಾಗಿದ್ದವರು. ರಾಜ್ಯದ ಪಠ್ಯಪುಸ್ತಕಗಳಿಂದ ಟಿಪ್ಪು ಹಾಗೂ ಭಗತ್ ಸಿಂಗ್‌ರನ್ನು ಕಿತ್ತುಹಾಕಲು ನೇತೃತ್ವ ವಹಿಸಿದ್ದವರು.

ಮಲ್ಕಾನಿ ಅವರು ಟಿಪ್ಪು ಬಗ್ಗೆ ಬರೆದ ಲೇಖನವನ್ನು ಒಳಗೊಂಡ ಪುಸ್ತಕಕ್ಕೆ ಹಿಂದುತ್ವದ ಹೀರೊ ಎಲ್.ಕೆ.ಅಡ್ವಾಣಿ ಅವರೇ ಮುನ್ನುಡಿ ಬರೆದಿದ್ದರು. ಮಲ್ಕಾನಿ ಅವರನ್ನು 'ಮಹಾನ್ ಪತ್ರಕರ್ತ' ಎಂದೇ ಅವರು ಬಣ್ಣಿಸುತ್ತಿದ್ದರು. 'ಮಲ್ಕಾನಿ ಅವರಿಗೆ ಪತ್ರಿಕೋದ್ಯಮ ಎನ್ನುವುದು ಬರೀ ಉದ್ಯೋಗವಲ್ಲ. ಅದು ಒಂದು ಸಾಮಾಜಿಕ ಬದ್ಧತೆ' ಎಂದಿದ್ದರು. ಅಷ್ಟೇ ಅಲ್ಲದೆ, 'ನಾನು ಅವರ ಮಾರ್ಗದರ್ಶನದಲ್ಲಿ ಪತ್ರಿಕೋದ್ಯಮದಲ್ಲಿ ತರಬೇತಿ ಪಡೆದಿದ್ದೆ' ಎಂದಿದ್ದರು.

ಮಲ್ಕಾನಿ ಅವರ ಬಗ್ಗೆ ಗೌರವದಿಂದ ಮಾತನಾಡಿದಂತೆ ಬಿ.ಸಿ.ನಾಗೇಶ್ ಅವರ ಬಗ್ಗೆ ಅಥವಾ ಈ ಪಠ್ಯಪುಸ್ತಕ ತಿರುಚಲು ಹೊರಟ 'ತುಕ್ಡೆ ತುಕ್ಡೆ ಗ್ಯಾಂಗ್' ಬಗ್ಗೆ ಯಾರಾದರೂ ಯಾವಾಗಲಾದರೂ ಈ ರೀತಿ ಬರೆದದ್ದಾಗಲಿ, ಮಾತನಾಡಿದ್ದನ್ನಾಗಲಿ ಕಲ್ಪಿಸಿಕೊಳ್ಳುವುದೂ ಅಸಾಧ್ಯ. ಆರ್‌ಎಸ್‌ಎಸ್ ಸಹ ಎಲ್ಲಿಯೂ ಮಲ್ಕಾನಿ ಅವರನ್ನು ನಿರಾಕರಿಸಿಲ್ಲ. ಬದಲಿಗೆ, ಕಳೆದ ವರ್ಷ ಡಿಸೆಂಬರ್ 18- ಮಲ್ಕಾನಿಯವರ ಜನ್ಮಶತಮಾನೋತ್ಸವ ಸಂದರ್ಭದಲ್ಲಿ- ದೆಹಲಿಯ ಭಾರತ ಸಮೂಹ ಮಾಧ್ಯಮ ಸಂಸ್ಥೆಯಲ್ಲಿ ಹಲವರು ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲು ನೆರೆದಿದ್ದರು. ಅವರಲ್ಲಿ ಆರ್ಗನೈಸರ್‌ನ ಈಗಿನ ಸಂಪಾದಕ, ಪತ್ರಕರ್ತ ಪೀಳಿಗೆಯೂ ಇತ್ತು. ಬಿಜೆಪಿಯ ವಕ್ತಾರ, ಖ್ಯಾತ ಪತ್ರಕರ್ತ ಸ್ವಪನ್ ದಾಸ್ ಗುಪ್ತ ಹಾಗೂ ಆರ್ಗನೈಸರ್‌ನ ಸಂಪಾದಕ ಪ್ರಫುಲ್ಲ ಕೇತ್ಕರ್ ಅವರೂ ಇದ್ದರು. ಹಾಗಿದ್ದಾಗ, ಖ್ಯಾತ ಪತ್ರಕರ್ತ ಹಾಗೂ ಇತಿಹಾಸ ತಜ್ಞ ಎಂದೇ ಹಿಂದುತ್ವದ ವಲಯದಲ್ಲಿ ಹೆಸರಾಗಿರುವ ಮಲ್ಕಾನಿ ಅವರು ಇಂಡಿಯಾ ಫಸ್ಟ್‌ನಲ್ಲಿ ಬರೆದಂತಹ ಲೇಖನವನ್ನು ಬರೆಯಲು ಹೇಗೆ ಸಾಧ್ಯ?



ಈಗ ವಾಪಸ್ 1990ಕ್ಕೆ ಹೋಗೋಣ.

ಆಗತಾನೆ ನಟ, ನಿರ್ದೇಶಕ ಸಂಜಯ್ ಖಾನ್ ಅವರ 'ಸ್ವೋರ್ಡ್ ಆಫ್ ಟಿಪ್ಪು ಸುಲ್ತಾನ್' ಪ್ರಸಾರಕ್ಕೆ ಸಜ್ಜಾಗಿತ್ತು. 1990ರ ಫೆಬ್ರುವರಿಯಲ್ಲಿ ದೂರದರ್ಶನವು ಆ ಧಾರಾವಾಹಿಯ ಮೊದಲ ಕಂತನ್ನು (ಒಟ್ಟು 60 ಕಂತು) ಪ್ರಸಾರ ಮಾಡಿತು. ಪ್ರೇಕ್ಷಕರು ಅದನ್ನು ಮೆಚ್ಚಿಕೊಂಡಿದ್ದರು. ಈ ಧಾರಾವಾಹಿ ತೆಲುಗು, ಬಂಗಾಳಿ ಮತ್ತು ತಮಿಳಿಗೂ ಡಬ್ ಆಯಿತು. ಮುಂದಿನ ದಶಕದಲ್ಲಿ ಅದು ಇನ್ನೂ ಹಲವಾರು ಚಾನೆಲ್‌ಗಳಲ್ಲಿ ಪ್ರಸಾರವಾಯಿತು. ಅಲ್ಲದೆ ಬ್ರಿಟನ್, ಇಂಡೊನೇಷ್ಯಾ, ಮಾರಿಷಸ್ ಸೇರಿ ವಿವಿಧೆಡೆ ಅದನ್ನು ಪ್ರದರ್ಶಿಸಲಾಯಿತು. ಟಿಪ್ಪುವನ್ನು ರಾಕ್ಷಸೀಕರಿಸಿ, ಹಿಂದೂಗಳ ನರಹಂತಕನಂತೆ ತೋರಿಸದ ಈ ಧಾರಾವಾಹಿಯ ವಿರುದ್ಧ ಪ್ರತಿರೋಧ ಕಂಡುಬಂದಿತು. ಕೆಲವೊಂದು ಕಂತನ್ನು ವೀಕ್ಷಿಸಿ, ತೀರ್ಮಾನ ನೀಡುವಂತೆ ಪಕ್ಷದ ನಾಯಕರೂ ಸೇರಿದಂತೆ ಕೆಲವರು ಮಲ್ಕಾನಿ ಅವರನ್ನು ಕೋರಿದರು. 'ಇಂಡಿಯಾ ಫಸ್ಟ್' ಕೃತಿಯಲ್ಲಿ ನಾನು ಉದ್ಧರಿಸಿರುವ ಟಿಪ್ಪು ಸುಲ್ತಾನನ ಹಿರಿಮೆ ಭಾಗವನ್ನು ಅವರು ಯಾವಾಗ ಬರೆದರು ಎಂಬ ಬಗ್ಗೆ ವಿವರಗಳಿಲ್ಲ. ಆದರೆ ಅದಕ್ಕೆ ಅಡ್ವಾಣಿ 2002ರ ಜ. 26ರಂದು ಮುನ್ನುಡಿ ಬರೆದಿದ್ದರು. ಲೇಖಕರ ಪ್ರಸ್ತಾವನೆಯಲ್ಲಿ 2002 ಎಂದಷ್ಟೇ ನಮೂದಾಗಿದೆ. ಹಾಗಾಗಿ, ಇದನ್ನು 1990ರಿಂದ 2001ರ ಅಂತ್ಯದ ನಡುವಿನ ಯಾವುದೋ ಸಮಯದಲ್ಲಿ ಬರೆದಿದ್ದಾರೆ ಎಂಬುದು ಗೊತ್ತಾಗುತ್ತದೆ.

1990ರ ಆರಂಭದ ಭಾಗದಲ್ಲಿ ನಾನು ಹಾಗೂ ನನ್ನ ಗೆಳೆಯರು ವಿಶ್ವ ವ್ಯಾಪಾರ ಸಂಘಟನೆ ವಿರೋಧಿ ಚಳವಳಿ ಸಂಬಂಧ ಮಲ್ಕಾನಿ ಅವರ ಬಳಿ ಹೋಗಿದ್ದೆವು. ಬಿಜೆಪಿಯ ಬಹುತೇಕರು (1996ರವರೆಗೂ ಬಿಜೆಪಿ ವಿರೋಧ ಪಕ್ಷವಾಗಿತ್ತು) ಡಂಕಲ್ ಪ್ರಸ್ತಾವದ ಕಟು ಟೀಕಾಕಾರರಾಗಿದ್ದರು. ವಿಶ್ವ ವ್ಯಾಪಾರ ಸಂಘಟನೆಯಿಂದ ಭಾರತ ಹಾಗೂ ಮೂರನೇ ಜಗತ್ತಿನ ರಾಷ್ಟ್ರಗಳ ಮೇಲೆ ಎಂತಹ ಪರಿಣಾಮ ಆಗುತ್ತದೆ ಎಂಬುದರ ಬಗ್ಗೆ ಬಿರುಸಿನ ದಾಳಿ ನಡೆಸುತ್ತಿದ್ದರು. ಮಲ್ಕಾನಿ ಅವರು ಪಕ್ಷದ ಇತರರಿಗಿಂತ ಭಿನ್ನವಾಗಿ ತಮ್ಮ ನಿಲುವಿಗೆ ಎಂದೆಂದಿಗೂ ಬದ್ಧರಾಗಿದ್ದರು. ಅವರು ಉದಾರವಾದಿ ವ್ಯಕ್ತಿಯಲ್ಲ. ಹಿಂದೂ ಮೂಲಭೂತವಾದಿ. 'ಮನುಸ್ಮೃತಿಯು ಮಾನವಕುಲದ ಮಹತ್ವದ ಕೃತಿಗಳಲ್ಲೊಂದು' ಎಂದು ಸಾರಿದವರು. ಮಲ್ಕಾನಿ ಅವರ ಜತೆಗಿನ ಹೀಗೊಂದು ಭೇಟಿಯಲ್ಲಿ ಈ ಕಡುಸ್ವಯಂಸೇವಕರು ತಾನು ಟಿಪ್ಪು ಧಾರಾವಾಹಿಯನ್ನು ವೀಕ್ಷಿಸುತ್ತಿರುವುದಾಗಿ ಹೇಳಿದ್ದರು. 2002ರಲ್ಲಿ ಪ್ರಕಟವಾದ ಇವರ ಪುಸ್ತಕದಲ್ಲಿದ್ದ ಟಿಪ್ಪು ಸುಲ್ತಾನನ ಹಿರಿಮೆ ಕುರಿತ ಲೇಖನವು ಈ ಧಾರಾವಾಹಿಯ ಬಗ್ಗೆ ಇವರು ಮಾಡಿದ ತನಿಖೆಯ ಪರಿಣಾಮವೂ ಇರಬಹುದು (ಈ ಲೇಖನ ಪ್ರತ್ಯೇಕವಾಗಿ ಆ ಮೊದಲು ಬೇರೆಡೆ ಪ್ರಕಟವಾಗಿರಲೂಬಹುದು).

ಮಲ್ಕಾನಿ ಅವರ ಈ ನಿಲುವನ್ನು ಕೆಲವೊಮ್ಮೆ ಪ್ರಜ್ಞಾಪೂರ್ವಕವಾಗಿ, ಕೆಲವೊಮ್ಮೆ ತಿಳಿಯದೆಯೇ ಕಲುಷಿತಗೊಳಿಸುವ ಪ್ರಯತ್ನಗಳು ನಡೆದಿದ್ದವು. ಉದಾಹರಣೆಗೆ, ಮಲ್ಕಾನಿ ಅವರು ಅಭಿವ್ಯಕ್ತಿ ಸ್ವಾತಂತ್ರ್ಯದಲ್ಲಿ ನಂಬಿಕೆ ಇದ್ದವರಾದ ಕಾರಣ ಅಂತಿಮವಾಗಿ ಈ ಧಾರಾವಾಹಿಯನ್ನು ಒಪ್ಪಿದ್ದರು. ಈ ಧಾರಾವಾಹಿ ಕಾಲ್ಪನಿಕ ಕೃತಿ ಆಧರಿಸಿದ ಕಾರಣಕ್ಕೂ ಅವರು ಆ ನಿಲುವು ತಳೆದರು ಎಂಬುದೂ ಒಂದಾಗಿತ್ತು. ಬೇರೆ ಮಾತಿನಲ್ಲಿ ಹೇಳುವುದಾದರೆ, ಮಲ್ಕಾನಿ ಅವರು ಟಿಪ್ಪುವನ್ನು ತಿರಸ್ಕರಿಸಿದ್ದರು, ಆದರೆ ಕಲಾತ್ಮಕ ಅಭಿವ್ಯಕ್ತಿಯನ್ನು ಬೆಂಬಲಿಸಿದ್ದರು. ನಿಜವಾದ ಟಿಪ್ಪುವನ್ನು ಬಯಲಿಗೆಳೆಯುವ ಲೇಖನ ಬರೆಯುವುದಾಗಿ ಭರವಸೆ ನೀಡಿದ್ದರು ಎಂಬುದೂ ಆಗಿತ್ತು.

ಆದರೆ, ಈ ಕೃತಿಯಲ್ಲಿ ಮಲ್ಕಾನಿ ಅವರು ಟಿಪ್ಪು ಬಗ್ಗೆ ಹರಿಸಿರುವ ಪ್ರಶಂಸೆಯ ಹೊಳೆ ಈ ಎಲ್ಲ ಹೇಳಿಕೆಗಳನ್ನೂ ಕೊಚ್ಚಿಹಾಕಿದೆ. ಅಲ್ಲದೆ, ಟಿಪ್ಪು ಮಾತ್ರವೇ 'ಬ್ರಿಟಿಷರ ವಿರುದ್ಧ ಹೋರಾಡುತ್ತಾ ಮಡಿದ' ಭಾರತದ ಏಕೈಕ ರಾಜ ಎಂದು 'ನಿಜ ಟಿಪ್ಪು'ವನ್ನು ಬಣ್ಣಿಸಿದ್ದರು. ಅದರಲ್ಲೂ ಈ ಹೇಳಿಕೆ ಬಿಜೆಪಿ ಅಧಿಕಾರದಲ್ಲಿ ಇದ್ದಾಗ ಬಂದದ್ದು ಎಂಬುದು ಬಹಳಷ್ಟೇ ಇರಿಸುಮುರಿಸು ಉಂಟು ಮಾಡಿರಬೇಕು. ಇವರಿಂದ ಟಿಪ್ಪು ವಿರೋಧಿ ಹೇಳಿಕೆ ಪಡೆದು, ಈ ಸಂದರ್ಭವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹುದಿತ್ತು. ವಾಸ್ತವವೆಂದರೆ, ಪುದುಚೇರಿಯ ಲೆಫ್ಟಿನೆಂಟ್ ಗವರ್ನರ್ ಆಗಿ ಸೇವೆ ಸಲ್ಲಿಸುತ್ತಿದ್ದಾಗ 2003ರಲ್ಲಿ ನಿಧನರಾದ ಮಲ್ಕಾನಿ ಅವರು ಸ್ಪಷ್ಟ ಚಿಂತನೆ ಮತ್ತು ನೇರ ನುಡಿಯ ವ್ಯಕ್ತಿತ್ವದವರು. ಟಿಪ್ಪು, ಭಗತ್ ಸಿಂಗ್, ಹಿಜಾಬ್ ಹಾಗೂ ಮತ್ತಿತರ ವಿಷಯವಾಗಿ ಕರ್ನಾಟಕದಲ್ಲಿ ಅನಗತ್ಯ ಗಲಭೆಗಳನ್ನು ಸೃಷ್ಟಿಸಿದ ಗುಂಪಿನಂತಲ್ಲ.

ಟಿಪ್ಪು ಬಗ್ಗೆ ಅವರು ಬಹಳಷ್ಟು ಓದಿಕೊಂಡಿದ್ದರು. ಬ್ರಿಟಿಷ್ ಸಾಮ್ರಾಜ್ಯಶಾಹಿಯ ಪಾಲಿಗೆ ಕಂಟಕಪ್ರಾಯ ಎನಿಸಿದ್ದ ಟಿಪ್ಪು ಬಗ್ಗೆ ಅವರಿಗೆ ಹೆಮ್ಮೆ ಇತ್ತು. ಟಿಪ್ಪುವಿನ ಬಗ್ಗೆ ಅವರು ಲೇಖನವನ್ನು ಅಂತ್ಯಗೊಳಿಸಿದ ರೀತಿ ಹೃದಯಸ್ಪರ್ಶಿಯಾಗಿದೆ. ಟಿಪ್ಪು ಅಸ್ತಂಗತನಾದ ಸಂಗತಿಯನ್ನು ತಿಳಿದ ಗವರ್ನರ್ ಜನರಲ್ ಲಾರ್ಡ್ ವೆಲ್ಲೆಸ್ಲಿ ಸಂತೋಷಕೂಟ ಏರ್ಪಡಿಸಿ, ಇನ್ನಿಲ್ಲದಂತೆ ಹರ್ಷಿಸಿದ್ದ. ಆ ಸಂದರ್ಭವನ್ನು ಆಧಾರವಾಗಿ ಇಟ್ಟುಕೊಂಡು ಮಲ್ಕಾನಿ ಅವರು ಹೀಗೆ ಬರೆಯುತ್ತಾರೆ...

'ಆತ ಬಯಸಿದ್ದರೆ, ಹಿಂದಿನ ಕೆಲ ಅರಸರಂತೆ, ಬ್ರಿಟಿಷರ ಅಡಿಯಾಳಾಗಿ ತನ್ನ ಅರಸುತನವನ್ನು ಉಳಿಸಿಕೊಳ್ಳಬಹುದಾಗಿತ್ತು. ಅಂದು ಅವನು ಹಾಗೆ ಮಾಡಿದ್ದೇ ಆಗಿದ್ದಲ್ಲಿ, ಇಂದು ಆತನ ಮರಿ, ಗಿರಿಮಕ್ಕಳು ಕೋಲ್ಕತ್ತಾದ ರಸ್ತೆಗಳಲ್ಲಿ ಸೈಕಲ್ ರಿಕ್ಷಾ ತುಳಿಯುತ್ತಾ ಬದುಕು ಸವೆಸಬೇಕಾದ ಅನಿವಾರ್ಯ ಸ್ಥಿತಿಗೆ ಸಿಲುಕುತ್ತಿರಲಿಲ್ಲ'. 'ಗೌರವ ಕಳೆದುಕೊಂಡು ಬದುಕುವುದಕ್ಕಿಂತಲೂ ಸಾವು ಆತನ ಆಯ್ಕೆಯಾಗಿತ್ತು'. '18ನೇ ಶತಮಾನದ ರಾಜರುಗಳ ನಡುವೆ ಈತ ಏಕಾಂಗಿಯಾಗಿ ವಿದೇಶಿಯರ ವಿರುದ್ಧ ಸೆಣಸಾಡುತ್ತಾ ಪ್ರಾಣಬಿಟ್ಟ. ಟಿಪ್ಪುವಿಗೆ ವಂದನೆ ಸಲ್ಲಿಸದೆ ಸ್ವತಂತ್ರ ಭಾರತಕ್ಕೆ ಬೇರಾವುದೇ ಆಯ್ಕೆಯಿಲ್ಲ'.

ಲೇಖಕ: ಹಿರಿಯ ಪತ್ರಕರ್ತ, ಮ್ಯಾಗ್ಸೆಸೆ ಪ್ರಶಸ್ತಿ ವಿಜೇತ
ಕನ್ನಡಕ್ಕೆ: ಜಿ.ಎನ್.ಮೋಹನ್

ಸಂಗತ

ಕಾರ್ಯಬಾಹುಳ್ಯದಲ್ಲಿ ಕಳೆದುಹೋಗುವ ಈ ಹೊತ್ತು

ಮಕ್ಕಳನ್ನು ನೋಡಿಕೊಳ್ಳುವುದಕ್ಕಾಗಿ, ತನ್ನದಾಗಬಹುದಿದ್ದ ಕೆರಿಯರ್ ಅನ್ನು ಬದಿಗೆ ಸರಿಸಿದ ತಾಯಂದಿರನ್ನು ಸಮಾಜ ಗೌರವಿಸುವುದನ್ನು ಕಲಿಯಬೇಕು

• ಆರತಿ ಪಟ್ರಮೆ

ಕೆಲವು ದಿನಗಳ ಹಿಂದೆ ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೊವೊಂದು ವೈರಲ್ ಆಗಿತ್ತು. ದೇಶರಕ್ಷಣೆಯ ಹೊಣೆ ಹೊತ್ತ ಸೇನೆಯಲ್ಲಿ ಕೆಲಸದಲ್ಲಿರುವ ತಾಯಿ ತನ್ನ ಹತ್ತು ತಿಂಗಳ ಮಗುವನ್ನು ಬಿಟ್ಟು ರೈಲಿನಲ್ಲಿ ಹೊರಟದ್ದ ಸನ್ನಿವೇಶ. ಮಗುವನ್ನು ಕುಟುಂಬದವರ ಕೈಗಿತ್ತು ಅಳುತ್ತಳುತ್ತಲೇ ಕೈಬೀಸುವ ದೃಶ್ಯ ನೋಡಿದರೆ, ಎಂಥವರಿಗಾದರೂ ಕರುಳು ಚುರುಕ್ ಎನ್ನಬೇಕು. ಆ ಮಗುವಿಗೇನು ಅರ್ಥವಾಗಿತ್ತೋ ಬಿಟ್ಟಿತ್ತೋ ದೇವರಿಗೇ ಗೊತ್ತು. ಆದರೆ ಹಾಲುಗಲ್ಲದ ಹಸುಳೆ ಹುಟ್ಟಿನಿಂದ ತನಗೆ ಹಕ್ಕಾಗಿ ಒದಗಬೇಕಿದ್ದ ತಾಯಿಯ ಪ್ರೀತಿ, ಕಾಳಜಿಯಿಂದ ವಂಚಿತವಾಯಿತು ಎಂಬುದು ಮಾತ್ರ ಸತ್ಯ ಎಂಬಂತೆ ಇದು ಬಿಂಬಿತವಾಯಿತು. ಮಗುವನ್ನು ಬಿಟ್ಟು ಹೋಗಬೇಕಾದ ತಾಯಿಯ ಸಂಕಟವನ್ನೂ, ನೋವನ್ನೂ ಹತ್ತುಹಲವು ಬಗೆಗಳಲ್ಲಿ ವಿಮರ್ಶೆ ಮಾಡಿದ್ದಾಯಿತು.


ಇದನ್ನು ನೋಡಿದ ಅನೇಕ ಮಂದಿ ಪ್ರತಿಕ್ರಿಯಿಸುತ್ತಾ, 'ಸಮಾನತೆಯ ಭ್ರಮೆಯಲ್ಲಿ ತಾನೂ ಗಡಿ ಕಾಯುವ ಕೆಲಸವನ್ನು ಆಯ್ಕೆ ಮಾಡಿಕೊಂಡಿರುವುದು ಆಕೆಯೇ ಅಲ್ಲವೇ? ಮಗುವಿನೊಂದಿಗೆ ಕಳೆಯಬೇಕಾದ ಸಮಯ ಒದಗದೇ ಹೋಯ್ತೆಂಬುದಕ್ಕೆ ಈಗ ಅತ್ತು ಫಲವೇನು...' ಎಂಬಂತಹ ಕಮೆಂಟ್‌ಗಳನ್ನು ಮಾಡಿದ್ದರು. ಇಲ್ಲಿ ಗಮನಿಸಲೇಬೇಕಾದ ವಿಷಯಗಳು ಕೆಲವು ಇವೆ. ದುಡಿಮೆ ಎನ್ನುವುದು ಅನೇಕ ಬಾರಿ ಕುಟುಂಬವನ್ನು ಪೋಷಿಸುವ ನೆಲೆಯಿಂದಲೇ ಆಗಿರುತ್ತದೆ ವಿನಾ ಸಮಾನತೆಯ ಸೋಗಿಗಾಗಿ ಅಲ್ಲ. ಕಲಿತವರೆಲ್ಲರೂ ತಮ್ಮ ವಿದ್ಯಾರ್ಹತೆಗೆ ಅನುಗುಣವಾಗಿ ದುಡಿಯಲೇಬೇಕು ಎಂಬ ಅಲಿಖಿತ ನಿಯಮವೊಂದು ಹೆಚ್ಚುತ್ತಿಲ್ಲವೇ? 'ಅಯ್ಯೋ ಪಾಪ, ರ್‍ಯಾಂಕು ಪಡೆದರೂ ಮನೆಯಲ್ಲಿ ಮಕ್ಕಳನ್ನು ನೋಡಿಕೊಂಡು ಸಮಯ ಕಳೆಯುತ್ತಿದ್ದಾಳೆ... ಅವಳ ಪ್ರಾರಬ್ಧ' ಎಂದು ಮಾತಾಡುವವರೂ ಇದೇ ಮಂದಿ!

ಹೆಣ್ಣುಮಕ್ಕಳು ಎಲ್ಲ ವಿಧದಲ್ಲೂ ಆದರ್ಶವಾಗಿರಬೇಕೆಂಬ ನಿರೀಕ್ಷೆ ಸಮಾಜದ್ದು. ಮನೆಯನ್ನೂ ಬಹಳ ಸ್ವಚ್ಛಸುಂದರವಾಗಿ ಇಟ್ಟುಕೊಂಡು, ಆದರ್ಶ ಗೃಹಿಣಿಯಾಗಿ ಗಂಡ, ಮಕ್ಕಳ ಬೇಕುಬೇಡಗಳನ್ನು ಸಮಯಕ್ಕೆ ಸರಿಯಾಗಿ ಪೂರೈಸಿಕೊಂಡು, ಜತೆಯಲ್ಲಿ ಮನೆಯ ಹಿರಿಯರಿದ್ದರೆ ಅವರನ್ನು ಚೆನ್ನಾಗಿ ನೋಡಿಕೊಂಡು, ತನ್ನ ಪ್ರತಿಭೆಗೆ ಮೆರುಗು ಹಚ್ಚಿಕೊಂಡು, ಇಷ್ಟೆಲ್ಲದರ ನಡುವೆ ದಣಿವರಿಯದಂತೆ ಶರೀರವನ್ನು ಸುಂದರವಾಗಿ ಇರಿಸಿಕೊಂಡು, ಕಾಲಕ್ಕೆ ತಕ್ಕಂತೆ ದಿರಿಸು ಧರಿಸಿಕೊಂಡು... ಒಂದೇ ಎರಡೇ?

ಸೂಕ್ಷ್ಮವಾಗಿ ಅವಲೋಕಿಸಿದರೆ, ಸಮಾನತೆಯ ಹೆಸರಿನಲ್ಲಿ ನಮ್ಮನ್ನು ನಾವೇ ದುಡಿಯುವ ಯಂತ್ರಗಳನ್ನಾಗಿ ಮಾಡಿಕೊಂಡಿದ್ದೇವೆ. ಇದರ ಜತೆಗೆ ಮಗುವಿನ ಕಾಳಜಿಯಲ್ಲಿ ಕೊಂಚ ಎಡವಿದರೂ ಕಟುಮಾತುಗಳು ಬಂದಿರಿಯುತ್ತವೆ. ಮಗುವಿಗೆ ಜನ್ಮ ನೀಡದೇ ಇದ್ದರೂ ನೋಡುವ ದೃಷ್ಟಿಕೋನ ಬೇರೆಯೇ ಆಗುತ್ತದೆ!

ಕುಟುಂಬ ವ್ಯವಸ್ಥೆ ಸಡಿಲಗೊಳ್ಳುತ್ತಿರುವುದಕ್ಕೂ ವಿಚ್ಛೇದನ ಪ್ರಕರಣಗಳು ಹೆಚ್ಚುತ್ತಿರುವುದಕ್ಕೂ ದಂಪತಿ ತಮಗೆ ಮಗು ಬೇಡವೆಂದು ನಿರ್ಧಾರ ತೆಗೆದುಕೊಳ್ಳುವುದಕ್ಕೂ ಇಡಿಯ ಸಮಾಜ ಮೊದಲಿಗೆ ಬೆರಳೆತ್ತಿ ತೋರಿಸುತ್ತಿರುವುದು ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾಗಿರುವುದರ ಕಡೆಗೆ. ತಾನೇ ದುಡಿಯುವೆನೆಂಬ ಹುಮ್ಮಸ್ಸಿನಲ್ಲಿ ಆಕೆಗೆ ಇತರ ಎಲ್ಲವೂ ನಗಣ್ಯವೆಂದೋ ಅಥವಾ ಒಲ್ಲದ ಪತಿಯೊಂದಿಗೆ ಹೊಂದಿಕೊಂಡು ಬಾಳಲಾಗದೆಂದು ಅನಿಸಿದ ತಕ್ಷಣಕ್ಕೆ ಎಲ್ಲವನ್ನೂ ಕೊಡವಿಕೊಂಡು ಎದ್ದು ನಡೆದುಬಿಡುತ್ತಾಳೆ ಎಂಬುದನ್ನೇ ಎಲ್ಲ ಸಮಸ್ಯೆಗಳಿಗೂ ಮೂಲವೆಂಬಂತೆಯೋ ನೋಡುವ ಸನ್ನಿವೇಶ ಸೃಷ್ಟಿಯಾಗಿರುವುದು ಸುಳ್ಳಲ್ಲ. ಪರಿಣಾಮವಾಗಿ, ಸಣ್ಣಪುಟ್ಟ ಹೊಂದಾಣಿಕೆಗಳನ್ನೂ ಮಾಡಿಕೊಳ್ಳಲು ಸಿದ್ಧರಿರದಂತೆ ಮುಂದಿನ ಜನಾಂಗ ರೂಪುಗೊಳ್ಳುತ್ತಿರುವುದಷ್ಟೇ ನಿಜ. ಈ ಎಲ್ಲದರಿಂದಲೂ ಸೋಲಿಗೆ, ನೋವಿಗೆ ಗುರಿಯಾಗುತ್ತಿರುವವರು ನಮ್ಮ ಮಕ್ಕಳು ಎಂಬುದು ನಾವು ಅರ್ಥ ಮಾಡಿಕೊಳ್ಳಲೇಬೇಕಾದ ಕಹಿಸತ್ಯ.

ಯಾವುದೇ ಕ್ಷೇತ್ರದಲ್ಲಿ ದುಡಿಯುವ ಹೆಣ್ಣುಮಕ್ಕಳು ಈ ಬಗೆಯ ನೋವನ್ನು ಅನುಭವಿಸಿರುತ್ತಾರೆ. ಆರು ತಿಂಗಳ ಮಾತೃತ್ವ ರಜೆಯೆಂಬುದು ಕಳೆದುಹೋಗುವ ರೀತಿಯೇ ಬಹುತೇಕ ಅರ್ಥವಾಗದು. ಆ ಬಳಿಕವೂ ಮನೆಯಲ್ಲಿ ಮಗುವನ್ನು ನೋಡಿಕೊಳ್ಳುವುದಕ್ಕೆ ಅಜ್ಜಿ ಇಲ್ಲದೇ ಹೋದರೆ ಆಯಾಳನ್ನು ನೇಮಿಸಿಯೋ ಶಿಶುಪಾಲನಾ ಕೇಂದ್ರಗಳ ನೆರವು ಪಡೆದೋ ಮಕ್ಕಳನ್ನು ದೊಡ್ಡವರನ್ನಾಗಿ ಮಾಡುತ್ತಿದ್ದೇವೆ ವಿನಾ ಪ್ರಜ್ಞಾಪೂರ್ವಕವಾಗಿ ಬೆಳೆಸುವಲ್ಲಿ ಸೋಲುತ್ತಿದ್ದೇವೆ ಎಂಬುದು ವಾಸ್ತವವಲ್ಲವೇ?



ಶಾಲೆಗೆ ರಜೆ ಸಿಕ್ಕಿದ ಮಕ್ಕಳು ಮನೆಯಲ್ಲೇ ಉಳಿದಿರುತ್ತಾರೆ, ತಂದೆ ತಾಯಿ ತಮ್ಮ ಕಾರ್ಯಬಾಹುಳ್ಯದ ನಡುವೆ ಕಳೆದುಹೋಗುತ್ತಾರೆ. ಹಿಂದಿನಂತೆ ಅಜ್ಜಿಯ ಮನೆಯಲ್ಲೋ ಸಮೀಪದ ಬಂಧುಗಳ ಜತೆಯಲ್ಲೋ ನಾಲ್ಕಾರು ದಿನಗಳ ಕಾಲ ಇದ್ದುಬರುವ ಸೊಗಸು ನಮ್ಮ ಬದುಕಿನಿಂದ ಮರೆಯಾಗುತ್ತಿರುವುದು ವಿಷಾದದ ಸಂಗತಿಯೇ. ಮನೆಯಲ್ಲಿ ಅಮ್ಮಂದಿರಿಲ್ಲ ಎನ್ನುವ ಕಾರಣದಿಂದಲೇ ಬಹುತೇಕ ಮಕ್ಕಳಿಗೆ ದೊಡ್ಡಮ್ಮನ ಮನೆ, ಚಿಕ್ಕಮ್ಮನ ಮನೆ, ಅತ್ತೆಯ ಮನೆಯೆಂಬ ಬಾಂಧವ್ಯವನ್ನು ಬೆಳೆಸಿಕೊಳ್ಳಲಾಗುತ್ತಿಲ್ಲ. ತಾವು ಬೇರೆ ಮನೆಯಲ್ಲಿ ಹೋಗಿ ಇರುವುದಕ್ಕಿಂತ ತಮ್ಮ ಮನೆಯಲ್ಲಿ ಇರುವುದೇ ಮಕ್ಕಳಿಗೆ ಹಿತವೆನ್ನಿಸುವುದರಲ್ಲಿ ಅಚ್ಚರಿಯೇನಿಲ್ಲ.

ಮನೆ ಮನೆಯಾಗಿಯೇ ಇರಬೇಕೆಂದರೆ ಅಮ್ಮಂದಿರಿರಬೇಕು! ಮಕ್ಕಳನ್ನು ನೋಡಿಕೊಳ್ಳುವುದಕ್ಕಾಗಿ, ತನ್ನದಾಗಬಹುದಿದ್ದ ಕೆರಿಯರ್ ಅನ್ನು ಬದಿಗೆ ಸರಿಸಿದ ತಾಯಂದಿರನ್ನು ಸಮಾಜ ಗೌರವಿಸುವುದನ್ನು ಕಲಿಯಬೇಕು. ಇತ್ತ ದುಡಿದು ಸಂಪಾದಿಸಲೂ ಬೇಕು, ಅತ್ತ ಆದರ್ಶ ತಾಯಿಯೂ ಆಗಬೇಕೆಂದರೆ ಕಷ್ಟವಲ್ಲವೇ?!

ವಾಚಕರ ವಾಣಿ

ತಮ್ಮದೇ ಆದೇಶದ ವಿರುದ್ಧ ಪ್ರತಿಭಟನೆ?

ಬಿಜೆಪಿ ಮಹನೀಯರೇ, ಯೂನಿಟ್‌ಗೆ ₹ 70 ಪೈಸೆಯಂತೆ ವಿದ್ಯುತ್ ದರ ಹೆಚ್ಚಿಸಿ, ಏಪ್ರಿಲ್ 1ರಿಂದ ಪೂರ್ವಾನ್ವಯ ಆಗುವಂತೆ ಆದೇಶ ಮಾಡಿ, ಚುನಾವಣೆ ಮುಗಿದ ಮಾರನೇ ದಿನವೇ ಕರ್ನಾಟಕದ ಜನತೆಗೆ ಕರೆಂಟ್ ಶಾಕ್ ಕೊಟ್ಟವರು ನೀವು. ಈಗ ಆ ಆದೇಶದ ವಿರುದ್ಧವೇ ರಾಜ್ಯದಾದ್ಯಂತ ಪ್ರತಿಭಟನೆ ಮಾಡುತ್ತೇವೆ ಎಂದು ಹೇಳುತ್ತಿರುವಿರಲ್ಲಾ, ಚುನಾವಣಾ ಫಲಿತಾಂಶದ ನಂತರ ಸಾಮಾನ್ಯ ಜ್ಞಾನವೂ ನಿಮ್ಮಲ್ಲಿ ನಶಿಸಿತೇ?

ಜನಸಾಮಾನ್ಯರ ಬಗ್ಗೆ ಕಿಂಚಿತ್ ಕಾಳಜಿಯಾದರೂ ನಿಮ್ಮಲ್ಲಿ ಇದ್ದಿದ್ದರೆ ಆ ಆದೇಶವನ್ನು ನೀವು ತಡೆಯಬಹುದಿತ್ತು. ನೀವೇ ಬೌಲಿಂಗ್ ಮಾಡಿದ ಬಾಲಿಗೆ ನೀವೇ ಬ್ಯಾಟಿಂಗೂ ಮಾಡುವ ಆಸೆಯೇ?

ಪಾಂಡುರಂಗ, ಬೆಂಗಳೂರು

ಹೊಸ ಸರ್ಕಾರ ಹಳೆಯ ಬಾಕಿ ತೀರಿಸಲಿ

ಹೊಸ ಸರ್ಕಾರ ಬಂದು ಹೊಸ ಬಜೆಟ್ ಮಂಡನೆಯಾಗುತ್ತಿದೆ. ಈ ಹೊತ್ತಿನಲ್ಲಿ, ಆರೋಗ್ಯ ಇಲಾಖೆಯಡಿ ಕಾರ್ಯ ನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಏಡ್ಸ್ ನಿಯಂತ್ರಣ ಮಂಡಳಿಯು (ಕೆಸಾಪ್ಸ್) ಕೆಲವು ಜಿಲ್ಲೆಗಳಲ್ಲಿ ಎನ್‌ಜಿಒ ಹಾಗೂ ಸಿಬಿಒ (ಸಮುದಾಯ ಆಧಾರಿತ ಸಂಸ್ಥೆ) 2015-16ರಲ್ಲಿ ಏಡ್ಸ್ ನಿಯಂತ್ರಣ ಯೋಜನೆಗಾಗಿ (ಟಿಐ- ಎಫ್‌ಎಸ್‌ಡಬ್ಲ್ಯು) ಮಾಡಿಕೊಟ್ಟ ಕೆಲಸಕ್ಕೆ, ಅಂದಾಜು ಹತ್ತು ಕೋಟಿಯಷ್ಟು ಹಣವನ್ನು ಬಾಕಿ ಉಳಿಸಿಕೊಂಡ ಬಗ್ಗೆ ನೆನಪಿಸಬೇಕಾಗಿದೆ. ಮಂಡಳಿಯಡಿ ಯೋಜನೆಯ ಅನುಷ್ಠಾನಕ್ಕಾಗಿ ಕಾರ್ಯ ನಿರ್ವಹಿಸುವ ಸಿಬಿಒ ಸದಸ್ಯರು ಆರ್ಥಿಕವಾಗಿ ಅತ್ಯಂತ ಸಂಕಷ್ಟದಲ್ಲಿ ಇರುವವರು ಹಾಗೂ ಯೋಜನೆಯ ಅನುಷ್ಠಾನ ವ್ಯವಸ್ಥೆಗಾಗಿ ಅಪಾರ ಪ್ರಮಾಣದ ಸಾಲ ಮಾಡಿಕೊಂಡಿದ್ದಾರೆ. 2015-16ರಲ್ಲಿ ಅನೇಕ ಜಿಲ್ಲೆಗಳ ಈ ಸಿಬಿಒಗಳು ನಿರ್ವಹಿಸಿದ ಕೆಲಸಕ್ಕೆ 7-8 ವರ್ಷಗಳಿಂದಲೂ, ಎಷ್ಟೆಲ್ಲಾ ಹೋರಾಟ ನಡೆಸಿದರೂ, ಪ್ರತಿ ಘಟಕಕ್ಕೆ ಲಕ್ಷಾಂತರ ರೂಪಾಯಿಗಳ ಬಾಕಿ ಇನ್ನೂ ಪಾವತಿಯಾಗಿಲ್ಲ. ಈ ಅವಧಿಯಲ್ಲಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರವೇ ಇತ್ತು. ಹೀಗಾಗಿ, ಪ್ರಥಮ ಆದ್ಯತೆಯಾಗಿ ಈ ಬಾಕಿ ಹಣವನ್ನು ಸರ್ಕಾರ ತುರ್ತಾಗಿ ಹಿಂತಿರುಗಿಸಬೇಕು.

ಹಾಗೇ ಅದೇ ಸರ್ಕಾರದ ಅವಧಿಯಲ್ಲಿ, ಮಹಿಳೆಯರ ಸುರಕ್ಷತೆಯ ಹಿತದೃಷ್ಟಿಯಿಂದ ತಜ್ಞರು, ಪರಿಣತರನ್ನು ಒಳಗೊಂಡು, ವಿ.ಎಸ್.ಉಗ್ರಪ್ಪ ಅವರ ಅಧ್ಯಕ್ಷತೆಯಲ್ಲಿ ರೂಪಿಸಲಾಗಿದ್ದ 'ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ, ಶೋಷಣೆ ಹಾಗೂ ಅತ್ಯಾಚಾರ ತಡೆ ಅಧ್ಯಯನ ಸಮಿತಿ' ನೀಡಿದ್ದ ವರದಿಯಲ್ಲಿನ 135 ಶಿಫಾರಸುಗಳು ಹಾಗೂ ಜಯಮಾಲಾ ಅವರ ಅಧ್ಯಕ್ಷತೆಯಲ್ಲಿ ರೂಪಿಸಲಾಗಿದ್ದ 'ಕರ್ನಾಟಕ ರಾಜ್ಯ ಲೈಂಗಿಕ ಕಾರ್ಯಕರ್ತೆಯರ ಸ್ಥಿತಿಗತಿ ಅಧ್ಯಯನ ಸಮಿತಿ' ನೀಡಿದ್ದ ವರದಿಯಲ್ಲಿದ್ದ 60ಕ್ಕೂ ಹೆಚ್ಚು ಪ್ರಮುಖ ಶಿಫಾರಸುಗಳು ಒಂದಿಷ್ಟೂ ಅನುಷ್ಠಾನಗೊಳ್ಳದೆ ಉಳಿದುಹೋಗಿವೆ. ಇವನ್ನು ಜಾರಿಗೊಳಿಸಲು ಬಜೆಟ್‌ನಲ್ಲಿ ಪ್ರತ್ಯೇಕವಾಗಿ ಹಣ ಮೀಸಲಿರಿಸಿ ತಕ್ಷಣವೇ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಬೇಕು.

ರೂಪ ಹಾಸನ, ಹಾಸನ

ನಮ್ಮೊಳಗಿನ ನಾಯಕ ಎನಿಸಿಕೊಳ್ಳಬೇಕಾದರೆ...

'ಮೋದಿ ನಾಯಕತ್ವದ ಪಯಣ' ಎಂಬ ಲೇಖನದಲ್ಲಿ (ಪ್ರ.ವಾ., ಜೂನ್ 5), ಮೋದಿ ಅವರ ಈ ಒಂಬತ್ತು ವರ್ಷಗಳ ಅವಧಿಯಲ್ಲಿ ಭಾರತವು ಆತ್ಮನಿರ್ಭರವಾಗಿದೆ ಎಂದು ಎ. ಸೂರ್ಯ ಪ್ರಕಾಶ್ ಬರೆದಿದ್ದಾರೆ. ಮೋದಿ ಅವರು ಮೊದಲು ರಾಷ್ಟ್ರ ನಾಯಕರಾಗಿ ಗುರುತಿಸಿಕೊಳ್ಳಲು ಬಂದವರು, ಇಂದು ವಿಶ್ವದಲ್ಲೇ ಉತ್ತಮ ಪ್ರಧಾನಿ ಎಂಬ ಬಿರುದನ್ನು ಪಡೆದಿದ್ದಾರೆ. ಆದರೆ, ಪ್ರಶ್ನೆ ಇರುವುದು ಬೇರೆ. ಅವರು ತಮ್ಮ ವರ್ಚಸ್ಸಿನಿಂದ ವಿಶ್ವದ ಕೆಲವು ನಾಯಕರನ್ನು ಮೆಚ್ಚಿಸಿ, ವಿಶ್ವದ ಶ್ರೇಷ್ಠ ನಾಯಕ ಎನಿಸಿಕೊಂಡರೇ ವಿನಾ, ಭಾರತದ ಬಡಜನರು, ದಲಿತರು, ಅಲ್ಪಸಂಖ್ಯಾತರು, ಹಿಂದುಳಿದ ವರ್ಗದವರನ್ನು ತಲುಪಿಲ್ಲ ಎನಿಸುತ್ತದೆ.

ಅವರ ಆಡಳಿತಾವಧಿಯಲ್ಲಿ ದೇಶದ ಆರ್ಥಿಕ ಸ್ಥಿತಿಗತಿ ಹೇಗಿದೆ, ಎಷ್ಟು ಯುವಜನರಿಗೆ ಉದ್ಯೋಗ ದೊರೆತಿದೆ, ಎಷ್ಟು ಮಂದಿ ಬಡವರು, ಕೊಳೆಗೇರಿವಾಸಿಗಳು, ಬುಡಕಟ್ಟು ಸಮುದಾಯದವರ ಏಳಿಗೆಯಾಗಿದೆ, ದೇಶದ ಮಹಿಳೆಯರಿಗೆ ಯಾವ ಮಟ್ಟಿಗಿನ ಸ್ಥಾನಮಾನ ದೊರೆತಿದೆ ಮತ್ತು ಅವರ ರಕ್ಷಣೆಗೆ ಯಾವ ಕಾನೂನನ್ನು ಗಟ್ಟಿಗೊಳಿಸಲಾಗಿದೆ ಎನ್ನುವುದೆಲ್ಲವನ್ನೂ ಗಮನಿಸಬೇಕಾಗುತ್ತದೆ. ನಮ್ಮ ನಡುವಿನ ವ್ಯಕ್ತಿಯು ನಾಯಕ ಎನಿಸಿಕೊಳ್ಳುವುದು ನಮ್ಮಲ್ಲಿಯ ಸಾಮಾಜಿಕ ವ್ಯವಸ್ಥೆಯನ್ನು ಗಟ್ಟಿಗೊಳಿಸಿದಾಗ.

ಮನೋಜ್ ಆರ್. ಕಂಬಳಿ, ಶಿವಮೊಗ್ಗ

ಉಚಿತ ಸೌಲಭ್ಯ: ನಿರಾಕರಿಸುವವರ ಪತ್ತೆ ಹೇಗೆ?

ನಾನು ಪ್ರತಿದಿನ ಕೆಲಸ ಮಾಡುವ ಸ್ಥಳಕ್ಕೆ ಹೋಗಿ ಬರಲು ಕನಿಷ್ಠ ಐದು ಬಸ್ಸುಗಳನ್ನು ಹತ್ತಿಳಿಯುತ್ತೇನೆ. ಹೊಸ ಸರ್ಕಾರ ಮಹಿಳಾ ಪ್ರಯಾಣಿಕರಿಗೆ ನೀಡಬಯಸಿರುವ ಸವಲತ್ತು ನನಗೆ ಬೇಡ. ಹೀಗೆ ಯೋಚಿಸುವ ಎಷ್ಟೋ ಮಹಿಳೆಯರಿದ್ದಾರೆ. ನಾವು ಸ್ವಯಂಪ್ರೇರಿತರಾಗಿ ಟಿಕೆಟ್ ತೆಗೆದುಕೊಳ್ಳುವ ಅವಕಾಶ ಇದೆಯೇ?

ಹಾಗೆಯೇ ಮನೆಯ ಯಜಮಾನಿಗೆ ಕೊಡಲಿರುವ ಹಣ ಕೂಡ ಬೇಡ ಎನ್ನುವ ಮಹಿಳೆಯರೂ ಬಹಳಷ್ಟು ಮಂದಿ ಇರುತ್ತಾರೆ. ಇವರನ್ನು ಸರ್ಕಾರ ಹೇಗೆ ಗುರುತಿಸುತ್ತದೆ?

ವಿಶಾಲಾಕ್ಷಿ ಶರ್ಮಾ, ಬೆಂಗಳೂರು

ಚಾಲಕನ ಹೊಣೆಗೇಡಿ ವರ್ತನೆ

ಬೀದರ್‌ನ ಔರಾದ್‌ನಲ್ಲಿ ಬಸ್ಸಿಗಾಗಿ ಕಾದುಕಾದು ಸುಸ್ತಾದ ವ್ಯಕ್ತಿಯೊಬ್ಬ ತಾನೇ ಬಸ್ಸನ್ನು ಚಲಾಯಿಸಿಕೊಂಡು ಹೋಗಿ ಅಪಘಾತ ಮಾಡಿರುವ ಪ್ರಕರಣ ವರದಿಯಾಗಿದೆ (ಪ್ರ.ವಾ., ಜೂನ್ 6). ಈ ಪ್ರಕರಣ ಬಸ್ ಚಾಲಕನ ನಿರ್ಲಕ್ಷ್ಯಕ್ಕೆ ನಿದರ್ಶನ. ಪ್ರಯಾಣಿಕರು ಕುಳಿತಿದ್ದ ಬಸ್ಸಿನ ಕೀಯನ್ನು ಅಲ್ಲಿಯೇ ಬಿಟ್ಟು ಹೋಗಿದ್ದು ಚಾಲಕನ ಬೇಜವಾಬ್ದಾರಿತನದ ಪರಮಾವಧಿ. ಆತನ ಮೇಲೆ ನಿರ್ದಾಕ್ಷಿಣ್ಯವಾದ ಕ್ರಮ ತೆಗೆದುಕೊಳ್ಳಬೇಕು. ಅಂತೂ ಯಾವುದೇ ಪ್ರಾಣಹಾನಿ ಸಂಭವಿಸದೇ ಇರುವುದು ಖುಷಿಯ ವಿಷಯ. ಆದರೆ ಮುಂದೆ ಈ ರೀತಿಯ ಅವಘಡಗಳು ಸಂಭವಿಸದಂತೆ ಎಚ್ಚರ ವಹಿಸಬೇಕು.

ಮಲ್ಲತಹಳ್ಳಿ ಡಾ. ಎಚ್.ತುಕಾರಾಂ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

68,103 ಕಿ.ಮೀ
ದೇಶದಲ್ಲಿರುವ ರೈಲು ಮಾರ್ಗಗಳ ಒಟ್ಟು ಉದ್ದ

ಸುರಕ್ಷೆಗೆ ಅಲಕ್ಷ್ಯ, ಅನುದಾನ ಬರ

ಪ್ರಜಾವಾಣಿ ವಾರ್ತೆ

ರೈಲು ಪ್ರಯಾಣದಲ್ಲಿ ಸಂಭವಿಸುವ ಅಪಘಾತಗಳನ್ನು ತಪ್ಪಿಸುವ ಸಲುವಾಗಿ ನಮ್ಮಲ್ಲಿ ಸೂಕ್ತ ವ್ಯವಸ್ಥೆಗಳಿದ್ದರೂ, ಅದನ್ನು ಸಮರೋಪಾದಿಯಲ್ಲಿ ಅನುಷ್ಠಾನಕ್ಕೆ ತರುತ್ತಿಲ್ಲ ಎಂಬುದರತ್ತ ಮಹಾಲೇಖಪಾಲರ (ಸಿಎಜಿ) ವರದಿ ಬೊಟ್ಟು ಮಾಡಿ ತೋರಿಸಿದೆ. ಜತೆಗೆ ರೈಲ್ವೆ ಸುರಕ್ಷೆ ಮತ್ತು ಭದ್ರತೆಗೆ ಸಂಬಂಧಿಸಿದ ಸಂಸದೀಯ ಸ್ಥಾಯಿ ಸಮಿತಿಯ ವರದಿಯೂ ಇದೇ ಮಾತನ್ನು ಹೇಳಿದೆ.

ದೇಶದಲ್ಲಿ ಸಂಭವಿಸಿದ ಬಹುತೇಕ ರೈಲು ಅಪಘಾತಗಳಿಗೆ ಕಾರಣ ಸಿಗ್ನಲಿಂಗ್ ವ್ಯವಸ್ಥೆ ಮತ್ತು ಚಾಲಕನಿಂದಾದ ಲೋಪ ಎನ್ನುತ್ತದೆ ಸಂಸದೀಯ ಸ್ಥಾಯಿ ಸಮಿತಿಯ ವರದಿ. 'ಈ ವಿಚಾರದಲ್ಲಿ ರೈಲು ಚಾಲಕರನ್ನೂ ದೂರುವ ಹಾಗಿಲ್ಲ. ದೇಶದಲ್ಲಿನ ಪ್ರತಿ ರೈಲು ಮಾರ್ಗದಲ್ಲೂ ಕಿ.ಮೀ.ಗೆ ಒಂದರಂತೆ ಸಿಗ್ನಲ್‌ಗಳಿವೆ. ಚಾಲಕರು ಆ ಎಲ್ಲಾ ಸಿಗ್ನಲ್‌ಗಳನ್ನು ಬರಿಗಣ್ಣಿನಿಂದಲೇ ನೋಡಿ, ನಿರ್ಧಾರ ತೆಗೆದುಕೊಳ್ಳಬೇಕು. ಇದು ಬಹಳ ತ್ರಾಸದಾಯಕ ಕೆಲಸ. ಈ ಕಾರಣದಿಂದಲೇ ಸಿಗ್ನಲ್‌ಗಳನ್ನು ಸರಿಯಾಗಿ ಗುರುತಿಸುವಲ್ಲಿ ಮತ್ತು ಸರಿಯಾದ ನಿರ್ಧಾರ ತೆಗೆದುಕೊಳ್ಳುವಲ್ಲಿ ಲೋಪವಾಗುತ್ತದೆ. ಇದನ್ನು ತಪ್ಪಿಸುವ ವ್ಯವಸ್ಥೆ ಆಗಬೇಕು' ಎಂದು ಸಮಿತಿಯು 2016–17ನೇ ಸಾಲಿನಲ್ಲಿ ಸಲ್ಲಿಸಿದ್ದ ವರದಿಯಲ್ಲಿ ಶಿಫಾರಸು ಮಾಡಿತ್ತು.

ಸಿಗ್ನಲ್ ಗುರುತಿಸಲು ಮತ್ತು ಅದಕ್ಕೆ ಸಂಬಂಧಿಸಿದ ನಿರ್ಧಾರ ತೆಗೆದುಕೊಳ್ಳಲು ಸ್ವಯಂಚಾಲಿತ ವ್ಯವಸ್ಥೆಯೊಂದನ್ನು ಜಾರಿಗೆ ತರುವ ಯೋಜನೆಗೆ 2012ರಲ್ಲಿ ಯುಪಿಎ–2 ಸರ್ಕಾರ ಚಾಲನೆ ನೀಡಿತ್ತು. ಸಿಗ್ನಲ್ ನೀಡುವ ಮತ್ತು ಅದಕ್ಕೆ ತಕ್ಕಂತೆ ರೈಲು ಚಲಿಸದಿದ್ದರೆ ಸ್ವಯಂಚಾಲಿತವಾಗಿ ಬ್ರೇಕ್ ಹಾಕುವ ಕೆಲಸವನ್ನು ಈ ವ್ಯವಸ್ಥೆ ಮಾಡಬೇಕಿತ್ತು. ವಿದೇಶಗಳಲ್ಲಿ ಈ ವ್ಯವಸ್ಥೆ ಲಭ್ಯವಿದ್ದರೂ ಸಂಪೂರ್ಣ ದೇಶೀಯವಾಗಿ ಇದನ್ನು ಅಭಿವೃದ್ಧಿಪಡಿಸುವುದು ಯೋಜನೆಯ ಉದ್ದೇಶವಾಗಿತ್ತು. ರೈಲ್ವೆ ಇಲಾಖೆಯ 'ರಿಸರ್ಚ್ ಡಿಸೈನ್ಸ್ ಅಂಡ್ ಸ್ಟಾಂಡರ್ಡ್ಸ್ ಆರ್ಗನೈಸೇಷನ್' ಇದನ್ನು ಅಭಿವೃದ್ಧಿಪಡಿಸಿತ್ತು. ಸಂಪೂರ್ಣ ದೇಶೀಯವಾದ ಈ ವ್ಯವಸ್ಥೆಗೆ 'ಕವಚ' ಎಂದು ಹೆಸರಿಡಲಾಗಿತ್ತು. ಕವಚ ವ್ಯವಸ್ಥೆಯ ಮೊದಲ ಪ್ರಾತ್ಯಕ್ಷಿಕೆಯನ್ನು 2016ರಲ್ಲಿ ನೀಡಲಾಗಿತ್ತು. ಆದರೆ, ಈ ವ್ಯವಸ್ಥೆ ಬಳಕೆಗೆ ಸಿದ್ಧವಾಗಿದೆ ಎಂದು ಘೋಷಿಸಿದ್ದು 2022ರ ಮಾರ್ಚ್‌ನಲ್ಲಿ. ಆನಂತರವಷ್ಟೇ ಈ ವ್ಯವಸ್ಥೆ ಬಳಕೆಗೆ ಚಾಲನೆ ನೀಡಲಾಯಿತು.

'ಕವಚ' ಅನುಷ್ಠಾನಕ್ಕೆ ಬೇಕು ವೇಗ

ದೇಶದಲ್ಲಿ ಒಟ್ಟು 68,103 ಕಿ.ಮೀ. ಉದ್ದದಷ್ಟು ರೈಲುಮಾರ್ಗವಿದ್ದು, ಅದರಲ್ಲಿ 35,736 ಕಿ.ಮೀ. ಉದ್ದದಷ್ಟು ರೈಲು ಮಾರ್ಗಕ್ಕೆ ಕವಚ ವ್ಯವಸ್ಥೆ ಅಳವಡಿಸಲು 2022–23ರ ಬಜೆಟ್‌ನಲ್ಲಿ ಒಪ್ಪಿಗೆ ನೀಡಲಾಗಿದೆ ಎಂದು ಕೇಂದ್ರ ಸರ್ಕಾರವು ಹೇಳಿದೆ. ಆದರೆ 2022–23ರ ಬಜೆಟ್‌ನಲ್ಲಿ 2,000 ಕಿ.ಮೀ.ನಷ್ಟು ಉದ್ದದ ಮಾರ್ಗಕ್ಕೆ ಕವಚ ವ್ಯವಸ್ಥೆ ಅಳವಡಿಸಲಾಗುವುದು ಎಂದು ಹೇಳಲಾಗಿದೆ. ಇದನ್ನು ಅನುಷ್ಠಾನಕ್ಕೆ ತರುವುದು ಹೇಗೆ ಮತ್ತು ಇದಕ್ಕಾಗಿ ಎಷ್ಟು ಹಣ ಮೀಸಲಿರಿಸಲಾಗಿದೆ ಎಂಬುದರ ಮಾಹಿತಿ ಮತ್ತು ಕಾರ್ಯ ಯೋಜನೆ ಲಭ್ಯವಿಲ್ಲ.

ಕೇಂದ್ರ ರೈಲ್ವೆ ಸಚಿವರು ಈಚೆಗೆ ನೀಡಿರುವ ಮಾಹಿತಿ ಪ್ರಕಾರ ಕವಚ ವ್ಯವಸ್ಥೆ ಅಳವಡಿಕೆಗೆ 6,000 ಕಿ.ಮೀ. ಉದ್ದದಷ್ಟು ಮಾರ್ಗದಲ್ಲಿ ಸರ್ವೇ ಕಾರ್ಯ ನಡೆಯುತ್ತಿದೆ. ಈ ಸರ್ವೇ ಕಾರ್ಯ ಪೂರ್ಣಗೊಳ್ಳುವುದು ಯಾವಾಗ ಎಂಬುದರ ಮಾಹಿತಿ ಲಭ್ಯವಿಲ್ಲ. ಜತೆಗೆ, 2,951 ಕಿ.ಮೀ. ನಷ್ಟು ಉದ್ದದ ಮಾರ್ಗಕ್ಕೆ ಕವಚ ಅಳವಡಿಸಲು ಟೆಂಡರ್ ಕಾರ್ಯ ಪೂರ್ಣಗೊಂಡಿದೆ. 2024ರ ವೇಳೆಗೆ ಅಳವಡಿಕೆ ಕಾರ್ಯ ಪೂರ್ಣಗೊಳ್ಳಬೇಕು ಎಂದು ಸರ್ಕಾರ ಹೇಳಿದೆ. ಆದರೆ, ಈ ಕಾಮಗಾರಿಗಳ ಪ್ರಗತಿಯ ವರದಿ ಲಭ್ಯವಿಲ್ಲ.

'ಸಿಗ್ನಲ್ ನೀಡುವ ಮತ್ತು ಸಿಗ್ನಲ್ ಮೀರುವ ಸಮಸ್ಯೆಗಳಿಂದಲೇ ಹೆಚ್ಚಿನ ಅಪಘಾತ ಸಂಭವಿಸುತ್ತದೆ. ಇದನ್ನು ತಪ್ಪಿಸುವ ಕೆಲಸವನ್ನು ರೈಲ್ವೆ ಇಲಾಖೆ ಮಾಡಬೇಕಿತ್ತು. ಈ ಎಲ್ಲಾ ಅಪಘಾತಗಳ ಸಂದರ್ಭದಲ್ಲಿ ಇಲಾಖೆಯು ಕೇವಲ ತನಿಖಾ ವರದಿ ಪಡೆದುಕೊಳ್ಳುತ್ತದೆ. ಆದರೆ, ಅಪಘಾತವನ್ನು ತಪ್ಪಿಸಲು ಯಾವ ಕ್ರಮವನ್ನೂ ಇಲಾಖೆ ತೆಗೆದುಕೊಳ್ಳುತ್ತಿಲ್ಲ. ಈ ದಿಸೆಯಲ್ಲಿ ರೈಲ್ವೆ ಇಲಾಖೆಯು ತೆಗೆದುಕೊಳ್ಳುತ್ತಿರುವ ಕ್ರಮ ಸಾಲದು ಎಂದು ಸಂಸದೀಯ ಸ್ಥಾಯಿ ಸಮಿತಿ ತನ್ನ ವರದಿಯಲ್ಲಿ ಅಸಮಾಧಾನ ವ್ಯಕ್ತಪಡಿಸಿದೆ. ಇದನ್ನು ಗಂಭೀರವಾಗಿ ಪರಿಗಣಿಸಬೇಕು' ಎಂದು ಸಿಎಜಿ ತನ್ನ ವರದಿಯಲ್ಲಿ ಶಿಫಾರಸು ಮಾಡಿದೆ.

ಕವಚ ಇದ್ದಿದ್ದರೆ...

ರೈಲು ಚಾಲಕರು ಸಿಗ್ನಲ್ ಪಾಲಿಸುವಲ್ಲಿ ವಿಫಲವಾದಾಗ ಮತ್ತು ಎರಡು ರೈಲುಗಳು ಒಂದೇ ಲೇನ್ ಅನ್ನು ಪ್ರವೇಶಿಸಿದಾಗ 'ಕವಚ' ವ್ಯವಸ್ಥೆಯು ಸ್ವಯಂಚಾಲಿತವಾಗಿ ಬ್ರೇಕ್ ಹಾಕಿಕೊಳ್ಳುತ್ತದೆ. ಬಾಲೇಶ್ವರದ ಬಹನಾಗಾ ಬಜಾರ್ ರೈಲು ನಿಲ್ದಾಣದ ಬಳಿ ಈಚೆಗಷ್ಟೇ ನಡೆದ ಅಪಘಾತದಲ್ಲಿ ಕೋರೊಮಂಡಲ್ ಎಕ್ಸ್‌ಪ್ರೆಸ್ ರೈಲು, ಸರಕು ಸಾಗಣೆ ರೈಲು ಇದ್ದ ಲೇನ್ ಅನ್ನು ಪ್ರವೇಶಿಸಿತ್ತು. ಈ ಮಾರ್ಗದಲ್ಲಿ ಮತ್ತು ಈ ರೈಲುಗಳಲ್ಲಿ ಕವಚ ವ್ಯವಸ್ಥೆ ಇದ್ದಿದ್ದರೆ, ಈ ಅಪಘಾತವನ್ನು ತಪ್ಪಿಸಬಹುದಾಗಿತ್ತು ಎಂಬುದು ತಜ್ಞರ ವಿಶ್ಲೇಷಣೆ. ಕೋರೊಮಂಡಲ್ ಎಕ್ಸ್‌ಪ್ರೆಸ್ ರೈಲಿನಲ್ಲಿ ಕವಚ ವ್ಯವಸ್ಥೆ ಇದ್ದಿದ್ದರೆ ಅದು ಸರಕು ಸಾಗಣೆ ರೈಲು ಇದ್ದ ಲೇನ್ ಅನ್ನು ಪ್ರವೇಶಿಸಿದ ಕೂಡಲೇ ಕವಚ ವ್ಯವಸ್ಥೆಯು ಸ್ವಯಂಚಾಲಿತವಾಗಿ ಬ್ರೇಕ್ ಹಾಕಿಕೊಳ್ಳುತ್ತಿತ್ತು. ಇನ್ನು ಹೌರಾ-ಬೆಂಗಳೂರು ಎಕ್ಸ್‌ಪ್ರೆಸ್ ರೈಲಿನಲ್ಲೂ ಕವಚ ವ್ಯವಸ್ಥೆ ಇದ್ದಿದ್ದರೆ, ಅದು ಚಲಿಸುತ್ತಿದ್ದ ಲೇನ್‌ನಲ್ಲಿ ಕೋರೊಮಂಡಲ್ ರೈಲಿನ ಬೋಗಿಗಳು ಬಿದ್ದಿದ್ದಾಗ ಸ್ವಯಂಚಾಲಿತವಾಗಿ ಬ್ರೇಕ್ ಹಾಕಿಕೊಳ್ಳುತ್ತಿತ್ತು ಎಂಬುದು ತಜ್ಞರ ವಿಶ್ಲೇಷಣೆ.



ಸಿಎಜಿ ಶಿಫಾರಸುಗಳು

- ಸುರಕ್ಷತಾ ಕ್ರಮಗಳಲ್ಲಿ ಆದ್ಯತೆ ಅಲ್ಲದ ಕಾರ್ಯಗಳಿಗೆ ರೈಲ್ವೆಯು ವಿನಿಯೋಗಿಸುತ್ತಿರುವ ಹಣದ ಪ್ರಮಾಣವು ಪ್ರತಿ ವರ್ಷ ಹೆಚ್ಚಾಗುತ್ತಲೇ ಇದೆ. ಇದನ್ನು ತಪ್ಪಿಸಬೇಕು. ಆದ್ಯತೆಯ ಕಾರ್ಯಗಳಿಗೆ ಹಣವನ್ನು ತೆಗೆದಿರಿಸಬೇಕು. ರಾಷ್ಟ್ರೀಯ ರೈಲು ಸಂರಕ್ಷಣಾ ಕೋಶದ ನಿಧಿಯನ್ನು ಅಗತ್ಯ ಕಾರ್ಯಗಳಿಗಷ್ಟೇ ವೆಚ್ಚ ಮಾಡಬೇಕು
- ಹಳಿ ನಿರ್ವಹಣೆ ಮತ್ತು ನವೀಕರಣಕ್ಕೆ ಸಂಬಂಧಿಸಿದಂತೆ ಸಂಸದೀಯ ಸ್ಥಾಯಿ ಸಮಿತಿ ನೀಡಿರುವ ಶಿಫಾರಸುಗಳನ್ನು ರೈಲ್ವೆ ಇಲಾಖೆಯು ಕಡೆಗಣಿಸಿದೆ. ಆ ಶಿಫಾರಸುಗಳನ್ನು ಅನುಷ್ಠಾನಕ್ಕೆ ತರಬೇಕು
- ರೈಲು ಸುರಕ್ಷತೆಗೆ ಸಂಬಂಧಿಸಿದಂತೆ ತೆಗೆದುಕೊಳ್ಳಬೇಕಿರುವ ಕ್ರಮಗಳ ಕುರಿತು ವಿಸ್ತೃತವಾದ ಕಾರ್ಯಯೋಜನೆಯನ್ನು ಸಿದ್ಧಪಡಿಸಬೇಕು ಮತ್ತು ಅದನ್ನು ಅನುಷ್ಠಾನಕ್ಕೆ ತರಬೇಕು

35,736 ಕಿ.ಮೀ
ಕವಚ ವ್ಯವಸ್ಥೆ ಅಳವಡಿಕೆಗೆ ತಾತ್ವಿಕ ಮಂಜೂರಾತಿ ಪಡೆದಿರುವ ಮಾರ್ಗದ ಒಟ್ಟು ಉದ್ದ

6,000 ಕಿ.ಮೀ
ಕವಚ ವ್ಯವಸ್ಥೆ ಅಳವಡಿಕೆಗೆ ಸರ್ವೇ ಕಾರ್ಯ ಆರಂಭಿಸಲಾಗಿರುವ ಮಾರ್ಗಗಳ ಒಟ್ಟು ಉದ್ದ

2,951 ಕಿ.ಮೀ
ಕವಚ ವ್ಯವಸ್ಥೆ ಅಳವಡಿಕೆಗೆ ಗುತ್ತಿಗೆ ನೀಡಿಕೆ ಪೂರ್ಣಗೊಂಡಿರುವ ಮಾರ್ಗಗಳ ಒಟ್ಟು ಉದ್ದ

1,445 ಕಿ.ಮೀ
ಕವಚ ವ್ಯವಸ್ಥೆ ಅಳವಡಿಕೆ ಕಾರ್ಯ ಪೂರ್ಣಗೊಂಡಿರುವ ಮಾರ್ಗಗಳ ಉದ್ದ


ಹಳಿ ನವೀಕರಣಕ್ಕೆ ಹಣವಿಲ್ಲ

ರೈಲ್ವೆ ಸುರಕ್ಷೆಯಲ್ಲಿ ಹಳಿಗಳ ನವೀಕರಣವು ಬಹಳ ಮುಖ್ಯ ಪಾತ್ರ ವಹಿಸುತ್ತದೆ. ಪ್ರತಿ ವರ್ಷ 4,500 ಕಿ.ಮೀ ಉದ್ದದಷ್ಟು ಹಳಿಗಳನ್ನು ನವೀಕರಣ ಮಾಡಬೇಕು ಎಂದು ಸಂಸದೀಯ ಸ್ಥಾಯಿ ಸಮಿತಿಯು ನೀಡಿದ್ದ 'ರೈಲ್ವೆ ಸುರಕ್ಷೆ ಮತ್ತು ಭದ್ರತೆ' ವರದಿಯಲ್ಲಿ ಹೇಳಿತ್ತು. ಆದರೆ, ಈ ಪ್ರಮಾಣದ ಗುರಿಯನ್ನು ಹಾಕಿಕೊಳ್ಳುವಲ್ಲಿ ರೈಲ್ವೆ ಇಲಾಖೆ ಸೋತಿದೆ ಎಂದು ಸಿಎಜಿ ತನ್ನ ವರದಿಯಲ್ಲಿ ಹೇಳಿದೆ. ಅನುದಾನದ ಕೊರತೆ ಕಾರಣದಿಂದಲೇ ವಿವಿಧ ರೈಲ್ವೆ ವಿಭಾಗಗಳು ಹಳಿಗಳ ನವೀಕರಣ ಕಾಮಗಾರಿಯನ್ನು ಅಗತ್ಯ ಪ್ರಮಾಣದಲ್ಲಿ ನಡೆಸಿಲ್ಲ ಎಂದೂ ಸಿಎಜಿ ಹೇಳಿದೆ. ಸ್ಥಾಯಿ ಸಮಿತಿಯ ವರದಿಯ ಕುರಿತು ಇಲಾಖೆಯು ಸಂಸತ್ತಿನಲ್ಲಿ ನೀಡಿದ ಉತ್ತರದಲ್ಲೂ ಇದೇ ಅಂಶವನ್ನು ಉಲ್ಲೇಖಿಸಲಾಗಿದೆ.

'ಕನಿಷ್ಠ 4,500 ಕಿ.ಮೀ ಉದ್ದದಷ್ಟು ಹಳಿಗಳನ್ನು ಪ್ರತಿ ವರ್ಷ ನವೀಕರಣ ಮಾಡಬೇಕು. ಜೊತೆಗೆ, ವಿವಿಧ ವಲಯಗಳು ತಮಗೆ ಸಿಗುವ ಅನುದಾನದ ಪ್ರಮಾಣವನ್ನು ನೋಡಿಕೊಂಡು, ಈ ಗುರಿಯನ್ನು ಹೆಚ್ಚು ಅಥವಾ ಕಡಿಮೆ ಮಾಡಿಕೊಳ್ಳಬಹುದು' ಎಂದು ಸ್ಥಾಯಿ ಸಮಿತಿ ತನ್ನ ವರದಿಯಲ್ಲಿ ಹೇಳಿತ್ತು. ಆದರೆ, ವಿವಿಧ ವಲಯಗಳು ಈ ಕನಿಷ್ಠ ಗುರಿಯನ್ನೂ ಹಾಕಿಕೊಳ್ಳುವುದರಲ್ಲಿ ಸೋತಿವೆ. ಹೆಚ್ಚೆಂದರೆ ವಾರ್ಷಿಕವಾಗಿ 2,723.89 ಕಿ.ಮೀನಷ್ಟು ಗುರಿಯನ್ನು ಮಾತ್ರ ಹಾಕಿಕೊಳ್ಳುವಲ್ಲಿ ವಿವಿಧ ವಲಯಗಳು ಶಕ್ತವಾಗಿವೆ. ಇದು ಕನಿಷ್ಠ 4,500 ಕಿ.ಮೀ ಗುರಿಯ ಆಸುಪಾಸಿನಲ್ಲೂ ಬರುವುದಿಲ್ಲ' ಎಂದು ವರದಿಯಲ್ಲಿ ಹೇಳಲಾಗಿದೆ.

ರೈಲ್ವೆಯ ವಿವಿಧ ವಲಯಗಳು ಕಳೆದ ಕೆಲವು ವರ್ಷಗಳಿಂದ ವಾರ್ಷಿಕವಾಗಿ ಹಾಕಿಕೊಂಡ ಹಳಿ ನವೀಕರಣದ ಗುರಿಯಗಳ ಬಗ್ಗೆ ಸಿಎಜಿ ಅಸಮಾಧಾನ ವ್ಯಕ್ತಪಡಿಸಿದೆ. ಈ ಕಾರಣದಿಂದ ದೇಶದಾದ್ಯಂತ ತೀವ್ರಗತಿಯಲ್ಲಿ ಆಗಬೇಕಿದ್ದ ಹಳಿ ನವೀಕರಣದಲ್ಲಿ ಹಿಂದೆ ಬಿದ್ದಂತಾಗಿದೆ. ವಿವಿಧ ವಲಯಗಳು ಅಗತ್ಯ ಇರುವಷ್ಟಾದರೂ ಗುರಿ ಹಾಕಿಕೊಳ್ಳಬೇಕು ಮತ್ತು ಆ ಗುರಿಯನ್ನು ಸಾಧಿಸಬೇಕು ಎಂದು ಸಿಎಜಿ ಹೇಳಿದೆ.

ಹಳಿ ರಿಪೇರಿ, ಬದಲಾವಣೆ ಪ್ರಗತಿ




ರೈಲ್ವೆಯ ನಾಲ್ಕು ವಲಯಗಳಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ರೈಲು ಹಳಿ ತಪ್ಪಿ 70 ಅವಘಡಗಳು ಸಂಭವಿಸಿವೆ. ಇದರಲ್ಲಿ 16 ಅವಘಡಗಳು ಹಳಿ ನವೀಕರಣ ಮಾಡದ ಕಾರಣಕ್ಕಾಗಿಯೇ ಸಂಭವಿಸಿವೆ ಎಂದು ಸಿಎಜಿ ಹೇಳಿದೆ.

ಆಧಾರ: ರೈಲ್ವೆ ಇಲಾಖೆ ಕುರಿತಾದ ಸಿಎಜಿ ವರದಿಗಳು, ರೈಲ್ವೆ ವ್ಯವಹಾರಗಳ ಸಂಸದೀಯ ಸ್ಥಾಯಿ ಸಮಿತಿ ವರದಿ, ಕೇಂದ್ರ ಬಜೆಟ್ ಭಾಷಣಗಳು, ಪಿಟಿಐ

ಸಿನಿ ಬಿಟ್ಸ್

'ಭೈರತಿ ರಣಗಲ್'ಗೆ ಜೋಡಿಯಾದ ರುಕ್ಮಿಣಿ


ರುಕ್ಮಿಣಿ ವಸಂತ್

'ಬೀರ್‌ಬಲ್' ಬೆಡಗಿಯಾಗಿ ಚಂದನವನ ಪ್ರವೇಶಿಸಿದ್ದ ನಟಿ ರುಕ್ಮಿಣಿ ವಸಂತ್ ಇದೀಗ ಸೆಂಚುರಿ ಸ್ಟಾರ್ ಶಿವರಾಜ್‌ಕುಮಾರ್ ನಟನೆಯ 'ಭೈರತಿ ರಣಗಲ್' ಸಿನಿಮಾಗೆ ನಾಯಕಿಯಾಗಿದ್ದಾರೆ.

ನಟ ರಕ್ಷಿತ್ ಶೆಟ್ಟಿ ನಟನೆಯ 'ಸಪ್ತ ಸಾಗರದಾಚೆ ಎಲ್ಲೋ', ಗೋಲ್ಡನ್ ಸ್ಟಾರ್ ಗಣೇಶ್ ನಟನೆಯ 'ಬಾನದಾರಿಯಲ್ಲಿ' ಹಾಗೂ ನಟ ಶ್ರೀಮುರಳಿ ನಟನೆಯ 'ಬಘೀರ' ಸಿನಿಮಾದಲ್ಲಿ ನಾಯಕಿಯಾಗಿ ನಟಿಸಿರುವ ರುಕ್ಮಿಣಿ ಈ ಮೂರೂ ಸಿನಿಮಾಗಳ ಬಿಡುಗಡೆಗೆ ಎದುರು ನೋಡುತ್ತಿದ್ದಾರೆ. ಇದರ ಬೆನ್ನಲ್ಲೇ ಹೊಸ ಪ್ರಾಜೆಕ್ಟ್‌ಗೆ ಹಸಿರು ನಿಶಾನೆ ನೀಡಿದ್ದಾರೆ.

ಗೀತಾ ಪಿಕ್ಚರ್ಸ್ ಲಾಂಛನದಲ್ಲಿ ಗೀತಾ ಶಿವರಾಜ್‌ಕುಮಾರ್ ಅವರು ನಿರ್ಮಿಸುತ್ತಿರುವ, ನರ್ತನ್ ನಿರ್ದೇಶನದ 'ಭೈರತಿ ರಣಗಲ್' ಚಿತ್ರದ ಮುಹೂರ್ತ ಇತ್ತೀಚೆಗಷ್ಟೇ ನಡೆದಿತ್ತು. 'ಮಫ್ತಿ' ಚಿತ್ರದ ಹಿಂದಿನ ಕಥೆ(ಪ್ರೀಕ್ವೆಲ್) ಇದಾಗಿದೆ. 'ಮಫ್ತಿ' ಚಿತ್ರದ ಮಧ್ಯಂತರದ ನಂತರ 'ಭೈರತಿ ರಣಗಲ್' ಎಂಬ ಪಾತ್ರ ಬರುತ್ತದೆ. ಪ್ರೀಕ್ವೆಲ್ ಭಾಗದಲ್ಲಿ 'ಭೈರತಿ ರಣಗಲ್' ಆಗಿದ್ದು ಹೇಗೆ ಎಂಬ ಕಥೆ ಇರಲಿದೆ ಎಂದು ನರ್ತನ್ ಹೇಳಿದ್ದರು. ರವಿ ಬಸ್ರೂರು ಸಂಗೀತ ನಿರ್ದೇಶನ, ನವೀನ್ ಕುಮಾರ್ ಅವರ ಛಾಯಾಚಿತ್ರಗ್ರಹಣ ಹಾಗೂ ಶಿವಕುಮಾರ್ ಅವರ ಕಲಾ ನಿರ್ದೇಶನ ಈ ಚಿತ್ರಕ್ಕಿದೆ.

'ಐರಾವನ್' ಕೊನೆಯ ಸಿನಿಮಾಗಳಲ್ಲೊಂದು!

ಕನ್ನಡ ಹಾಗೂ ಹಿಂದಿ ಕಿರುತೆರೆಯಲ್ಲಿ ಮಿಂಚಿ, ಚಂದನವನಕ್ಕೆ ಕಾಲಿಟ್ಟಿದ್ದ ನಟ ಕಾರ್ತಿಕ್ ಜಯರಾಮ್(ಜೆಕೆ) ನಟನೆಯ 'ಐರಾವನ್' ಸಿನಿಮಾ ಜೂನ್ 16ರಂದು ಬಿಡುಗಡೆಯಾಗುತ್ತಿದೆ.

ಸಿನಿಮಾ ಬಿಡುಗಡೆ ಹೊಸ್ತಿಲಲ್ಲೇ ಚಿತ್ರರಂಗದಿಂದಲೇ ದೂರವಿರುವ ಮಾತುಗಳನ್ನು ಆಡಿದ್ದಾರೆ ಜೆಕೆ. 'ಐರಾವನ್' ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಅವಕಾಶಗಳು ಸಿಕ್ಕಿದಾಗ ಅದಕ್ಕೆ ಕೆಲವರು ಅಡ್ಡಬಂದರು. ಅವಕಾಶ ಕೊಡದೇ ಇದ್ದರೂ ತೊಂದರೆ ಇಲ್ಲ, ತುಳಿಯಬೇಡಿ. ದಿನದ ಕೊನೆಯಲ್ಲಿ ಮನಸ್ಸು ನಿಶ್ಚಿಂತೆಯಿಂದ ಇರಬೇಕು ಎಂಬುವುದಷ್ಟೇ ನನ್ನ ಬಯಕೆ. ಹಿಂದಿ ಧಾರಾವಾಹಿಗಳನ್ನು ಪೂರ್ಣಗೊಳಿಸಿ, ಕನ್ನಡ ಮಣ್ಣಿನಲ್ಲಿ ಕನ್ನಡ ಸಿನಿಮಾ ಮಾಡಬೇಕು ಎಂದು ಹಲವು ಹೊಸ ಹಿಂದಿ ಧಾರಾವಾಹಿಗಳ ಅವಕಾಶಗಳನ್ನು ತಿರಸ್ಕರಿಸಿ ಮರಳಿ ಬಂದೆ. ಆದರೆ ನನಗೆ ಸೂಕ್ತ ಬೆಂಬಲ ಸಿಗಲಿಲ್ಲ. ಹೀಗಾಗಿ ದೂರ ಉಳಿಯಲು ನಿರ್ಧರಿಸಿದ್ದೇನೆ. ಐರಾವನ್ ಹಾಗೂ ಮತ್ತೊಂದು ಸಿನಿಮಾ ಮಾಡಿದ್ದೇನೆ. ಅದುವೇ ಕೊನೆ' ಎಂದರು.


ಕಾರ್ತಿಕ್ ಜಯರಾಮ್

ಐರಾವನ್‌ಗೆ ರಾಮ್ಸ್ ರಂಗ ಆ್ಯಕ್ಷನ್ ಕಟ್ ಹೇಳಿದ್ದು, ನಿರಂತರ ಗಣೇಶ್ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಜೆಕೆಗೆ ಜೋಡಿಯಾಗಿ ಅದ್ವಿತಿ ಶೆಟ್ಟಿ ನಟಿಸಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಹಳಿಗಳ ಮೇಲೆ ಕಲ್ಲು ಇಟ್ಟಿದ್ದ ಬಾಲಕನಿಗೆ ಟ್ರ್ಯಾಕ್‌ಮೆನ್‌ಗಳು ಬಯ್ಯುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗಿತ್ತು. ಇದು ಕರ್ನಾಟಕದಲ್ಲಿ ನಡೆದ ಘಟನೆ ಎಂದೂ ಹೇಳಲಾಗಿತ್ತು. ಅರುಣ್ ಪುಡೂರ್ (@arunpudur) ಎಂಬವರು ಜೂನ್ 5ರಂದು ಈ ವಿಡಿಯೊ ಹಂಚಿಕೊಂಡಿದ್ದರು. 'ತಪ್ಪಿದ ಮತ್ತೊಂದು ರೈಲು ದುರಂತ. ದೊಡ್ಡವರನ್ನು ಬಿಡಿ, ಬಾಲಕರನ್ನೂ ಇಂಥ ಕೆಲಸಗಳಿವೆ ಬಳಸಿಕೊಳ್ಳಲಾಗುತ್ತಿದೆ' ಎಂದು ಬರೆದುಕೊಂಡಿದ್ದರು. ಇದನ್ನು 6 ಲಕ್ಷ ಜನರು ವೀಕ್ಷಿಸಿದ್ದಾರೆ ಹಾಗೂ 4 ಸಾವಿರ ಜನರು ಮರುಟ್ವೀಟ್ ಮಾಡಿದ್ದಾರೆ. ಹೀಗೆ ಮಾಡಿದ ಹಲವರು ಇದನ್ನು ಜಿಹಾದಿಗಳು ಮಾಡಿದ್ದಾರೆ ಎಂದರೆ, ಕೆಲವರು ರೋಹಿಂಗ್ಯಾ ಮುಸ್ಲಿಮರು ಮಾಡಿದ್ದಾರೆ ಎಂದಿದ್ದಾರೆ. ಕೆಲವು ಸುದ್ದಿ ಮಾಧ್ಯಮಗಳೂ ಇದೇ ರೀತಿಯಲ್ಲಿ ವರದಿ ಮಾಡಿವೆ. ಆದರೆ, ಈ ವಿಡಿಯೊವನ್ನು ತಪ್ಪಾಗಿ ಅರ್ಥೈಸಲಾಗುತ್ತಿದೆ.



2018ರ ಮೇ 12ರಂದು ಮೊದಲ ಬಾರಿಗೆ ಈ ವಿಡಿಯೊ ಹಂಚಿಕೆಯಾಗಿತ್ತು. ವಿಡಿಯೊದಲ್ಲಿ ಮಾತನಾಡಿರುವ ಕನ್ನಡವನ್ನು ಗಮನಿಸಿ ರಾಯಚೂರು ರೈಲ್ವೆಯ ಸರ್ಕಲ್ ಇನ್‌ಸ್ಪೆಕ್ಟರ್ ರವಿಕುಮಾರ್ ಅವರನ್ನು ಆಲ್ಟ್ ನ್ಯೂಸ್ ಸಂಪರ್ಕಿಸಿತು. 'ಹಳಿಯ ಹತ್ತಿರದಲ್ಲಿ ಇರುವ ಕೊಳೆಗೇರಿಯ ಹುಡುಗ ಈತ. ಬಾಲಕ ಹಿಂದೂ ಧರ್ಮಕ್ಕೆ ಸೇರಿದ್ದಾನೆ. ಹಳಿಯ ಹತ್ತಿರ ಹುಡುಗರು ಸೇರಿ ಆಟವಾಡುತ್ತಿದ್ದರು. ಇದನ್ನು ಗಮನಿಸಿದ ಟ್ರ್ಯಾಕ್‌ಮನ್‌ಗಳು ಬಾಲಕನಿಗೆ ಬೈದಿದ್ದಾರಷ್ಟೆ' ಎಂದು ರವಿ ಅವರು ಸ್ಪಷ್ಟಪಡಿಸಿದರು ಎಂದು ಆಲ್ಟ್ ನ್ಯೂಸ್ ಹೇಳಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಮುಕ್ತಲಕ್ಷಣ

ಸುತ್ತಮುತ್ತಣ ಗಾಳಿಯಾವಗಂ ನಮ್ಮೊಡಲ - |
ನೊತ್ತಿದೊಡಮಾ ಹೊರೆಯ ಮನಸು ಕಾಣದವೊಲ್ ||
ಬಿತ್ತರದ ಲೋಕಭಾರವನಾತ್ಮನರಿಯದಿರೆ |
ಮುಕ್ತಲಕ್ಷಣವದುವೆ – ಮಂಕುತಿಮ್ಮ || **900** ||

ಪದ-ಅರ್ಥ: ಗಾಳಿಯಾವಗಂ = ಗಾಳಿ + ಆವಗಂ (ಯಾವಾಗಲೂ), ನಮ್ಮೊಡಲನೊತ್ತಿದೊಡಮಾ = ನಮ್ಮ + ಒಡಲನು(ದೇಹವನ್ನು) + ಒತ್ತಿದೊಡಂ- + ಆ, ಕಾಣದವೊಲ್ = ಕಾಣದಂತೆ, ಬಿತ್ತರದ = - ವಿಸ್ತಾರವಾದ, ಲೋಕಭಾರವನಾತ್ಮನರಿಯದಿರೆ- = ಲೋಕಭಾರವನು + ಆತ್ಮನು + ಅರಿಯದಿರೆ, ಮುಕ್ತಲಕ್ಷಣವದುವೆ = ಮುಕ್ತಲಕ್ಷಣವು + ಅದುವೆ.

ವಾಚ್ಯಾರ್ಥ: ಸುತ್ತಮುತ್ತಲಿನ ಗಾಳಿ ನಮ್ಮ ದೇಹವನ್ನು ಯಾವಾಗಲೂ ಒತ್ತಿ ಹಿಡಿದಿದ್ದರೂ ಆ ಭಾರವನ್ನು ಮನಸು ಕಾಣದಂತೆ, ವಿಸ್ತಾರವಾದ ಲೋಕಭಾರವನ್ನು ಆತ್ಮ ಅರಿಯದಿದ್ದರೆ ಅದೇ ಮುಕ್ತಲಕ್ಷಣ.

ವಿವರಣೆ: ನಮ್ಮ ಪ್ರಕೃತಿ ಅತ್ಯದ್ಭುತವಾದದ್ದನ್ನು ಸುಲಭವಾಗಿನಿರ್ವಹಿಸುತ್ತದೆ. ಭೂಮಿಯ ಸುತ್ತಲಿರುವ ವಾತಾವರಣದಲ್ಲಿ ಅನೇಕ ವಾಯುಗಳಿವೆ. ಅವೆಲ್ಲ ಸೇರಿ ಗಾಳಿಯಾಗಿದೆ. ಭೂಮಿಯಿಂದ ಸುಮಾರು ನಾಲ್ಕುನೂರು ಕಿಲೋಮೀಟರ್‌ವರೆಗೆ ಗಾಳಿ ಇದೆ. ನೀರಿನಂತೆ ಗಾಳಿಗೂ ಭಾರವಿದೆ. ಅದನ್ನು ಬ್ಯಾರೋಮೀಟರ್ ಎಂಬ ಉಪಕರಣದಿಂದ ಅಳೆಯುತ್ತಾರೆ. ನಮ್ಮೆಲ್ಲರ ತಲೆಯ ಮೇಲೆ ಸದಾಕಾಲ ಎಷ್ಟು ಗಾಳಿಯ ಒತ್ತಡ ಇದೆ ಗೊತ್ತೇ? ವಿಜ್ಞಾನಿಗಳ ಪ್ರಕಾರ ನಮ್ಮ ದೇಹದ ಪ್ರತಿಯೊಂದು ಚದರ ಇಂಚಿನ ಮೇಲೆ ಸುಮಾರು ಆರೂವರೆ ಕಿಲೋಗ್ರಾಂನಷ್ಟು ಗಾಳಿಯ ಭಾರವಿದೆ. ಹಾಗೆಂದರೆ, ಅಷ್ಟು ಭಾರದ ಗಾಳಿಯ ಒತ್ತಡ ನಮ್ಮನ್ನು ನೆಲಕ್ಕೆ ಹಾಕಿ ಒತ್ತಿ ಹಿಡಿದಿದೆ! ತಲೆಯ ಮೇಲೆ ಒಂದು ಕೊಡ ನೀರನ್ನು ಹೊತ್ತರೆ ನಮಗೆ ಭಾರದ ಅರಿವಾಗುತ್ತದೆ. ಐದಾರು ಕಿಲೋಗ್ರಾಂ ತೂಕದ ವಸ್ತುವನ್ನು ಎತ್ತಿ ಹಿಡಿದಿದ್ದರೆ ಭಾರ ತಡೆಯಲಾರದಾಗುತ್ತದೆ. ಆದರೆ ಸದಾಕಾಲ ನಮ್ಮ ತಲೆಯ ಮೇಲೆ ಅಷ್ಟೊಂದು ಭಾರದ ಗಾಳಿಯ ಒತ್ತಡ ಇದ್ದರೂ ನಮಗೆ ಗೊತ್ತೇ ಆಗುವುದಿಲ್ಲ. ವಿಚಿತ್ರವೆಂದರೆ ಭಾರ ಕಡಿಮೆಯಾದಾಗ ಆರೋಗ್ಯದಲ್ಲಿ ಏರುಪೇರಾಗುತ್ತದೆ. ಸಮುದ್ರತೀರದಲ್ಲಿ ಗಾಳಿಯ ಒತ್ತಡ ಹೆಚ್ಚು. ಎತ್ತರದ ಪ್ರದೇಶಗಳಿಗೆ, ಹಿಮಾಲಯದ ಶಿಖರಗಳ ಮೇಲಿರುವ ಪ್ರದೇಶಕ್ಕೆ ಹೋದಾಗ ಗಾಳಿಯ ಒತ್ತಡ ಕಡಿಮೆಯಾಗುತ್ತದೆ. ಆಗ ಉಸಿರಾಟದ ತೊಂದರೆ, ತಲೆನೋವು, ವಾಂತಿ, ಸಂಧಿಗಳಲ್ಲಿ ಊತ ಕಾಣಿಸಿಕೊಳ್ಳುತ್ತದೆ. ಅಂದರೆ, ಗಾಳಿಯ ಭಾರ ಮನಸ್ಸಿಗೆ ಗೊತ್ತಾಗುವುದಿಲ್ಲ. ಅದರ ಅರಿವು ನಮಗೆ ಬರುವುದು, ಅದು ಕಡಿಮೆಯಾದಾಗ ಮಾತ್ರ. ಈ ಕಗ್ಗ ಗಾಳಿಯ ಒತ್ತಡದ ಬಗ್ಗೆ ತಿಳಿಸಿ, ಗಾಳಿಯ ಒತ್ತಡ ಸದಾಕಾಲ ಇದ್ದರೂ ಅದನ್ನು ಮನಸ್ಸು ಗುರುತಿಸದ ಹಾಗೆ, ಈ ವಿಸ್ತಾರದ ಜಗತ್ತಿನಲ್ಲಿ ನಡೆಯುವ ಲೋಕವ್ಯವಹಾರದ ಭಾರ ಆತ್ಮನನ್ನು ತಟ್ಟದಿದ್ದರೆ ಸಾಕು ಎನ್ನುತ್ತದೆ. ಕೆಲವರು ಲೋಕದ ಕೆಲಸವನ್ನು ಆತ್ಮಕ್ಕೆ ಅನ್ವಯಿಸಿ ದೀರ್ಘಕಾಲ ದು:ಖಪಡುತ್ತಾರೆ. ದೇಹಕ್ಕೆ ಆದ ಸುಖ, ದು:ಖಗಳು ಆತ್ಮನಿಗೇ ಆದಂತೆ ಒದ್ದಾಡುತ್ತಾರೆ. ಅದು ಭಾರವಾಗುತ್ತದೆ. ಆದದ್ದೆಲ್ಲ ದೇಹಕ್ಕೆ ಮಾತ್ರ, ಆತ್ಮನಿಗಲ್ಲ ಎಂದು ಯಾರು ಲೋಕದ ಸಂಕಟವನ್ನು ಆತ್ಮಕ್ಕೆ ತಾಗಿಸುವುದಿಲ್ಲವೋ ಆತನೇ ಮುಕ್ತ. ಇದೇ ಮುಕ್ತಲಕ್ಷಣ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಜೂನ್ 7, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ಚತುರ್ಥಿ ಗಂ. 21-51, ನಕ್ಷತ್ರ: ಉತ್ತರಾಷಾಢ ಗಂ. 21-03 ಯೋಗ: ಬ್ರಹ್ಮ ಗಂ. 22-23 ಕರಣ: ಬವ ಗಂ. 11-21, ವೃಷಭ ಮಾಸದ 23 ನೇ ದಿನ, ಮಳೆನಕ್ಷತ್ರ: ರೋಹಿಣಿ 4. ರಾಹುಕಾಲ : ಮಧ್ಯಾಹ್ನ 12-00 – 01-30, ಸೂರ್ಯೋದಯ : 06-07 ಸೂರ್ಯಾಸ್ತ : 06-52, ಮುಸ್ಲಿಂ ದಿನಾಂಕ : 18 ಜುಲ್ಹಾಯದ್
ಅದೃಷ್ಟ ಸಂಖ್ಯೆ : 8, 11

ಮೇಷ: ಸಹೋದರರಲ್ಲಿನ ಸ್ವತ್ತು ವಿಚಾರದಲ್ಲಿ ಬಂಧುಗಳು ನೆರವಿಗೆ ಬರಲಿದ್ದು ತಂದೆಯವರ ಮಾತಿನಂತೆ ನಡೆಯಲು ಒಪ್ಪುವಿರಿ. ಏಜೆನ್ಸಿಯಂತಹ ಉದ್ಯೋಗ ತೆರೆಯಲು ಸೂಕ್ತ ಸ್ಥಳಾವಕಾಶ ಹುಡುಕಾಟದ ಕೆಲಸ ಆರಂಭಿಸುವಿರಿ.

ವೃಷಭ: ಶತ್ರುಗಳು ವಂಚನೆ ಮಾಡುವ ಸಲುವಾಗಿ ಮಿತ್ರರಾಗುವಂತೆ ನಟನೆಮಾಡಿಯಾರು, ಸ್ವಪ್ನದಲ್ಲಿ ಕೂಡಾ ಅಂತವರ ಬಗ್ಗೆ ಜಾಗ್ರತರಾಗಿರಿ. ಇನ್ನೊಬ್ಬರಿಗೆ ಬೆಲೆ ಕೊಟ್ಟು ಬೆಲೆ ಸಂಪಾದಿಸಿಕೊಳ್ಳುವುದನ್ನು ಅಭ್ಯಸಿಸಿ.

ಮಿಥುನ: ಮನೆಯಲ್ಲಿ ದೂರದ ಸಂಬಂಧಿಕರೊಬ್ಬರ ಆಗಮನದಿಂದ ಮನೆಯಲ್ಲಿ ಸಡಗರ ಸೃಷ್ಟಿಸಲಿದೆ. ಸಂಘ ಸಂಸ್ಥೆಗಳಲ್ಲಿ ಅಧಿಕಾರ ಹೊರುವ ಸಂದರ್ಭವು ಬಂದಲ್ಲಿ, ಹಿಂದೆ ಸರಿಯುವುದು ಉತ್ತಮ.

ಕರ್ಕಾಟಕ: ಶಿಲ್ಪಿಗಳಿಗೆ, ಸಮುದ್ರೋತ್ಪನ್ನಗಳ ಮಾರಾಟಗಾರರಿಗೆ ವೃತ್ತಿಯಲ್ಲಿ ಲಾಭ ಸಿಗಲಿದೆ. ಶ್ರೇಯಸ್ಸು ನಿಮ್ಮನ್ನು ಹುಡುಕಿಕೊಂಡು ಬರುವುದರಿಂದ ಸಂತಸಸಿಗುವುದು. ಶತ್ರುಗಳ ಗಾಳಕ್ಕೆ ಸಿಕ್ಕಿಕೊಳ್ಳದಂತೆ ಎಚ್ಚರವಹಿಸಬೇಕು.

ಸಿಂಹ: ಒಳ್ಳೆಯ ನಿರ್ಧಾರಗಳಿಗೆ ಕೆಲವು ಪ್ರಭಾವೀ ವ್ಯಕ್ತಿಗಳ ಹಸ್ತಕ್ಷೇಪ ಇರಬಹುದು. ಆಲಸ್ಯತನಕ್ಕೋಸ್ಕರವಾಗಿ ಕೆಲಸ ಕಾರ್ಯಗಳನ್ನು ಮುಂದೂಡುವ ವಿಚಾರ ಸರಿಯಲ್ಲ. ಜಗನ್ಮಾತೆ ಆರಾಧಿಸಿ ಶುಭ ಉಂಟಾಗುತ್ತದೆ.

ಕನ್ಯಾ: ಬುದ್ಧಿಯನ್ನು ನಿಮ್ಮ ಕೈಯಲ್ಲಿ ಇಟ್ಟುಕೊಳ್ಳುವುದರಿಂದ ನಿಮ್ಮ ಅಭಿವೃದ್ಧಿಗೆ ಅನುಕೂಲ ಆಗುತ್ತದೆ. ಬಂಗಾರ ಖರೀದಿಸುವ ಬಗ್ಗೆ ಮನೆಯಲ್ಲಿ ಮಾತುಕಥೆ ನಡೆಯುವುದು. ಕೆಲವು ಬಾರಿ ಆತಂಕ ಎದುರಾಗುವ ಸಾಧ್ಯತೆ ಇರುತ್ತದೆ.

ತುಲಾ: ಶಿಕ್ಷಕ ವರ್ಗದವರಿಗೆ ಪರಸ್ಪರ ವರ್ಗಾವಣೆ ಮಾಡಿಕೊಳ್ಳುವ ಅವಕಾಶ ಸಿಗುವುದು. ಕಾರ್ಯಗಳ ವೈಫಲ್ಯಕ್ಕೆ ಪ್ರಧಾನ ಕಾರಣವಾಗಿ ಅನುಭವದ ಕೊರತೆ ಕಾಣಲಿದೆ. ಮನಸ್ಸು ಮೋಜು-ಮಸ್ತಿನ ಜೀವನದತ್ತ ಸೆಳೆಯುವುದು.

ವೃಶ್ಚಿಕ: ಧಾರ್ಮಿಕ ವಿಚಾರದಲ್ಲಿ ಆಸಕ್ತಿ ತೋರಿದಷ್ಟೂ ಸುಖ-ಶಾಂತಿ ಹೆಚ್ಚುವುದು. ಗಣ್ಯ ವ್ಯಕ್ತಿಯೊಬ್ಬರನ್ನು ಭೇಟಿಯಾಗುವ ಸಂದರ್ಭ ಬರುವುದು. ಭೋಗ ವಸ್ತುವಿನ ಖರೀದಿಯ ಅವಕಾಶವು ನಿಮ್ಮದಾಗಲಿದೆ.

ಧನು: ಉದ್ಯೋಗಾವಕಾಶದ ದೃಷ್ಟಿಯಿಂದ ಬಹಳ ಮಹತ್ವಪೂರ್ಣವಾಗಿ ಇರುತ್ತದೆ. ಹರಿತಾದ ವಸ್ತುಗಳ, ಯಂತ್ರ ಜತೆ ಕೆಲಸ ಮಾಡುವವರು ಈ ದಿನ ಜಾಗ್ರತರಾಗಿರಿ. ಕ್ರೀಡಾಕ್ಷೇತ್ರದಲ್ಲಿ ಹೆಸರು ಮಾಡುವ ಅವಕಾಶವಿದೆ.

ಮಕರ: ಕೆಲಸಗಾರರಲ್ಲಿ ಒಮ್ಮತಾಭಿಪ್ರಾಯ ಮೂಡಿಸಲು ಅನುಸರಿಸಿದ ಮಾರ್ಗಮೆಚ್ಚಿ ಮೇಲಧಿಕಾರಿಗಳಿಂದ ಪ್ರಶಂಸೆ ಪಡೆಯುವಿರಿ. ತಂದೆ ತಾಯಿ ಶುಶ್ರೂಷೆ, ಚಿಕಿತ್ಸೆಯ ಸಂಭವದಿಂದ ಆರ್ಥಿಕ ಸ್ಥಿತಿಯಲ್ಲಿ ಏರುಪೇರು ಕಾಣುವಿರಿ.

ಕುಂಭ: ಜಮೀನು ಖರೀದಿಸುವ ಬಗ್ಗೆ ಯೋಚನೆಗಳು ಬರುವುದು. ಯೋಚನೆಯಾಗಿ ಉಳಿಯುವುದು. ಶತ್ರುಗಳ ಬಾಧೆ ದೂರಾಗಿ ನಿಮ್ಮ ಇತರ ಯೋಜನೆಗಳು ಈಡೇರಲಿದೆ. ಯೋಜನೆಗಳನ್ನು ಬೆಂಬಲಿಸಲಿದ್ದಾರೆ.

ಮೀನ: ಆಸ್ತಿ ವಿಷಯಗಳನ್ನು ತ್ವರಿತ ಗತಿಯಲ್ಲಿ ಬಗೆಹರಿಸಿಕೊಳ್ಳಲು ಹಿತೈಷಿಯೊಬ್ಬರ ನೆರವು ಪಡೆಯುವಿರಿ. ಷೇರು ವ್ಯವಹಾರ, ಸಿನೆಮಾ ತಯಾರಿಕೆಯಂಥ ಕಾರ್ಯವು ಲಾಭ ತರಲಿದೆ.

ಪದಬಂಧ 5342


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಬೆಳಗಾಗುತ್ತಲೇ ನೆರೆದ ನಂತರ ಸಮೂಹ (3)
4.ಎಲ್ಲರದ್ದೂ ಒಂದೇ ಮತ (3)
6.ದನಕಾಯುವವನು ನೋಡಿದ್ದು ಅಶ್ವದ ಮುಖ (5)
7.ರವಿಕೆಯನ್ನು ಒಣಗಿಸಿದ ಸೂರ್ಯ (2)
9.ಕನ್ನಡ ಮಾತಾಡುವವನಿಗೆ ದೊರೆತ ಸಾಲ (2)
10.ಕಾದಾಡುವ ಜಾಗದಲ್ಲಿರುವ ಅರಣ್ಯ (2)
11.ವಾದಸರಣಿಯಲ್ಲಿ ಕೇಳಿದ್ದು,ಉಲ್ಟಾ ಮಾತು (2)
12.ಬಡಿವಾರ ತೋರಿದ್ದು ಏಳು ದಿನ (2)
13.ಆರ್ಭಟದಲ್ಲಿ ಉಲ್ಟಾ ಹೊಡೆದ ಕ್ರೀಡೆ (2)
18.ನಯವಂತಿಗೆ ತೋರುತ್ತಲೇ ಮೋಸಮಾಡುವವ (5)
19.ನಡುವೆಯೇ ಶುರುವಾದ ಕಂಪನ (3)
20.ರೀತಿಯೊಡಗೂಡುವ ಪದ್ಧತಿ (3)

ಮೇಲಿಂದ ಕೆಳಕ್ಕೆ

1.ಬರದಲ್ಲಿಯೂ ತೋರುತ್ತಿರುವ ಡೌಲು (4)
2.ಗಮನ ನೀಡಿ! ಇದು ಬಲು ಗಂಭೀರ (3)
3.ವನದ ಬಗ್ಗೆ ಬರೆದ ಪದ್ಯ (3)
4.ನೆನಪು ಮಾಡಿಕೊಂಡು ತೋರಿದ ವಯ್ಯಾರ (3)
5.ತಡವಾಗಿ ಬಂದರೆ ಈ ತಬ್ಬಿಬ್ಬು! (4)
8.ಕಾರನೇರುವಾಗಲೇ ಅಂದಗೆಟ್ಟಿದ್ದು (3)
9.ಕಟ ಕಟ ಶಬ್ದ ಮಾಡುವ ಬಾಗಿಲು (3)
12.ತಾಯಿಯ ಮನೆಯ ತೆರೆದ ಕಿಟಕಿ (4)
14.ಆ ಗುಜು ಗುಜು ನಡೆದದ್ದು ಅಕ್ಕಪಕ್ಕದಲ್ಲೇ! (4)
15.ಪಾನಕಕ್ಕೆ ಬಾಯಿ ಹಾಕಿದ ನಾಯಿ (3)
16.ವಂಗ ದೇಶದಲ್ಲಿರುವ ಸಾಂಬಾರದ್ರವ್ಯ (3)
17.ಮಂಕ ಹೊತ್ತಿರುವ ಬುಟ್ಟಿ (3)



5341ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ರಸನ 3.ಉತ್ತರ 5.ಭಾವ 6.ಸರಿ 8.ನಸುಕು 9.ತವಕ 11.ಕಮರಿ 12.ವಿಧಾತ 13.ಗುಲಾಮ 15.ಪಾದುಕೆ 17.ಯಮ 19.ಹಾನಿ 20.ತಿಲಕ 21.ರುಮಾಲು

ಮೇಲಿಂದ ಕೆಳಕ್ಕೆ:
1.ರವ 2.ನಯನ 3.ಉಸುಕು 4.ರಸ 5.ಭಾರತ 7.ರಿಪೇರಿ 10.ಕಡಿತ 11.ಕಸಗು 12.ವಿಷಯ 14.ಮಯನಿ 15.ಪಾತಕ 16.ಕೆಸರು 18.ಮತಿ 19.ಹಾಲು

ಸುಡೊಕು 5728


	4				7		8	3
8			1					7
		3		8	4		5	
3		6						
	8			1				5
1		4	3		8		6	
	7			6				
2		8	4		3			1
				2		8	9	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5727 ಸುಡೊಕು

3	6	7	8	2	9	5	4	1
5	9	4	1	6	7	8	2	3
1	2	8	5	4	3	6	9	7
8	4	1	6	3	2	7	5	9
6	3	5	9	7	8	2	1	4
9	7	2	4	5	1	3	8	6
7	5	3	2	9	4	1	6	8
4	8	6	7	1	5	9	3	2
2	1	9	3	8	6	4	7	5

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,593.85
ಇಂದಿನ ಅಂತ್ಯ	18,599
▲	5.15
ದಿನದ ಗರಿಷ್ಠ	18,622

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹205-485
ದ್ವಿತಳಿ (ಬಿ.ವಿ) ₹ 288-655

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹565
12 ಮೊಟ್ಟೆಗೆ ₹73
ಮೈಸೂರು
100 ಮೊಟ್ಟೆಗೆ ₹572

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1,580(1580)
ಸೋಯಾ (ರಿಫೈನ್ಡ್)	₹885(900)
ಸೂರ್ಯಕಾಂತಿ (ರಿಫೈನ್ಡ್)	₹890(895)
ಪಾಮೋಲಿನ್	₹828(842)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1,000-1,300
ಮಧ್ಯಮ	₹600-1,000
ಸಣ್ಣ	₹300-600

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹15,400
ಎಸಿ	₹7,980
ಆರ್‌ಪಿ	₹10,600
ಆರ್‌ಸಿ	₹6,050

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹152
ಆರ್‌ಎಸ್‌ಎಸ್-5	₹147
ಗುಡ್ ಲಾಟ್	₹128

ಕೊಬ್ಬರಿ ಧಾರಣೆ

ಅರಸೀಕೆರೆ
₹8,000-8,825
ತುರುವೇಕೆರೆ
₹ 8,800-8,800

ಚಿನ್ನಾಭರಣ ಮಾರುಕಟ್ಟೆ ಪ್ರವೇಶಿಸಲಿದೆ ಬಿರ್ಲಾ

ನವದೆಹಲಿ (ಪಿಟಿಐ): ದೇಶದ ಪ್ರಮುಖ ಉದ್ಯಮ ಸಮೂಹವಾಗಿರುವ ಆದಿತ್ಯ ಬಿರ್ಲಾ, ಬ್ರ್ಯಾಂಡೆಡ್ ಚಿನ್ನಾಭರಣ ಮಾರುಕಟ್ಟೆ ಪ್ರವೇಶಿಸುತ್ತಿರುವುದಾಗಿ ಮಂಗಳವಾರ ತಿಳಿಸಿದೆ. ಆರಂಭಿಕ ಹಂತದಲ್ಲಿ ಸಮೂಹವು ಈ ವಹಿವಾಟಿನಲ್ಲಿ ಒಟ್ಟು ₹5,000 ಕೋಟಿ ಹೂಡಿಕೆ ಮಾಡಲಿದೆ.

ಹೊಸ ವಹಿವಾಟಿಗೆ ಸಮೂಹವು 'ನೊವೆಲ್ ವೆಂಚರ್ಸ್' ಎಂಬ ಹೆಸರು ನೀಡಿದೆ. ಸಮೂಹವು ಈ ಹೆಸರಿನ ಅಡಿಯಲ್ಲಿ ದೇಶದ ವಿವಿಧೆಡೆ ಚಿನ್ನಾಭರಣ ಮಳಿಗೆಗಳನ್ನು ತೆರೆಯಲಿದೆ. ಸಮೂಹವು ತನ್ನದೇ ಆದ ಚಿನ್ನಾಭರಣ ಬ್ರ್ಯಾಂಡ್‌ಗಳನ್ನು ಕೂಡ ಮಾರುಕಟ್ಟೆಗೆ ತರಲಿದೆ.

'ದೇಶದ ಜನರಲ್ಲಿ ಖರೀದಿಗೆ ಉಳಿಯುವ ಹಣದ ಮೊತ್ತ ಹೆಚ್ಚಾಗುತ್ತಿದೆ. ಮಹತ್ವಾಕಾಂಕ್ಷೆಯ ಗ್ರಾಹಕರು ಉತ್ತಮ ಗುಣಮಟ್ಟದ ಚಿನ್ನಾಭರಣ ಹೊಂದಲು ಬಯಸುತ್ತಿದ್ದಾರೆ. ಸಮೂಹವು ಗ್ರಾಹಕರ ಆದ್ಯತೆಗಳ ಬಗ್ಗೆ ಹೊಂದಿರುವ ಸೂಕ್ಷ್ಮ ಒಳನೋಟಗಳನ್ನು ಹೊಸ ವಹಿವಾಟು ಬಳಸಿಕೊಳ್ಳಲಿದೆ' ಎಂದು ಆದಿತ್ಯ ಬಿರ್ಲಾ ಸಮೂಹದ ಅಧ್ಯಕ್ಷ ಕುಮಾರ ಮಂಗಲಂ ಬಿರ್ಲಾ ಹೇಳಿದ್ದಾರೆ.

ಬ್ರ್ಯಾಂಡೆಡ್ ಚಿನ್ನಾಭರಣ ಮಾರುಕಟ್ಟೆಯಲ್ಲಿ ಆದಿತ್ಯ ಬಿರ್ಲಾ ಸಮೂಹವು ಟಾಟಾದಂತಹ ಬೃಹತ್ ಉದ್ಯಮಗಳ ಜೊತೆ ಪೈಪೋಟಿ ನಡೆಸಬೇಕಿದೆ. ಟಾಟಾ ಸಮೂಹವು ತನಿಷ್ಕ್ ಬ್ರ್ಯಾಂಡ್ ಅಡಿಯಲ್ಲಿ ಚಿನ್ನಾಭರಣ ವಹಿವಾಟಿನಲ್ಲಿ ತೊಡಗಿಸಿಕೊಂಡಿದೆ.

ಮುಕೇಶ್ ಅಂಬಾನಿ ಒಡೆತನದ ರಿಲಯನ್ಸ್ ಇಂಡಸ್ಟ್ರೀಸ್ ಕೂಡ ರಿಲಯನ್ಸ್ ಜುವೆಲ್ಸ್ ಹೆಸರಿನಲ್ಲಿ ವಹಿವಾಟು ನಡೆಸುತ್ತಿದೆ. ಭಾರತದಲ್ಲಿ ಮುತ್ತು ಹಾಗೂ ಆಭರಣ ಮಾರುಕಟ್ಟೆಯು ದೇಶದ ಒಟ್ಟು ಆಂತರಿಕ ಉತ್ಪಾದನೆಗೆ (ಜಿಡಿಪಿ) ಶೇಕಡ 7ರಷ್ಟು ಕೊಡುಗೆ ನೀಡುತ್ತಿದೆ.

ಭಾರತದ ಜಿಡಿಪಿ ಬೆಳವಣಿಗೆ ಶೇ 6.3

ವಾಷಿಂಗ್ಟನ್ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದಲ್ಲಿ ಭಾರತದ ಜಿಡಿಪಿ ಬೆಳವಣಿಗೆ ದರವು ಶೇಕಡ 6.3ಕ್ಕೆ ಇಳಿಕೆ ಆಗುವ ಸಾಧ್ಯತೆ ಇದೆ ಎಂದು ವಿಶ್ವ ಬ್ಯಾಂಕ್ ಮಂಗಳವಾರ ಹೇಳಿದೆ.

ಆದರೆ ಭಾರತದ ಮಾರುಕಟ್ಟೆಯಲ್ಲಿ ಖಾಸಗಿ ಬೇಡಿಕೆಯಲ್ಲಿ ಹಾಗೂ ಹೂಡಿಕೆಯಲ್ಲಿ ಅನಿರೀಕ್ಷಿತವಾದ ಗಟ್ಟಿತನ ಕಂಡುಬಂದಿದೆ. ಸೇವಾ ವಲಯದಲ್ಲಿ ಭಾರಿ ಬೆಳವಣಿಗೆ ಆಗಿದೆ ಎಂದು ಕೂಡ ಅದು ಹೇಳಿದೆ.

ವಿಶ್ವ ಬ್ಯಾಂಕ್‌ನ ಹೊಸ ಅಂದಾಜಿನ ಪ್ರಕಾರ ಜಾಗತಿಕ ಆರ್ಥಿಕ ಬೆಳವಣಿಗೆಯು 2023ರಲ್ಲಿ ಶೇ 2.1ಕ್ಕೆ ಇಳಿಕೆ ಕಾಣಲಿದೆ. ಇದು 2022ರಲ್ಲಿ ಶೇ 3.1ರಷ್ಟು ಬೆಳವಣಿಗೆ ಸಾಧಿಸಿತ್ತು

ಯುಪಿಐ ಬಳಸಿ ಎಟಿಎಂನಿಂದ ಹಣ

ನವದೆಹಲಿ (ಪಿಟಿಐ): ಯುಪಿಐ ವ್ಯವಸ್ಥೆಯನ್ನು ಬಳಸಿ ಎಟಿಎಂನಿಂದ ನಗದು ಪಡೆಯುವ ವ್ಯವಸ್ಥೆಗೆ ಬ್ಯಾಂಕ್ ಆಫ್ ಬರೋಡ ಚಾಲನೆ ನೀಡಿದೆ.

'ಇಂತಹ ಸೇವೆ ಆರಂಭಿಸಿರುವ ಸರ್ಕಾರಿ ಸ್ವಾಮ್ಯದ ಮೊದಲ ಬ್ಯಾಂಕ್ ನಮ್ಮದು. ಭೀಮ್ ಯುಪಿಐ, ಬಿಒಬಿ ವರ್ಲ್ಡ್ ಯುಪಿಐ ಅಥವಾ ಐಸಿಸಿಡಬ್ಲ್ಯು ಸೇವೆ ಲಭ್ಯವಿರುವ ಯಾವುದೇ ಯುಪಿಐ ಆ್ಯಪ್ ಬಳಸಿ ಬ್ಯಾಂಕ್ ಆಫ್ ಬರೋಡ ಎಟಿಎಂನಿಂದ ನಗದು ಪಡೆಯಬಹುದು. ಹಣ ಹಿಂಪಡೆಯಲು ಡೆಬಿಟ್ ಕಾರ್ಡ್‌ನ ಅಗತ್ಯ ಇಲ್ಲ' ಎಂದು ಬ್ಯಾಂಕ್ ಆಫ್ ಬರೋಡ ತಿಳಿಸಿದೆ.

ಬ್ಯಾಂಕ್ ಆಫ್ ಬರೋಡ ಎಟಿಎಂನಲ್ಲಿ 'ಯುಪಿಐ ನಗದು ಹಿಂಪಡೆಯುವಿಕೆ' ಆಯ್ಕೆ ಮಾಡಿಕೊಳ್ಳುವ ಗ್ರಾಹಕರು, ನಗದು ಮೊತ್ತ ನಮೂದಿಸಬೇಕು. ಇದಾದ ನಂತರದಲ್ಲಿ ಎಟಿಎಂ ಪರದೆಯ ಮೇಲೆ ಕ್ಯೂಆರ್ ಕೋಡ್ ಕಾಣಿಸಿಕೊಳ್ಳುತ್ತದೆ. ಅದನ್ನು ಯುಪಿಐ ಆ್ಯಪ್ ಬಳಸಿಸ್ಕ್ಯಾನ್ ಮಾಡಬೇಕು. ನಂತರದಲ್ಲಿ ಮೊಬೈಲ್‌ನಲ್ಲಿ ತಮ್ಮ ಯುಪಿಐ ಗುಪ್ತ ಸಂಖ್ಯೆಯನ್ನು ನಮೂದಿಸಿ ಹಣ ಪಡೆಯಬಹುದು.

ಒಂದೇ ಯುಪಿಐ ಐ.ಡಿ.ಗೆ ಹಲವು ಬ್ಯಾಂಕ್ ಖಾತೆಗಳನ್ನು ಜೋಡಿಸಿದ್ದರೂ ನಿರ್ದಿಷ್ಟವಾಗಿ ಯಾವ ಖಾತೆಯಿಂದ ಹಣ ಪಡೆಯಬೇಕು ಎಂಬುದನ್ನು ಆಯ್ಕೆ ಮಾಡಲು ಸಾಧ್ಯವಿದೆ. ಒಂದು ಬಾರಿಗೆ ₹5 ಸಾವಿರದವರೆಗೆ ಹಣ ಪಡೆಯಬಹುದು. ಯುಪಿಐ ಮೂಲಕ ದಿನಕ್ಕೆ ಎರಡು ಬಾರಿ ಹಣ ಹಿಂಪಡೆಯಲು ಅವಕಾಶ ಇದೆ.

ಮುಂಬೈ ಧಾರಣೆ

ಶೇಂಗಾ

6-6-2023

ಜಾವಾ 70/80(ಹೊಸ)	11,250-11,300
ಜಾವಾ 80/90(ಹೊಸ)	10,850-10,900
ದಪ್ಪ ಮಧ್ಯಪ್ರದೇಶ(ಹೊಸ)	11,000-11,100
ದಪ್ಪ ಗುಜರಾತ್(ಹೊಸ)	12,100-12,200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1,590(1,590)
ಒಂದು ವಾರದ ಡೆಲಿವರಿ	1,585(1,585)
ಸೋಯಾ ಕಚ್ಚಾ	840(855))
ಪಾಮ್ ವಾರದ ಡೆಲಿವರಿ	826(840)
ಸೂರ್ಯಕಾಂತಿ ಎಣ್ಣೆ ಕಚ್ಚಾ	790(800)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
59,900(59,500)
ಬೆಳ್ಳಿ ಕೆ.ಜಿ 71,950 (71,500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ನಾರಾಯಣ ಸ್ವಾಮಿ, ರಾಜಾಜಿನಗರ, ಬೆಂಗಳೂರು

● **ಪ್ರಶ್ನೆ:** ನಾನು ಕೇಂದ್ರ ಸರ್ಕಾರದ ನಿವೃತ್ತ ನೌಕರ. ನನ್ನ ವಾರ್ಷಿಕ ಒಟ್ಟು ಆದಾಯ ಸುಮಾರು ₹8 ಲಕ್ಷ. ವರ್ಷಕ್ಕೆ ₹50 ಸಾವಿರ ತೆರಿಗೆ ಪಾವತಿಸುತ್ತೇನೆ. ನನ್ನ ಪ್ರಶ್ನೆ ಏನೆಂದರೆ, ಕಳೆದ ವರ್ಷ ನಾನು ಯುರೋಪ್ ಪ್ರವಾಸ ಮಾಡಿದಾಗ, ₹14,000 ಟಿಸಿಎಸ್ ಕಡಿತ ಮಾಡಿರುತ್ತಾರೆ. ಈ ಹಣವನ್ನು ಈ ವರ್ಷ ತೆರಿಗೆ ಪಾವತಿಸುವಾಗ ಮರಳಿ ಪಡೆಯುವುದು ಹೇಗೆ?

ಉತ್ತರ: ಕೇಂದ್ರ ಸರ್ಕಾರವು 2020ರ ಬಜೆಟ್‌ನಲ್ಲಿ ವಿದೇಶಿ ಪ್ಯಾಕೇಜ್ ಪ್ರವಾಸಗಳಿಗೆ ಸಂಬಂಧಿಸಿದ ತೆರಿಗೆ ನಿಯಮಗಳನ್ನು ಜಾರಿಗೊಳಿಸಿತು. ತೆರಿಗೆ ಸಂಗ್ರಹದ ವ್ಯಾಪ್ತಿಯನ್ನು ವಿಸ್ತರಿಸುವ ಉದ್ದೇಶವೂ ಇದರ ಪ್ರಮುಖ ಭಾಗವಾಗಿದೆ. ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 206ಸಿ(1ಜಿ) ಪ್ರಕಾರ, ಪ್ಯಾಕೇಜ್ ಪ್ರವಾಸ ಸೌಲಭ್ಯ ಪಡೆದು ವಿದೇಶ ಪ್ರಯಾಣ ಮಾಡುವ ವ್ಯಕ್ತಿ ತನ್ನ ಎಲ್ಲ ಪಾವತಿಗಳಿಗೆ ಹೆಚ್ಚುವರಿ ತೆರಿಗೆ ಕಟ್ಟಿ ಟಿಕೆಟ್ ಕಾಯ್ದಿರಿಸಬೇಕಾಗುತ್ತದೆ. ಪ್ಯಾನ್ ಉಳ್ಳವರು ಖರೀದಿಸುವ ಪ್ರವಾಸ ಪ್ಯಾಕೇಜ್‌ಗಳಿಗೆ ಶೇ 5ರಷ್ಟು ತೆರಿಗೆ ಪಾವತಿ ಅನ್ವಯವಾಗುತ್ತದೆ. ಪ್ಯಾನ್ ರಹಿತ ಪಾವತಿಗೆ ಶೇ 10ರಷ್ಟು ತೆರಿಗೆ ಅನ್ವಯ.

ಯಾವುದೇ ವ್ಯಕ್ತಿ ತನ್ನ ವಾರ್ಷಿಕ ತೆರಿಗೆ ವಿವರ ಭರ್ತಿ ಮಾಡುವ ಸಂದರ್ಭದಲ್ಲಿ ಈ ರೀತಿ ಮುಂಗಡವಾಗಿ ಪಾವತಿಸಿದ ತೆರಿಗೆಯನ್ನು ಒಟ್ಟಾರೆ ಮೊತ್ತದೊಡನೆ ವಜಾ ಮಾಡುವ ಅವಕಾಶವಿದೆ. ಆದರೆ, ನಿಮ್ಮ ಪ್ಯಾನ್ ಸಂಖ್ಯೆಯನ್ನು ಮೊದಲೇ ನೀಡಿ ಪ್ಯಾಕೇಜ್ ಪ್ರವಾಸ ನಿರ್ವಾಹಕರಲ್ಲಿ ನಿಮ್ಮ ಆದಾಯ ತೆರಿಗೆ ಖಾತೆಗೆ ಜಮಾ ಮಾಡಿರುವ ವಿಚಾರ ಖಾತರಿಪಡಿಸಿಕೊಳ್ಳಬೇಕು. ಅಥವಾ ನಿಮ್ಮ ಆದಾಯ ತೆರಿಗೆ ಜಮಾ ಖಾತೆಯಲ್ಲಿ (26 ಎ ಎಸ್) ಅದು ಬಂದಿರಬೇಕು. ಪ್ಯಾನ್ ಇಲ್ಲದೆ ನೀವು ತೆರಿಗೆ ಮೊತ್ತ ಪಾವತಿಸಿದ್ದರೆ, ಅಂತಹ ಹೆಚ್ಚುವರಿ ಪಾವತಿ ನಿಮಗೆ ಯಾವುದೇ ಬಗೆಯಲ್ಲಿ ಅಂತಿಮವಾಗಿ ವಜಾ ಮಾಡಲು ಲಭ್ಯವಿರುವುದಿಲ್ಲ.

ಇನ್ನೂ ಒಂದು ಮಹತ್ವದ ಅಂಶವೆಂದರೆ, ಮುಂದಿನ ಜುಲೈ 1ರಿಂದ ಅನ್ವಯವಾಗುವಂತೆ ಯಾವುದೇ ವಿದೇಶಿ ಪ್ರಯಾಣಕ್ಕೆ ಸಂಬಂಧಿಸಿ ಮಾಡುವ ಕಾಯ್ದಿರಿಸುವಿಕೆಗೆ ಶೇ 20ರಷ್ಟು ಟಿಸಿಎಸ್ ಅನ್ವಯ ಆಗಲಿದೆ. ಈ ಹಿಂದೆ ನೇರವಾಗಿ ಪ್ರಯಾಣಿಕರೇ ವಿಮಾನ ಟಿಕೆಟ್ ಕಾಯ್ದಿರಿಸಿದರೆ ಟಿಸಿಎಸ್ ಅನ್ವಯಿಸುತ್ತಿರಲಿಲ್ಲ. ಆದರೆ, ಈ ಬದಲಾವಣೆಯ ನಂತರ ವೈದ್ಯಕೀಯ ಹಾಗೂ ಶಿಕ್ಷಣಕ್ಕೆ ಸಂಬಂಧಿತ ಪ್ರಯಾಣ ಹೊರತುಪಡಿಸಿ ತೆರಿಗೆ ದರವೂ ವರ್ಧಿಸಿದೆ. ವಾರ್ಷಿಕವಾಗಿ ₹7 ಲಕ್ಷಕ್ಕೂ ಹೆಚ್ಚಿನ ಮೊತ್ತವನ್ನು ಕ್ರೆಡಿಟ್ ಕಾರ್ಡ್ ಮೂಲಕ ವಿದೇಶಿ ಹಣಕಾಸು ವ್ಯವಹಾರಗಳಿಗೆ ಬಳಸಿದರೆ ತೆರಿಗೆ ಅನ್ವಯ ಆಗುತ್ತದೆ. ಇದನ್ನು ಉದಾರ ವರ್ಗಾವಣೆ ಯೋಜನೆ (ಎಲ್‌ಆರ್‌ಎಸ್) ಅಡಿ ತರುವ ಮೂಲಕ ಮೇಲಿನ ತೆರಿಗೆ ಬದಲಾವಣೆ ಅನ್ವಯವಾಗುವಂತೆ ಮಾಡಲಾಗಿದೆ.

ತಿರುಮಲ ನಾಯ್ಕ, ಪುತ್ತೂರು

● **ಪ್ರಶ್ನೆ:** ನಾನು ಹಿರಿಯ ನಾಗರಿಕ. ವಯಸ್ಸು 66 ವರ್ಷ. ಆರ್ಥಿಕ ವರ್ಷ 2022-23ರಲ್ಲಿ ನನ್ನ ಒಟ್ಟು ಆದಾಯ ₹14.45 ಲಕ್ಷ. ಎಲ್‌ಐಸಿ, ಪಿಪಿಎಫ್ ಇತ್ಯಾದಿಯಲ್ಲಿ ಒಟ್ಟು ₹1.50 ಲಕ್ಷ ತೊಡಗಿಸಿದ್ದೇನೆ. ಬ್ಯಾಂಕ್ ಹಾಗೂ ಎಲ್‌ಐಸಿಯವರು ತೆರಿಗೆ ಕಡಿತ ಮಾಡಿದ್ದಾರೆ. ಆರ್ಥಿಕ ವರ್ಷ 2023-24ರಲ್ಲಿ ಯಾವ ತೆರಿಗೆ ಪದ್ಧತಿ ಅನುಸರಿಸಿದರೆ ಒಳ್ಳೆಯದು? ಕೇಂದ್ರ ಬಜೆಟ್‌ನ ಈ ಬದಲಾವಣೆ ಆರ್ಥಿಕ ವರ್ಷ 2023-24ಕ್ಕೆ (ಅಸೆಸ್ಮೆಂಟ್ ವರ್ಷ 2024-25) ಅನ್ವಯಿಸುತ್ತದೆಯೇ ಅಥವಾ ಆರ್ಥಿಕ ವರ್ಷ 2022-23ಕ್ಕೆ (ಅಸೆಸ್ಮೆಂಟ್ ವರ್ಷ 2023-24) ಅನ್ವಯಿಸುತ್ತದೆಯೇ? ಹೊಸ ತೆರಿಗೆ ಪದ್ಧತಿಯ ಅಡಿ ₹52,500 ನಿಗದಿತ ಕಡಿತ ಇದೆ ಎಂದು ತಿಳಿದಿದ್ದೇನೆ. ಇದು ಯಾವುದು? ವೇತನದಾರರನ್ನು ಹೊರತುಪಡಿಸಿ ಇತರ ತೆರಿಗೆದಾರರೂ ಹೊಸ ಯೋಜನೆಯನ್ನು ಅನುಸರಿಸಿದರೆ ಆ ಪದ್ಧತಿಯನ್ನು ಮುಂದಿನ ವರ್ಷಗಳಲ್ಲಿ ಅನುಸರಿಸಬೇಕೇ?

ಉತ್ತರ: ಹೊಸ ತೆರಿಗೆ ಪದ್ಧತಿಯ ಅಡಿ ನಿಗದಿತ ಕಡಿತವನ್ನು (ಸ್ಟ್ಯಾಂಡರ್ಡ್ ಡಿಡಕ್ಷನ್) ಈ ಬಾರಿಯ ಬಜೆಟ್‌ನಲ್ಲಿ ಘೋಷಿಸಲಾಗಿದೆ. ಹೀಗಾಗಿ ಆರ್ಥಿಕ ವರ್ಷ 2023-24ರಿಂದ ಅನ್ವಯಿಸುವಂತೆ ಇದರ ಪ್ರಯೋಜನ ಸಿಗಲಿದೆ. ಇದು ಆದಾಯ ತೆರಿಗೆಯ ಸೆಕ್ಷನ್ 16 ಅಡಿ ₹50,000 ಮಾತ್ರ. ಇದು ವೇತನದಾರರಿಗೆ ಹಾಗೂ ಪಿಂಚಣಿ ಪಡೆಯುವ ನಿವೃತ್ತ ನೌಕರರಿಗೆ ಮಾತ್ರ ಸಿಗುತ್ತದೆ. ಈ ಬದಲಾವಣೆ ಹೊರತುಪಡಿಸಿದರೆ, ಇನ್ಯಾವುದೇ ತೆರಿಗೆ ವಿನಾಯಿತಿಗಳು ಹೊಸ ತೆರಿಗೆ ಪದ್ಧತಿಯ ಅಡಿ ಹೂಡಿಕೆಗೆ ಸಂಬಂಧಿಸಿದಂತೆ ಇರುವುದಿಲ್ಲ.

ಒಂದು ವೇಳೆ ಹೊಸ ತೆರಿಗೆ ಪದ್ಧತಿಯನ್ನು ನೀವು ಅನುಸರಿಸಿದರೆ, ಮುಂದಿನ ವರ್ಷದಲ್ಲಿ ನಿಮಗೆ ಲಾಭದಾಯಕವಾದ ತೆರಿಗೆ ಪದ್ಧತಿಯನ್ನು ಆಯ್ಕೆ ಮಾಡುವ ಅವಕಾಶವಿದೆ. ಆದರೆ ನೀವು ಯಾವುದೇ ವ್ಯವಹಾರದಲ್ಲಿ ಆದಾಯ ಹೊಂದಿ, ಆ ಸಂದರ್ಭದಲ್ಲಿ ಹೊಸ ತೆರಿಗೆ ದರದ ಲಾಭ ಪಡೆಯುವ ಉದ್ದೇಶದಿಂದ ಅದನ್ನು ಆಯ್ಕೆ ಮಾಡಿದ್ದರೆ, ಪ್ರತಿ ವರ್ಷ ತೆರಿಗೆ ಲಾಭಕ್ಕೋಸ್ಕರ ಯೋಜನೆ ಬದಲಾವಣೆ ಮಾಡಲು ಅನುಮತಿ ಇಲ್ಲ. ಜೀವಿತಾವಧಿಯಲ್ಲಿ ಒಮ್ಮೆ ಬದಲಾವಣೆ ಮಾಡಿಕೊಳ್ಳುವ ಅವಕಾಶವಿದೆ.

ನಿಮ್ಮ ಆದಾಯದ ಮಾಹಿತಿಯಂತೆ, ನೀವು ವ್ಯವಹಾರದಲ್ಲಿರುವವರೇ ಅಥವಾ ನಿವೃತ್ತಿ ಹೊಂದಿ ಪಿಂಚಣಿ ಪಡೆಯುವವರೇ ಎಂಬುದು ಸ್ಪಷ್ಟವಿಲ್ಲ. ನೀವು ಪಿಂಚಣಿ ಹಾಗೂ ಇತರ ಆದಾಯ ಗಳಿಸುವವರೆಂದು ಊಹಿಸಿ ಹೇಳುವುದಾದರೆ, ನಿಮಗೆ ಹೊಸ ತೆರಿಗೆ ಪದ್ಧತಿಯೇ ಲಾಭದಾಯಕ. ಹಳೆಯ ತೆರಿಗೆ ಪದ್ಧತಿಗೆ ತುಲನೆ ಮಾಡಿದಾಗ ಇದು ಸುಮಾರು ₹56 ಸಾವಿರದ ಅಂದಾಜು ತೆರಿಗೆಯನ್ನು ತಗ್ಗಿಸುತ್ತದೆ. ವ್ಯವಹಾರದಲ್ಲಿ ಇರುವವರಾದರೆ, ಮೇಲೆ ನೀಡಿರುವ ಎರಡೂ ಮಾಹಿತಿಗಳನ್ನು ಪರಿಗಣಿಸಿ. ಅದಕ್ಕೆ ಸಂಬಂಧಿತ ಲೆಕ್ಕಾಚಾರದಂತೆ ಪ್ರತ್ಯೇಕವಾಗಿ ತೆರಿಗೆ ಲೆಕ್ಕ ಹಾಕಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001 ಇ–ಮೇಲ್: businessdesk@prajavani.co.in

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	300-350
ನಡುಗೋಲು	450-500
ರಾಶಿ	500-550
ರಾಶಿ ಉತ್ತಮ	750-800
ಜರಡಿ	1000 - 1050
ಹೆರಕಿದ್ದು	1,200-1,300
ಹಸಿರು ಸಾಧಾರಣ	800-900
ಹಸಿರು ಉತ್ತಮ	1,000-1,100
ಹಸಿರು ಅತಿ ಉತ್ತಮ	1,600-1,650

ಅಡಿಕೆ
ಬಂಟ್ವಾಳ

ಕೋಕ	12,500-25,000
ಹೊಸತು	27,500-40,500
ಹಳತು	48,000-53,000

ಕಾರ್ಕಳ

ಹೊಸತು	30,000-40,500
ಹಳತು	40,000-53,000

ಸಾಗರ

ಬಿಳಿಗೋಟು	25,212-31,700
ಚಾಲಿ	36,049-36,589
ಕೋಕ	30,989-34,200
ಕೆಂಪುಗೋಟು	31,699-34,899
ರಾಶಿ	43,210-49,179
ಸಿಪ್ಪೆಗೋಟು	20,215-21,499

ಶಿವಮೊಗ್ಗ

ಬೆಟ್ಟೆ	44,000-53,509
ಗೊರಬಲು	22,000-37,069
ರಾಶಿ	35,299-50,109
ಸರಕು	41,000-83,430

ಸಿದ್ದಾಪುರ

ಬಿಳಿಗೋಟು	29,000-33,099
ಚಾಲಿ	35,844-37,811
ಕೋಕ	27,699-32,799
ಹಳೆಚಾಲಿ	35,589-37,339
ಕೆಂಪುಗೋಟು	30,689-34,089
ರಾಶಿ	43,609-48,309
ತಟ್ಟಿಬೆಟ್ಟೆ	41,919-41,919

ಶಿರಸಿ

ಬೆಟ್ಟೆ	35,109-44,899
ಬಿಳಿಗೋಟು	25,369-33,299
ಚಾಲಿ	35,151-38,099
ಕೆಂಪುಗೋಟು	23,801-37,301
ರಾಶಿ	42,099-47,799

ಯಲ್ಲಾಪುರ

ಆಪಿ	52,369-54,379
ಬಿಳಿಗೋಟು	28,399-34,499
ಚಾಲಿ	34,712-38,888
ಕೋಕ	16,170-32,699
ಕೆಂಪುಗೋಟು	28,899-36,711
ರಾಶಿ	43,000-52,209
ತಟ್ಟಿಬೆಟ್ಟೆ	40,090-47,209

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15,400	15,250	15,100	183.10ಸೆಂಟ್ಸ್
ಎಸಿ	7,980	8,000	7,650	
ಆರ್‌ಪಿ	10,600	10,850	10675	ಲಂಡನ್
ಆರ್‌ಸಿ	6,050	240	5900	2607ಡಾಲರ್ಸ್

ಸರ್ವೊ ಹೊಸ ಎಂಜಿನ್ ಆಯಿಲ್

ಬೆಂಗಳೂರು: ಸರ್ವೊ ಬ್ರ್ಯಾಂಡ್ ರಾಯಭಾರಿ, ನಟ ಜಾನ್ ಅಬ್ರಹಾಂ ಅವರು ದ್ವಿಚಕ್ರ ವಾಹನಗಳಿಗೆಂದು ಸಿದ್ಧಪಡಿಸಿರುವ 4ಟಿ ಎಂಜಿನ್ ಆಯಿಲ್ 'ಸರ್ವೊ ಹೈಪರ್‌ಸ್ಪೋರ್ಟ್ ಎಫ್5'ಅನ್ನು ಬಿಡುಗಡೆ ಮಾಡಿದರು. ಪ್ರೀಮಿಯಂ ಬಳಕೆಯ 'ಸರ್ವೊ ಗ್ರೀಸ್ ಮಿರಾಕಲ್' ಎಂಬ ಹೊಸ ಗ್ರೀಸ್‌ಅನ್ನು ಕೂಡ ಅವರು ಬಿಡುಗಡೆ ಮಾಡಿದರು. ಇಂಡಿಯನ್ ಆಯಿಲ್ ಕಂಪನಿಯ ಅಧ್ಯಕ್ಷ ಎಸ್.ಎಂ. ವೈದ್ಯ ಹಾಗೂ ಕಂಪನಿಯ ಹಿರಿಯ ಅಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು ಎಂದು ಪ್ರಕಟಣೆ ತಿಳಿಸಿದೆ.

ರಷ್ಯಾದಿಂದ ಅಣೆಕಟ್ಟು ಧ್ವಂಸ: ಉಕ್ರೇನ್ ಆರೋಪ

ಕೀವ್ (ಎಪಿ): ದೇಶದ ದಕ್ಷಿಣ ಭಾಗದ ಕೆರ್ಸಾನ್ ಬಳಿ ಇರುವ ಅಣೆಕಟ್ಟು ಹಾಗೂ ಜಲವಿದ್ಯುತ್ ಉತ್ಪಾದನಾ ಕೇಂದ್ರವನ್ನು ರಷ್ಯಾ ಪಡೆಗಳು ಸ್ಫೋಟಿಸಿವೆ ಎಂದು ಉಕ್ರೇನ್ ಮಂಗಳವಾರ ಆರೋಪಿಸಿದೆ.

'ಹಾನಿಗೊಳಗಾಗಿರುವ ಅಣೆಕಟ್ಟೆಯಿಂದ ಭಾರಿ ಪ್ರಮಾಣದ ನೀರು ಹೊರ ಬರುತ್ತಿದ್ದು, ಭಾರಿ ಪ್ರವಾಹ ಉಂಟಾಗುವ ಅಪಾಯ ಇದೆ' ಎಂದು ಉಕ್ರೇನ್ ಅಧಿಕಾರಿಗಳು ಆತಂಕ ವ್ಯಕ್ತಪಡಿಸಿದ್ದಾರೆ. ಅಣೆಕಟ್ಟೆಯ ಕೆಳಗಿನ ಪ್ರದೇಶದಲ್ಲಿರುವವರು ಸುರಕ್ಷಿತ ಸ್ಥಳಕ್ಕೆ ತೆರಳುವಂತೆ ಎರಡೂ ದೇಶಗಳ ಅಧಿಕಾರಿಗಳು ಜನರಿಗೆ ಸೂಚನೆ ನೀಡಿದ್ದಾರೆ.

ದ್ರೌಪದಿ ಮುರ್ಮುಗೆ ಸುರಿನಾಮ್‌ನ ನಾಗರಿಕ ಪ್ರಶಸ್ತಿ

ಪರಮರಿಬೊ(ಪಿಟಿಐ): ದಕ್ಷಿಣ ಅಮೆರಿಕದ ಚಿಕ್ಕರಾಷ್ಟ್ರ ಸುರಿನಾಮ್ ತನ್ನ ನೆಲದ ಅತ್ಯುನ್ನತ ನಾಗರಿಕ ಪ್ರಶಸ್ತಿಯನ್ನು ಭಾರತದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ನೀಡಿ ಗೌರವಿಸಿದೆ.

ಮುರ್ಮು ಅವರಿಗೆ, ಸುರಿನಾಮ್‌ನ ಅಧ್ಯಕ್ಷ ಚಂದ್ರಿಕಪರ್ಸಾದ್ ಸಂತೊಖಿ, ಅರಮನೆಯಲ್ಲಿ 'ಗ್ರ್ಯಾಂಡ್ ಆರ್ಡರ್ ಆಫ್ ದಿ ಚೈನ್ ಆಫ್ ದಿ ಯೆಲ್ಲೊ ಸ್ಟಾರ್' ಪ್ರಶಸ್ತಿ ನೀಡಿ ಗೌರವಿಸಿದರು.

'ಇದು ನನಗೆ ಸಂದ ಗೌರವವಲ್ಲ. 140 ಕೋಟಿ ಭಾರತೀಯರಿಗೆ ಸಂದ ಗೌರವ. ಎರಡೂ ರಾಷ್ಟ್ರಗಳ ನಡುವಿನ ದ್ವಿಪಕ್ಷೀಯ ಹಾಗೂ ಸಹೋದರತ್ವದ ಸಂಬಂಧ ಇದರಿಂದ ಮತ್ತಷ್ಟು ಗಾಢವಾಗಲಿದೆ' ಎಂದು ಮುರ್ಮು ಪ್ರತಿಕ್ರಿಯಿಸಿದ್ದಾರೆ.

'ಭಾರತ ಪ್ರಖರ ಪ್ರಜಾಪ್ರಭುತ್ವ ರಾಷ್ಟ್ರ'

ವಾಷಿಂಗ್ಟನ್ (ಪಿಟಿಐ): ಭಾರತದ ಪ್ರಜಾಪ್ರಭುತ್ವವು ಅತ್ಯಂತ ಪ್ರಖರವಾದುದು, ಯಾರು ಬೇಕಾದರೂ ದೆಹಲಿಗೆ ಹೋಗಿ ಇದನ್ನು ಖಾತ್ರಿಪಡಿಸಿಕೊಳ್ಳಬಹುದು ಎಂದು ಶ್ವೇತಭವನ ಮಂಗಳವಾರ ಹೇಳಿದೆ.

'ಅತ್ಯಂತ ಚಲನಶೀಲ ಪ್ರಜಾಪ್ರಭುತ್ವ ವ್ಯವಸ್ಥೆ ಹೊಂದಿರುವ ಭಾರತವು ಹಲವು ಹಂತಗಳಲ್ಲಿ ಅಮೆರಿಕಕ್ಕೆ ಪ್ರಮುಖ ಪಾಲುದಾರ ರಾಷ್ಟ್ರವಾಗಿದೆ. ಪ್ರಧಾನಿ ಮೋದಿ ಅವರ ಭೇಟಿಯ ವೇಳೆ ಉಭಯ ರಾಷ್ಟ್ರಗಳ ಪಾಲುದಾರಿಕೆ ಮತ್ತು ಸ್ನೇಹವನ್ನು ಮತ್ತಷ್ಟು ನಿಕಟವಾಗಿಸಲು ಅಧ್ಯಕ್ಷ ಜೋ ಬೈಡನ್ ತುಂಬಾ ಉತ್ಸುಕರಾಗಿದ್ದಾರೆ' ಎಂದು ಅಮೆರಿಕದ ರಾಷ್ಟ್ರೀಯ ಭದ್ರತಾ ಮಂಡಳಿಯ ಸಮನ್ವಯಕಾರ (ಕಾರ್ಯತಂತ್ರ ಸಂವಹನ) ಜಾನ್ ಕಿರ್ಬಿ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಈ ತಿಂಗಳ ಕೊನೆಯಲ್ಲಿ ಅಮೆರಿಕಕ್ಕೆ ಭೇಟಿ ನೀಡಲಿದ್ದಾರೆ. ಇದರ ಬೆನ್ನಲ್ಲೇ ಶ್ವೇತಭವನದಿಂದ ಭಾರತದ ಪ್ರಜಾಪ್ರಭುತ್ವದ ಬಗ್ಗೆ ಮೆಚ್ಚುಗೆಯ ಹೇಳಿಕೆ ಹೊರಬಿದ್ದಿದೆ.

ಎಫ್‌ಐಆರ್ ದಾಖಲು ● ಬಹನಾಗಾ ರೈಲು ನಿಲ್ದಾಣಕ್ಕೆ ಅಧಿಕಾರಿಗಳ ಭೇಟಿ, ಮಾಹಿತಿ ಸಂಗ್ರಹ

ರೈಲು ಅಪಘಾತ: ಸಿಬಿಐ ತನಿಖೆ ಶುರು

ಪ್ರಜಾವಾಣಿ ವಾರ್ತೆ/ಪಿಟಿಐ



ರೈಲು ಅಪಘಾತ ಕುರಿತು ತನಿಖೆ ಆರಂಭಿಸಿರುವ ಸಿಬಿಐ ಅಧಿಕಾರಿಗಳು ಒಡಿಶಾದ ಬಾಲೇಶ್ವರ ಜಿಲ್ಲೆಯ ಬಹನಾಗಾ ರೈಲು ನಿಲ್ದಾಣಕ್ಕೆ ಮಂಗಳವಾರ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದರು –ಪಿಟಿಐ ಚಿತ್ರ

ನವದೆಹಲಿ: ಒಡಿಶಾದ ಬಾಲೇಶ್ವರ ಜಿಲ್ಲೆಯಲ್ಲಿ ಸಂಭವಿಸಿದ ರೈಲುಗಳ ಅಪಘಾತ ಕುರಿತು ಸಿಬಿಐ ಮಂಗಳವಾರ ಎಫ್‌ಐಆರ್ ದಾಖಲಿಸಿದ ಬೆನ್ನಲ್ಲೇ, ತನಿಖೆ ಆರಂಭಿಸಿದೆ.

'ಮುಂದೆ ಇದ್ದ ರೈಲಿಗೆ ಮತ್ತೊಂದು ರೈಲು ಡಿಕ್ಕಿ ಹೊಡೆದ ಕಾರಣ ಹಲವು ಪ್ರಯಾಣಿಕರಿಗೆ ಗಾಯಗಳಾಗಿವೆ. ಮೇಲೆ ಹಾದುಹೋಗಿರುವ ವಿದ್ಯುತ್ ಮಾರ್ಗದ ಸಂಪರ್ಕದಿಂದಾಗಿ ವಿದ್ಯುದಾಘಾತ ಸಂಭವಿಸಿದೆ. ಈ ಎರಡು ಕಾರಣಗಳಿಂದಾಗಿ ಭಾರಿ ಸಂಖ್ಯೆಯಲ್ಲಿ ಸಾವುಗಳು ಸಂಭವಿಸಿವೆ' ಎಂದು ಎಫ್‌ಐಆರ್‌ನಲ್ಲಿ ವಿವರಿಸಲಾಗಿದೆ.

ಸಿಬಿಐನ ಜಂಟಿ ನಿರ್ದೇಶಕ (ವಿಶೇಷ ಕ್ರೈಂ ವಿಭಾಗ) ವಿಪ್ಲವಕುಮಾರ್ ಚೌಧರಿ ನೇತೃತ್ವದ ಆರು ಜನ ಅಧಿಕಾರಿಗಳಿದ್ದ ತಂಡ ಬಹನಾಗಾ ಬಜಾರ್ ರೈಲು ನಿಲ್ದಾಣಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿತು. ವಿಧಿವಿಜ್ಞಾನ ತಜ್ಞರು ಜತೆಗಿದ್ದರು.

'ಸಿಬಿಐ ಎಲ್ಲ ಆಯಾಮಗಳಲ್ಲಿ ತನಿಖೆ ನಡೆಸಲಿದ್ದು, ಎಲ್ಲ ಮಾಹಿತಿ ನೀಡಿ ತನಿಖೆಗೆ ಸಹಕರಿಸಲಾಗುವುದು' ಎಂದು ಆಗ್ನೇಯ ರೈಲ್ವೆಯ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಆದಿತ್ಯ ಚೌಧರಿ ಹೇಳಿದ್ದಾರೆ.

'ಎಲೆಕ್ಟ್ರಾನಿಕ್ ಇಂಟರ್‌ಲಾಕಿಂಗ್ ವ್ಯವಸ್ಥೆಯಲ್ಲಿ ಬದಲಾವಣೆಗಳನ್ನು ಮಾಡಿರುವ ಸಾಧ್ಯತೆಯ ಬಗ್ಗೆ ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ಈ ಅಪಘಾತದ ಹಿಂದೆ ವಿಧ್ವಂಸಕ ಕೃತ್ಯದ ಶಂಕೆಯನ್ನೂ ವ್ಯಕ್ತಪಡಿಸಲಾಗಿತ್ತು. ಹೀಗಾಗಿ, ಪ್ರಕರಣ ಕುರಿತು ಸಮಗ್ರ ತನಿಖೆಗಾಗಿ ಸಿಬಿಐ ರೈಲ್ವೆ ಸುರಕ್ಷಾ ಬಲ ಹಾಗೂ ವಿಧಿವಿಜ್ಞಾನ ತಜ್ಞರ ನೆರವು ಪಡೆಯಲಿದೆ' ಎಂದು ರೈಲ್ವೆ ಅಧಿಕಾರಿಗಳು ಹೇಳಿದ್ದಾರೆ.

ಡಿಎನ್‌ಎ ಮಾದರಿ ಸಂಗ್ರಹ ಆರಂಭ: 'ರೈಲು ದುರಂತದಲ್ಲಿ ಮಡಿದವರಲ್ಲಿ ನೂರಕ್ಕೂ ಹೆಚ್ಚು ಮೃತದೇಹಗಳ ಗುರುತು ಪತ್ತೆಗಾಗಿ ಭುವನೇಶ್ವರದ ಏಮ್ಸ್ ಡಿಎನ್‌ಎ ಮಾದರಿ ಸಂಗ್ರಹ ಕಾರ್ಯವನ್ನು ಪ್ರಾರಂಭಿಸಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಇದುವರೆಗೆ 10 ಜನರ ಡಿಎನ್‌ಎ ಮಾದರಿಯನ್ನು ಸಂಗ್ರಹಿಸಲಾಗಿದೆ. ಮೃತದೇಹಗಳನ್ನು ಐದು ಕಂಟೇನರ್‌ಗಳಲ್ಲಿ ಇರಿಸಲಾಗಿದೆ. ಅಲ್ಲಿ ಅವುಗಳನ್ನು ಹೆಚ್ಚು ಕಾಲ ಸಂರಕ್ಷಿಸಿ ಇಡಬಹುದಾಗಿದೆ' ಎಂದು ಭುವನೇಶ್ವರ ಏಮ್ಸ್‌ನ ಅಧಿಕಾರಿಯೊಬ್ಬರು ಹೇಳಿದ್ದಾರೆ.

'ಅಪಘಾತದ ಭೀಕರತೆಗೆ ಸಿಬ್ಬಂದಿ ನಲುಗಿದ್ದಾರೆ'

'ಒಡಿಶಾದಲ್ಲಿ ರೈಲು ಅಪಘಾತ ಸಂಭವಿಸಿದ ನಂತರ ರಕ್ಷಣಾ ಕಾರ್ಯದಲ್ಲಿ ತೊಡಗಿದ್ದ ನಮ್ಮ ಸಿಬ್ಬಂದಿ ಪೈಕಿ ಹಲವರು ತೀವ್ರ ಆಘಾತಕ್ಕೆ ಒಳಗಾಗಿದ್ದಾರೆ' ಎಂದು ಎನ್‌ಡಿಆರ್‌ಎಫ್ ಪ್ರಧಾನ ನಿರ್ದೇಶಕ ಅತುಲ್ ಕರ್ವಾಲ್ ಮಂಗಳವಾರ ಹೇಳಿದ್ದಾರೆ.

ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, 'ಅಪಘಾತ ಸ್ಥಳದಲ್ಲಿ ಚೆಲ್ಲಿದ್ದ ರಕ್ತ, ಗಾಯಗೊಂಡು ನರಳುತ್ತಿದ್ದವರನ್ನು ಕಂಡ ಒಬ್ಬ ಯೋಧ ಭ್ರಮಾಧೀನರಾಗಿದ್ದಾರೆ. ಅವರಿಗೆ ತಾವು ಕಾಣುತ್ತಿರುವುದೆಲ್ಲವೂ ರಕ್ತ ಎಂಬಂತೆ ಭಾಸವಾಗುತ್ತಿದೆ. ಮತ್ತೊಬ್ಬರಿಗೆ ಹಸಿವೆಯೇ ಇಂಗಿಹೋಗಿದೆ' ಎಂದರು.

> **ಇಂಟರ್‌ಲಾಕಿಂಗ್ ವ್ಯವಸ್ಥೆಯಲ್ಲಿನ ದೋಷ ಹಾಗೂ ಅಪಘಾತದ ಅಪಾಯದ ಬಗ್ಗೆ ಅಧಿಕಾರಿಗಳು ಫೆಬ್ರುವರಿಯಲ್ಲಿಯೇ ಎಚ್ಚರಿಸಿದ್ದರು. ಈ ಬಗ್ಗೆ ಕ್ರಮ ಕೈಗೊಳ್ಳದ ಕಾರಣ ಅವಘಡ ಸಂಭವಿಸಿದೆ**
> **ದಿಗ್ವಿಜಯ ಸಿಂಗ್,** ಕಾಂಗ್ರೆಸ್‌ನ ಹಿರಿಯ ನಾಯಕ

ತನಿಖೆ: ಭಿನ್ನಮತ ಸೂಚಿಸಿ ಪತ್ರ

ರೈಲು ದುರಂತ ಕುರಿತಂತೆ ತನಿಖೆಗೆ ರೈಲ್ವೆ ಸಚಿವಾಲಯ ರಚಿಸಿದ್ದ ಐವರು ಸದಸ್ಯರ ತನಿಖಾ ಸಮಿತಿಯ ಒಬ್ಬ ಸದಸ್ಯರು, ಕೆಲವೊಂದು ಅಂಶಗಳಿಗೆ ಭಿನ್ನಾಭಿಪ್ರಾಯ ಸೂಚಿಸಿ ಹೇಳಿಕೆ ದಾಖಲಿಸಿದ್ದಾರೆ. ಅಪಘಾತದ ಬಳಿಕ ಸಮಿತಿ ರಚಿಸಿದ್ದ ಸಚಿವಾಲಯ 24 ಗಂಟೆಯಲ್ಲಿ ವರದಿ ಸಲ್ಲಿಸಲು ಸೂಚಿಸಿತ್ತು. ಬಾಲೇಶ್ವರ ಸಿಗ್ನಲಿಂಗ್ ವಿಭಾಗದ ಹಿರಿಯ ಸೆಕ್ಷನ್ ಮ್ಯಾನೇಜರ್ ಆಗಿರುವ ಎ.ಕೆ.ಮಹಂತಾ ಭಿನ್ನಮತ ಸೂಚಿಸಿ ಹೇಳಿಕೆ ದಾಖಲಿಸಿದ್ದಾರೆ. ವರದಿಯ 17ಎ ಅಂಶವಾದ ಲೆವೆಲ್ ಕ್ರಾಸಿಂಗ್‌ಗೂ ಮೊದಲೇ ಗೇಟ್ 94ರ ರೈಲು ಹಳಿತಪ್ಪಿದೆ ಎಂಬುದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ನೆಟ್‌ವರ್ಕ್ ವ್ಯವಸ್ಥೆ ರೂಪಿಸಿ: ಬಾಹ್ಯಶಕ್ತಿಗಳ ಹಸ್ತಕ್ಷೇಪಕ್ಕೆ ಅವಕಾಶವಾಗದ ರೀತಿ ರೈಲ್ವೆ ನೆಟ್‌ವರ್ಕ್ ರೂಪಿಸಲು ಯೋಜನೆ ತಯಾರಿಸಬೇಕು ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಮಂಗಳವಾರ ಅಧಿಕಾರಿಗಳಿಗೆ ಸೂಚಿಸಿದರು.

'ವೈಫಲ್ಯ ಮರೆಮಾಚಲು ಸಿಬಿಐ ತನಿಖೆ'

ವೈಫಲ್ಯಗಳನ್ನು ಮುಚ್ಚಿಕೊಳ್ಳುವ ಸಲುವಾಗಿ ಕೇಂದ್ರ ಸರ್ಕಾರ ಒಡಿಶಾದಲ್ಲಿ ಸಂಭವಿಸಿದ ರೈಲು ಅಪಘಾತ ಕುರಿತು ಸಿಬಿಐ ತನಿಖೆಗೆ ಆದೇಶಿಸಿದೆ ಎಂದು ಕಾಂಗ್ರೆಸ್ ಮಂಗಳವಾರ ಟೀಕಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪಕ್ಷದ ವಕ್ತಾರೆ ಸುಪ್ರಿಯಾ ಶ್ರೀನಾತೆ, 'ಅಪಘಾತ ಸಂಭವಿಸಿ 96 ಗಂಟೆಗಳು ಕಳೆದಿದ್ದು, ಈ ವರೆಗೂ ಹೊಣೆಗಾರಿಕೆ ನಿಗದಿ ಮಾಡಿಲ್ಲ' ಎಂದು ಟೀಕಿಸಿದರು.

ಹೊಸದುರ್ಗ ಕ್ರಾಸ್‌ನಲ್ಲಿ ತಪ್ಪಿದ್ದ ರೈಲು ಅಪಘಾತ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಜಿಲ್ಲೆಯ ಹೊಸದುರ್ಗ ಕ್ರಾಸ್ ರೈಲು ನಿಲ್ದಾಣದ ಬಳಿ ಫೆಬ್ರುವರಿ 8ರಂದು ಸಂಪರ್ಕ ಕ್ರಾಂತಿ ರೈಲಿನ ಸಂಭವನೀಯ ಅಪಘಾತ ತಪ್ಪಿದ್ದು, ಒಡಿಶಾ ಘಟನೆಯ ಬಳಿಕ ಬಹಿರಂಗಗೊಂಡಿದೆ. ನೈರುತ್ಯ ರೈಲ್ವೆ ಮುಖ್ಯ ಕಾರ್ಯಾಚರಣೆ ಅಧಿಕಾರಿ ಹರಿಶಂಕರ್ ವರ್ಮ ಈ ಬಗ್ಗೆ ಉನ್ನತ ಅಧಿಕಾರಿಗಳಿಗೆ ಪತ್ರ ಬರೆದಿದ್ದಾರೆ.

ಬೆಂಗಳೂರಿನಿಂದ ಅರಸೀಕೆರೆ-ದಾವಣಗೆರೆ- ಹುಬ್ಬಳ್ಳಿ ಮಾರ್ಗವಾಗಿ ಸಂಪರ್ಕ ಕ್ರಾಂತಿ ರೈಲು ನವದೆಹಲಿಗೆ ಹೊರಟಿತ್ತು. ಬೀರೂರಿನಿಂದ ಬರುತ್ತಿದ್ದ ರೈಲು ಹೊಸದುರ್ಗ ಸಮೀಪದ ನಿಲ್ದಾಣದಲ್ಲಿ ಮಾರ್ಗ ಬದಲಿಸಿತ್ತು. ಗೂಡ್ಸ್ ರೈಲಿಗೆ ಡಿಕ್ಕಿ ಹೊಡೆಯುವ ಸಾಧ್ಯತೆ ಇತ್ತು. ಲೋಕೊಪೈಲಟ್ ಸಮಯಪ್ರಜ್ಞೆಯಿಂದಾಗಿ ಈ ಅಪಘಾತ ತಪ್ಪಿತ್ತು.

ಸಿಗ್ನಲ್ ನೀಡಿದ್ದ ಮಾರ್ಗದಲ್ಲಿ ಗೂಡ್ಸ್ ರೈಲು ಬರುತ್ತಿತ್ತು. ಇದನ್ನು ಗಮನಿಸಿದ ಲೋಕೊ ಪೈಲಟ್ ಮಾರ್ಗ ಬದಲಿಸಿದರು. ಲೋಕೋ ಪೈಲಟ್ ಮುನ್ನೆಚ್ಚರಿಕೆಯಿಂದಾಗಿ ಸಂಭವನೀಯ ಅಪಘಾತವೊಂದು ತಪ್ಪಿದೆ ಎಂಬುದಾಗಿ ಪತ್ರದಲ್ಲಿ ಉಲ್ಲೇಖಿಸಲಾಗಿದೆ. ಅಂದು ರೈಲಿನಲ್ಲಿ ಸಾವಿರಕ್ಕೂ ಅಧಿಕ ಪ್ರಯಾಣಿಕರಿದ್ದರು.

'ಅಂದು ಈ ಬೆಳವಣಿಗೆ ನಡೆದಿದ್ದು ಸತ್ಯ. ಆದರೆ, ಯಾವುದೇ ಅನಾಹುತ ಸಂಭವಿಸಿರಲಿಲ್ಲ. ಸಂವಹನ ಕೊರತೆಯಿಂದಾಗಿ ಅಚಾತುರ್ಯ ಆಗಿದ್ದರಿಂದ ಅಪಘಾತ ಸಂಭವಿಸುವ ಸಾಧ್ಯತೆ ಇತ್ತು ಎಂಬುದು ತಿಳಿದುಬಂದಿದೆ' ರೈಲ್ವೆ ಇಲಾಖೆಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

'ಸಮನ್ಸ್ ಜಾರಿ ಅಧಿಕಾರ ಯಾಂತ್ರಿಕ ಬಳಕೆ ಬೇಡ'

ಪ್ರಜಾವಾಣಿ ವಾರ್ತೆ

ನವದೆಹಲಿ: ಎಫ್‌ಐಆರ್ ಅಥವಾ ದೋಷಾರೋಪಪಟ್ಟಿಯಲ್ಲಿ ಹೆಸರು ಇಲ್ಲದ ವ್ಯಕ್ತಿಯನ್ನು ಆರೋಪಿಯನ್ನಾಗಿ ಪರಿಗಣಿಸಿ ಪ್ರಕರಣವೊಂದರ ವಿಚಾರಣೆ ನಡೆಯುತ್ತಿರುವಾಗ ಸಮನ್ಸ್ ನೀಡುವ ಅಧಿಕಾರವನ್ನು ನ್ಯಾಯಾಲಯಗಳು ಯಾಂತ್ರಿಕವಾಗಿ ಬಳಸಬಾರದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

'ಒಬ್ಬ ವ್ಯಕ್ತಿ ವಿರುದ್ಧದ ಸಾಕ್ಷ್ಯಗಳಿಂದಾಗಿ ಮೇಲ್ನೋಟಕ್ಕೆ ಆತ ಆರೋಪಿಯಾಗಿ ಕಂಡುಬರುತ್ತಾನೆ ಎಂಬುದಕ್ಕಿಂತ ಆತನ ವಿರುದ್ಧದ ಅಪಾದನೆಗಳು ಮನದಟ್ಟಾಗುವಂತಿರಬೇಕು. ಆಗ, ಆತನಿಗೆ ಸಮನ್ಸ್ ಜಾರಿ ಮಾಡಬೇಕು' ಎಂದು ನ್ಯಾಯಮೂರ್ತಿಗಳಾದ ದೀಪಂಕರ್ ದತ್ತಾ ಹಾಗೂ ಪಂಕಜ್ ಮಿತ್ತಲ್ ಅವರಿದ್ದ ನ್ಯಾಯಪೀಠ ಹೇಳಿದೆ.

'ಅಪರಾಧ ಕೃತ್ಯವೊಂದರಲ್ಲಿ ವ್ಯಕ್ತಿಯ ಪಾತ್ರವಿರುವುದನ್ನು ಆತನ ವಿರುದ್ಧದ ಸಾಕ್ಷ್ಯಗಳು ತೋರುತ್ತಿರಬೇಕು. ಆಗ, ಸಿಆರ್‌ಪಿಸಿ ಸೆಕ್ಷನ್ 319ರ ಅಡಿ ಅಧಿಕಾರ ಬಳಸಿ, ಆತನಿಗೆ ಸಮನ್ಸ್ ನೀಡಬಹುದು. ವ್ಯಕ್ತಿಯನ್ನು ಆರೋಪಿಯನ್ನಾಗಿ ಹೆಸರಿಸದಿದ್ದರೂ, ಇತರ ಆರೋಪಿಗಳ ಜತೆ ಆತನೂ ವಿಚಾರಣೆ ಎದುರಿಸಬೇಕು' ಎಂದಿದೆ.

ವಿಶೇಷ ನ್ಯಾಯಾಲಯವು ಎಸ್‌ಸಿ, ಎಸ್‌ಟಿ (ದೌರ್ಜನ್ಯ ತಡೆ) ಕಾಯ್ದೆಯಡಿ ಜಾರಿ ಮಾಡಿದ್ದ ಸಮನ್ಸ್ ರದ್ದತಿ ಕೋರಿ ಜಿತೇಂದ್ರನಾಥ ಮಿಶ್ರಾ ಎಂಬುವವರು ಸಲ್ಲಿಸಿದ್ದ ಅರ್ಜಿಯನ್ನು ಅಲಹಾಬಾದ್ ಹೈಕೋರ್ಟ್ ವಜಾಗೊಳಿಸಿತ್ತು. ಈ ಆದೇಶ ಪ್ರಶ್ನಿಸಿ ಮಿಶ್ರಾ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು. ವಿಚಾರಣೆ ನಡೆಸಿದ ನ್ಯಾಯಪೀಠ, ಅವರ ಮೇಲ್ಮನವಿ ವಜಾಗೊಳಿಸಿತು.

ಬ್ರಿಜ್ ಭೂಷಣ್ ಸಹವರ್ತಿ, ನೌಕರರ ಹೇಳಿಕೆ ದಾಖಲು

ಪ್ರಜಾವಾಣಿ ವಾರ್ತೆ

ನವದೆಹಲಿ: ಲೈಂಗಿಕ ಕಿರುಕುಳ ಆರೋಪಕ್ಕೆ ಸಂಬಂಧಿಸಿದಂತೆ, ಉತ್ತರ ಪ್ರದೇಶದ ಗೊಂಡಾದಲ್ಲಿ ಇರುವ ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್ ಭೂಷಣ್ ಸಿಂಗ್ ಅವರ ನಿವಾಸದಲ್ಲಿನ ನೌಕರರು ಮತ್ತು ಅವರ ನಿಕಟವರ್ತಿಗಳ ಹೇಳಿಕೆಗಳನ್ನು ದೆಹಲಿ ಪೊಲೀಸರು ಮಂಗಳವಾರ ದಾಖಲಿಸಿದರು.



ಬ್ರಿಜ್ ಭೂಷಣ್

ಸಿಂಗ್ ಅವರ ಕಾರಿನ ಚಾಲಕ ಸೇರಿದಂತೆ ಹಲವರ ಹೇಳಿಕೆಗಳನ್ನು ಪೊಲೀಸರ ತಂಡ ದಾಖಲಿಸಿದೆ. ಪ್ರಕರಣದ ತನಿಖೆಯ ಭಾಗವಾಗಿ ಈ ಪ್ರಕ್ರಿಯೆ ನಡೆಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಾಲಕಿಯ ಹೇಳಿಕೆ ಆಧರಿಸಿ ಬ್ರಿಜ್ ಭೂಷಣ್ ಸಿಂಗ್ ವಿರುದ್ಧ ಪೋಕ್ಸೊ ಕಾಯ್ದೆಯಡಿ ಎರಡು ಪ್ರಕರಣ ದಾಖಲಾಗಿದೆ. ಈಗ, ಸಿಆರ್‌ಪಿಸಿ ಕಾಯ್ದೆ ಸೆಕ್ಷನ್ 164ರ ಅನ್ವಯ ಬಾಲಕಿಯ ಹೇಳಿಕೆಯನ್ನು ಹೊಸದಾಗಿ ದಾಖಲಿಸಲಾಗಿದೆ ಎಂದು ತಿಳಿಸಿದರು.

ನಿಗದಿಯಂತೆ ಪ್ರತಿಭಟನೆ ಇಲ್ಲ: ಪ್ರತಿಭಟನನಿರತ ಕುಸ್ತಿಪಟುಗಳನ್ನು ಬೆಂಬಲಿಸಿ ಜೂನ್ 9ರಂದು ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ಹಿಂದೆ ಪ್ರಕಟಿಸಿದ್ದ ಖಾಪ್ ಪಂಚಾಯತ್, ಈಗ ಕುಸ್ತಿಪಟುಗಳು ಕರ್ತವ್ಯಕ್ಕೆ ಮರಳಿರುವ ಕಾರಣ ನಿಗದಿತ ದಿನದಂದು ಪ್ರತಿಭಟನೆ ನಡೆಸುತ್ತಿಲ್ಲ ಎಂದು ತಿಳಿಸಿದೆ. ಕುಸ್ತಿಪಟುಗಳು ಶನಿವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾಗಿ ಚರ್ಚಿಸಿದ್ದರು. 'ಸರ್ಕಾರದ ಜೊತೆ ಯಾವುದೇ 'ಹೊಂದಾಣಿಕೆ' ಆಗಿಲ್ಲ. 'ಪ್ರತಿಭಟನೆ ಸತ್ತಿಲ್ಲ, ಮುಂದುವರಿಯಲಿದೆ. ಹೇಗೆ ಮುಂದುವರಿಸಬೇಕು ಎಂಬ ಬಗ್ಗೆ ಚರ್ಚೆ ನಡೆದಿದೆ ಎಂದು ಪ್ರತಿಭಟನಕಾರರಲ್ಲಿ ಒಬ್ಬರಾದ ಬಜರಂಗ್ ಪೂನಿಯಾ ಹೇಳಿದ್ದಾರೆ.

'ಡಾರ್ಕ್‌ನೆಟ್' ಬಳಕೆ ● ಎಲ್‌ಎಸ್‌ಡಿ ಹಾಳೆಗಳ ಜಪ್ತಿ ● 6 ಜನರ ಬಂಧನ

ಡ್ರಗ್ಸ್ ಕಳ್ಳಸಾಗಣೆ ಭೇದಿಸಿದ ಎನ್‌ಸಿಬಿ

ನವದೆಹಲಿ (ಪಿಟಿಐ): 'ಡಾರ್ಕ್‌ನೆಟ್' ಬಳಸಿ ಡ್ರಗ್ಸ್ ಕಳ್ಳಸಾಗಣೆ ಮಾಡುತ್ತಿದ್ದ ಅಂತರರಾಷ್ಟ್ರೀಯ ಜಾಲವನ್ನು ಮಾದಕ ವಸ್ತು ನಿಯಂತ್ರಣ ಸಂಸ್ಥೆ (ಎನ್‌ಸಿಬಿ) ಭೇದಿಸಿದೆ. 'ಎಲ್‌ಎಸ್‌ಡಿ'ಯ 15 ಸಾವಿರ ಹಾಳೆಗಳನ್ನು ವಶಪಡಿಸಿಕೊಂಡು, ಆರು ಜನ ಆರೋಪಿಗಳನ್ನು ಬಂಧಿಸಿದೆ ಎಂದು ಅಧಿಕಾರಿಗಳು ಮಂಗಳವಾರ ಹೇಳಿದ್ದಾರೆ.

ಬಂಧಿತರಲ್ಲಿ ವಿದ್ಯಾರ್ಥಿಗಳು ಹಾಗೂ ಯುವಕರು ಇದ್ದಾರೆ. ಬಂಧಿತರ ಚಟುವಟಿಕೆಗಳ ಮೇಲೆ ಕಳೆದ ತಿಂಗಳಿನಿಂದಲೂ ಸಂಸ್ಥೆ ಕಣ್ಣಿಟ್ಟಿತ್ತು. 'ಡಬ್ಲ್ಯುಐಸಿಕೆಆರ್' ಮೆಸೆಂಜರ್ ಸೇವೆ ಹಾಗೂ ಕೆಲ ಆ್ಯಪ್‌ಗಳ ಮೂಲಕ ಬಂಧಿತರು ಈ ಡ್ರಗ್ಸ್‌ನ ಕಳ್ಳಸಾಗಣೆ ನಡೆಸುತ್ತಿದ್ದರು ಎಂದು ಎನ್‌ಸಿಬಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ವಶಪಡಿಸಿಕೊಂಡಿರುವ ಎಲ್‌ಎಸ್‌ಡಿ ಹಾಳೆಗಳ ಮೌಲ್ಯ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ₹ 10 ಕೋಟಿಗೂ ಹೆಚ್ಚು. ಎಲ್‌ಎಸ್‌ಡಿಯ ಒಂದು ಚಿಕ್ಕ ಹಾಳೆಯ ಬೆಲೆ ₹ 5 ಸಾವಿರದಿಂದ ₹ 7 ಸಾವಿರ ಇದೆ ಎಂದು ಹೇಳಿದ್ದಾರೆ.

ಶಾ ಅಭಿನಂದನೆ: ಭಾರಿ ಪ್ರಮಾಣದ ಡ್ರಗ್ಸ್ ಕಳ್ಳಸಾಗಣೆ ಪತ್ತೆ ಹಚ್ಚಿರುವ ಎನ್‌ಸಿಬಿಯನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅಭಿನಂದಿಸಿದ್ದಾರೆ.

'ಗುಪ್ತಚರ ಸಂಸ್ಥೆ ಹಾಗೂ ಸೈಬರ್ ಜಾಗೃತ ದಳದ ನಡುವಿನ ಅದ್ಭುತ ಸಮನ್ವಯಕ್ಕೆ ಸಾಕ್ಷಿಯಾಗಿರುವ ಈ ಕಾರ್ಯಾಚರಣೆ, ಡ್ರಗ್ಸ್ ಮುಕ್ತ ಭಾರತ ನಿರ್ಮಿಸಬೇಕು ಎಂಬ ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿಗೆ ಅನುಗುಣವಾಗಿದೆ' ಎಂದಿದ್ದಾರೆ.

ಪೋಲೆಂಡ್ ಮೂಲ: 'ಡಾರ್ಕ್‌ನೆಟ್ ಬಳಸಿ ನಡೆಸುತ್ತಿದ್ದ ವಹಿವಾಟಿಗೆ ಕ್ರಿಪ್ಟೊಕರೆನ್ಸಿ ಮೂಲಕ ಪಾವತಿ ಮಾಡಲಾಗುತ್ತಿತ್ತು. ಜಪ್ತಿ ಮಾಡಲಾದ ಎಲ್‌ಎಸ್‌ಡಿಯ ಮೂಲ ಪೋಲೆಂಡ್ ಮತ್ತು ನೆದರ್ಲೆಂಡ್ಸ್ ಎಂಬುದು ಗೊತ್ತಾಗಿದೆ. ಅಮೆರಿಕ ಹಾಗೂ ಭಾರತದ ಹಲವಾರು ರಾಜ್ಯಗಳಲ್ಲಿ ಈ ಜಾಲ ಸಕ್ರಿಯವಾಗಿದೆ' ಎಂದು ಎನ್‌ಸಿಬಿ ಉಪಪ್ರಧಾನ ನಿರ್ದೇಶಕ (ಉತ್ತರ ವಲಯ) ಜ್ಞಾನೇಶ್ವರ ಸಿಂಗ್ ಹೇಳಿದ್ದಾರೆ.

'ಈ ಡ್ರಗ್ಸ್‌ನ ಮಾರಾಟ, ಖರೀದಿ ಮಾಡುವವರು ಪರಸ್ಪರ ಭೇಟಿ ಮಾಡುವುದಿಲ್ಲ. ಪ್ರತಿಯೊಂದು ವ್ಯವಹಾರವೂ ಗುಪ್ತವಾಗಿಯೇ ನಡೆಯುತ್ತದೆ' ಎಂದಿದ್ದಾರೆ.

ಅಪಾಯಕಾರಿ 'ಎಲ್‌ಎಸ್‌ಡಿ'

'ಲಿಸರ್ಜಿಕ್ ಆ್ಯಸಿಡ್ ಡೈಈಥೈಲ್ ಅಮೈಡ್' ಅನ್ನು ಸಂಕ್ಷಿಪ್ತವಾಗಿ 'ಎಲ್‌ಎಸ್‌ಡಿ' ಎನ್ನಲಾಗುತ್ತದೆ. ಇದು ರಾಸಾಯನಿಕ ಆಧಾರಿತ ಡ್ರಗ್ ಆಗಿದ್ದು, ಇದರ ಸೇವನೆ ವ್ಯಕ್ತಿಯನ್ನು ಭ್ರಮಾಲೋಕದಲ್ಲಿ ತೇಲಾಡುವಂತೆ ಮಾಡುತ್ತದೆ.

ಕಳ್ಳಸಾಗಣೆ ನಡೆಸುವವರು 'ಎಲ್‌ಎಸ್‌ಡಿ'ಯನ್ನು ಆ್ಯಸಿಡ್ ಎಂದು ಕರೆಯುತ್ತಾರೆ. ಇದಕ್ಕೆ ವಾಸನೆ, ಬಣ್ಣ ಹಾಗೂ ರುಚಿ ಇಲ್ಲ. ಹಾಳೆಯ ಚೂರಿನಂತಿರುವ ಇದನ್ನು ನಾಲಿಗೆ ಮೇಲೆ ಇಟ್ಟುಕೊಂಡಾಕ್ಷಣ ಕರಗುತ್ತದೆ, ಮತ್ತೇರುವಂತೆ ಮಾಡುತ್ತದೆ. ಇನ್ನೂ ಕೆಲವರು ಇದನ್ನು ನುಂಗುತ್ತಾರೆ.



ವಶಪಡಿಸಿಕೊಂಡಿರುವ ಎಲ್‌ಎಸ್‌ಡಿ ಹಾಳೆಗಳು –ಪಿಟಿಐ ಚಿತ್ರ

ಸಂಕ್ಷಿಪ್ತ ಸುದ್ದಿ

ರಾಜ್ಯಪಾಲ–ಸ್ಟಾಲಿನ್ ಸರ್ಕಾರ ನಡುವೆ ಮತ್ತೆ ಜಟಾಪಟಿ

ಚೆನ್ನೈ: ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಇತ್ತೀಚೆಗೆ ಕೈಗೊಂಡಿದ್ದ ಸಿಂಗಪುರ ಮತ್ತು ಜಪಾನ್ ಪ್ರವಾಸವು ರಾಜ್ಯಪಾಲರು ಮತ್ತು ಸರ್ಕಾರದ ನಡುವಣ ಮತ್ತೊಂದು ಸುತ್ತಿನ ಜಟಾಪಟಿಗೆ ನಾಂದಿ ಹಾಡಿದೆ.

ಒಂಬತ್ತು ದಿನಗಳ ಕಾಲ ಎರಡೂ ದೇಶಗಳಿಗೆ ಪ್ರವಾಸ ಕೈಗೊಂಡಿದ್ದ ಸ್ಟಾಲಿನ್, ತಮಿಳುನಾಡಿನಲ್ಲಿ ₹ 3 ಸಾವಿರ ಕೋಟಿ ಮೊತ್ತದ ಬಂಡವಾಳ ಹೂಡಿಕೆಗೆ ಹಲವು ಕಂಪನಿಗಳ ಜೊತೆ ಸಹಿ ಹಾಕಿದ್ದರು.

ಊಟಿಯಲ್ಲಿ ಸೋಮವಾರ ನಡೆದ ವಿಶ್ವವಿದ್ಯಾಲಯಗಳ ಕುಲಪತಿಗಳ ಸಮಾವೇಶದಲ್ಲಿ ಮಾತನಾಡಿದ ರಾಜ್ಯಪಾಲ ಆರ್.ಎನ್. ರವಿ, 'ವಿದೇಶ ಪ್ರವಾಸ ಕೈಗೊಂಡ ತಕ್ಷಣ ಬಂಡವಾಳ ಹರಿದುಬರುವುದಿಲ್ಲ' ಎಂದು ಕುಟುಕಿದ್ದಾರೆ. ಇದಕ್ಕೆ ಸರ್ಕಾರ ಕೂಡ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದು, 'ನೀವು ರಾಜಕಾರಣಿಯಂತೆ ವರ್ತಿಸುವುದನ್ನು ಮೊದಲು ನಿಲ್ಲಿಸಿ' ಎಂದು ತಿರುಗೇಟು ನೀಡಿದೆ.

'ನಗ್ನತೆ ಮತ್ತು ಅಶ್ಲೀಲತೆ ಸಮಾನಾರ್ಥಕವಲ್ಲ'

ಕೊಚ್ಚಿ (ಪಿಟಿಐ): 'ತಮ್ಮ ದೇಹ ಮತ್ತು ಜೀವನಕ್ಕೆ ಸಂಬಂಧಿಸಿದಂತೆ ಸ್ವಂತ ನಿರ್ಧಾರ ಕೈಗೊಳ್ಳುವ ಮಹಿಳೆಯರು ಹೆಚ್ಚು ತಾರತಮ್ಯ ಮತ್ತು ದಬ್ಬಾಳಿಕೆಗೆ ಒಳಗಾಗುತ್ತಾರೆ' ಎಂದು ಕೇರಳ ಹೈಕೋರ್ಟ್ ಸೋಮವಾರ ಅಭಿಪ್ರಾಯಪಟ್ಟಿದೆ.

ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆಗೆ (ಪೋಕ್ಸೊ) ಸಂಬಂಧಿಸಿದ ಪ್ರಕರಣದಲ್ಲಿ ಮಹಿಳಾ ಹಕ್ಕುಗಳ ಕಾರ್ಯಕರ್ತೆ ರೆಹಾನಾ ಫಾತೀಮಾ ಅವರನ್ನು ಖುಲಾಸೆ ಮಾಡಿದ ನ್ಯಾಯಮೂರ್ತಿ ಕೌಸರ್ ಎಡಪ್ಪಗತ್ ಅವರು ಈ ಮೇಲಿನಂತೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

'ತಾಯಿಯು ತನ್ನ ದೇಹದ ಮೇಲ್ಭಾಗದಲ್ಲಿ ಸ್ವಂತ ಮಕ್ಕಳಿಂದ ಚಿತ್ರ ಬಿಡಿಸಿಕೊಂಡಿದ್ದರೆ ಅದರಲ್ಲಿ ಲೈಂಗಿಕ ಉದ್ದೇಶವಿದೆ ಎಂದು ಹೇಳಲಾಗದು. ತನ್ನ ದೇಹದ ಬಗ್ಗೆ ಸ್ವತಂತ್ರವಾದ ನಿರ್ಧಾರ ಕೈಗೊಳ್ಳಲು ಮಹಿಳೆಗೆ ಸಂವಿಧಾನದ ವಿಧಿ 21ರ ಅಡಿ ಹಕ್ಕು ನೀಡಲಾಗಿದೆ. ಅಂತೆಯೇ ನಗ್ನತೆ ಮತ್ತು ಅಶ್ಲೀಲತೆಯು ಯಾವಾಗಲೂ ಸಮಾನಾರ್ಥಕವಲ್ಲ. ನಗ್ನತೆಯನ್ನು ಮೂಲಭೂತವಾಗಿ ಅಶ್ಲೀಲ, ಅಸಭ್ಯ ಅಥವಾ ಅನೈತಿಕ ಎಂದು ವರ್ಗೀಕರಿಸುವುದು ತಪ್ಪು' ಎಂದೂ ಹೇಳಿದ್ದಾರೆ.

ರೆಹಾನಾ ಅವರು ತಮ್ಮ ಇಬ್ಬರು ಅಪ್ರಾಪ್ತ ವಯಸ್ಸಿನ ಮಕ್ಕಳಿಂದ ತಮ್ಮ ದೇಹದ ಮೇಲೆ ವರ್ಣಚಿತ್ರ ಬರೆಸಿಕೊಂಡಿದ್ದರು. ಇದಕ್ಕೆ ಸಂಬಂಧಿಸಿದಂತೆ ಅವರ ವಿರುದ್ಧ ಪೋಕ್ಸೊ, ಬಾಲನ್ಯಾಯ ಮತ್ತು ಮಾಹಿತಿ ತಂತ್ರಜ್ಞಾನ ಕಾಯ್ದೆಗಳ ಅಡಿ ವಿಚಾರಣಾ ನ್ಯಾಯಾಲಯದಲ್ಲಿ ದೂರು ದಾಖಲಾಗಿತ್ತು. ಪ್ರಕರಣವನ್ನು ಕೈಬಿಡಬೇಕು ಎಂದು ರೆಹಾನಾ ಮಾಡಿದ್ದ ಮನವಿಯನ್ನು ವಿಚಾರಣಾ ನ್ಯಾಯಾಲಯವು ತಿರಸ್ಕರಿಸಿತ್ತು.

ಪ್ರಧಾನಿ ಮೋದಿ ಕಲಿತ ಶಾಲೆ ಅಭಿವೃದ್ಧಿ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಪಡೆದ ಗುಜರಾತ್‌ನ ವಡ್‌ನಗರದ ಶಾಲೆಯನ್ನು ಪುನರ್‌ನಿರ್ಮಿಸಲಾಗಿದೆ. ಇದನ್ನು ಮಕ್ಕಳ ಸ್ಫೂರ್ತಿಯ ತಾಣವನ್ನಾಗಿಸಲು 'ಪ್ರೇರಣಾ' ಯೋಜನೆಯಡಿ ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಸರ್ಕಾರದ ಉನ್ನತ ಮೂಲಗಳು ಮಂಗಳವಾರ ತಿಳಿಸಿವೆ.

19ನೇ ಶತಮಾನದ ಉತ್ತರಾರ್ಧದಲ್ಲಿ ನಿರ್ಮಿಸಲಾದ ಶಾಲೆಯನ್ನು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯು ಹಳೆಯ ವಾಸ್ತುಶಿಲ್ಪ ಶೈಲಿಯಲ್ಲಿ ಅಭಿವೃದ್ಧಿಪಡಿಸಿದೆ.

'ದೇಶದ ಒಟ್ಟು 740 ಜಿಲ್ಲೆಗಳ ಶಾಲೆಗಳಲ್ಲಿನ ತಲಾ ಇಬ್ಬರು ಮಕ್ಕಳು ಮೋದಿ ಅವರು ಕಲಿತ ಈ ಶಾಲೆಯಲ್ಲಿ ಒಂದು ವಾರ ಕಳೆಯುವ ಯೋಜನೆಯು ಈ ವರ್ಷಾಂತ್ಯದಲ್ಲಿ ಜಾರಿಯಾಗುವ ಸಾಧ್ಯತೆ ಇದೆ' ಎಂದು ಮೂಲಗಳು ತಿಳಿಸಿವೆ.

ಬಂಡುಕೋರರ ದಾಳಿ ಯೋಧ ಸಾವು

ಇಂಫಾಲ್ (ಪಿಟಿಐ): ಮಣಿಪುರದ ಸಿರೌ ಪ್ರದೇಶದಲ್ಲಿ ಮಂಗಳವಾರ ನಸುಕಿನಲ್ಲಿ ಶಂಕಿತ ಕುಕಿ ಬಂಡುಕೋರರೊಂದಿಗಿನ ಗುಂಡಿನ ಚಕಮಕಿಯಲ್ಲಿ ಗಡಿ ಭದ್ರತಾ ಪಡೆಯ (ಬಿಎಸ್‌ಎಫ್) ಯೋಧರೊಬ್ಬರು ಹುತಾತ್ಮರಾಗಿದ್ದು, ಅಸ್ಸಾಂ ರೈಫಲ್‌ನ ಇಬ್ಬರು ಯೋಧರು ಗಾಯಗೊಂಡಿದ್ದಾರೆ.

ಕಾಕ್‌ಚಿಂಗ್ ಜಿಲ್ಲೆಯ ಸುಗನು ಪ್ರದೇಶದ ಸಿರೌನ ಶಾಲೆಯಲ್ಲಿ ಬಿಎಸ್‌ಎಫ್ ಯೋಧರು ಮತ್ತು ಶಂಕಿತ ಬಂಡುಕೋರರು ನಡುವೆ ಗುಂಡಿನ ಕಾಳಗ ನಡೆದಿದೆ.

'ರಥಯಾತ್ರೆ'ಗೆ ಅಖಿಲೇಶ್ ಚಾಲನೆ

ಲಖನೌ: ಉತ್ತರ ಪ್ರದೇಶದ ಬಹುತೇಕ ಎಲ್ಲಾ ಲೋಕಸಭಾ ಕ್ಷೇತ್ರಗಳಲ್ಲೂ ಸಂಚರಿಸುವ 'ಲೋಕ ಜಾಗರಣ ಯಾತ್ರೆ'ಗೆ ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಮಂಗಳವಾರ ಚಾಲನೆ ನೀಡಿದರು.

ಲಖಿಂಪುರ–ಖೀರಿ ಜಿಲ್ಲೆಯಿಂದ ಯಾತ್ರೆ ಆರಂಭಿಸಿದ ಅವರು, ವಿಶೇಷವಾಗಿ ಸಿದ್ಧಪಡಿಸಿದ 'ರಥ'ದ ಮೇಲೆ ನಿಂತು ಪಕ್ಷದ ಕಾರ್ಯಕರ್ತರು ಮತ್ತು ನಾಯಕರನ್ನು ಉದ್ದೇಶಿಸಿ ಮಾತನಾಡಿದರು. ಪಕ್ಷವು ರಾಜ್ಯದಲ್ಲಿ ಜಾತಿ ಆಧಾರಿತ ಸಮೀಕ್ಷೆ ನಡೆಸಲಿದೆ. ಇದು 2024ರ ಲೋಕಸಭಾ ಚುನಾವಣೆಯ ಪ್ರಮುಖ ಕಾರ್ಯಸೂಚಿ ಆಗಿರಲಿದೆ ಎಂದು ಹೇಳಿದರು.

'ಶ್ರೀಮಂತ ದೇಶಗಳ ಹೊಣೆ ಹೆಚ್ಚು'

ನವದೆಹಲಿ (ಪಿಟಿಐ): ಇಂಗಾಲದ ಡೈಆಕ್ಸೈಡ್ ಹೊರಸೂಸುವಿಕೆ ಪ್ರಮಾಣ ಹೆಚ್ಚುತ್ತಿದೆ. ಇದರಲ್ಲಿ ಅಮೆರಿಕ, ಜರ್ಮನಿಯಂತಹ ಭೂಗೋಳದ ಉತ್ತರ ಭಾಗದಲ್ಲಿರುವ ದೇಶಗಳ ಪಾಲು ಶೇ 90ರಷ್ಟಿದೆ. 2050ರ ವೇಳೆಗೆ ಹವಾಮಾನ ಬದಲಾವಣೆ ಗುರಿ ತಲುಪಲು ಭಾರತದಂತಹ ದೇಶಗಳಿಗೆ ಪರಿಹಾರ ರೂಪದಲ್ಲಿ ಈ ದೇಶಗಳು ₹ 1,403 ಲಕ್ಷ ಕೋಟಿಯನ್ನು ನೀಡಬೇಕಾಗುತ್ತದೆ ಎಂದು ಹೊಸ ಅಧ್ಯಯನ ಹೇಳಿದೆ.

ಸಿಂಗಪುರ ಓಪನ್: ಸಿಂಧು, ಪ್ರಣಯ್‌ಗೆ ಸೋಲು

ಕಿದಂಬಿ ಶ್ರೀಕಾಂತ್ ಮುನ್ನಡೆ



ಎರಡನೇ ಸುತ್ತು ಪ್ರವೇಶಿಸಿದ ಕಿದಂಬಿ ಶ್ರೀಕಾಂತ್

ಸಿಂಗಪುರ (ಪಿಟಿಐ): ಭಾರತದ ಕಿದಂಬಿ ಶ್ರೀಕಾಂತ್ ಅವರು ಸಿಂಗಪುರ ಓಪನ್ ಸೂಪರ್ 750 ಟೂರ್ನಿಯಲ್ಲಿ ಮಂಗಳವಾರ ಶುಭಾರಂಭ ಮಾಡಿದರು. ಆದರೆ ಪಿ.ವಿ. ಸಿಂಧು ಮತ್ತು ಎಚ್.ಎಸ್. ಪ್ರಣಯ್ ಅವರು ಮೊದಲ ಸುತ್ತಿನಲ್ಲೇ ಹೊರಬಿದ್ದರು.

2021ರ ವಿಶ್ವಚಾಂಪಿಯನ್‌ಷಿಪ್‌ನ ಬೆಳ್ಳಿ ವಿಜೇತ ಶ್ರೀಕಾಂತ್ ಪುರುಷರ ಸಿಂಗಲ್ಸ್ ಮೊದಲ ಸುತ್ತಿನಲ್ಲಿ ಥಾಯ್ಲೆಂಡ್‌ನ ಕೆಂಟಾಫೊನ್ ವಾಂಗ್ಚರೋನ್ ಅವರನ್ನು 21–15, 21–19 ರಿಂದ ಸೋಲಿಸಿದರು. ಅವರು ಚೀನಾ ತೈಪೆಯ ಚಿಯಾ ಹಾವೊ ಲಿ ಅವರನ್ನು ಎದುರಿಸಲಿದ್ದಾರೆ. ಹಾವೊ ಲಿ ಇನ್ನೊಂದು ಪಂದ್ಯದಲ್ಲಿ ಜಪಾನ್‌ನ ಕೆಂಟಾ ನಿಶಿಮೊಟೊ ಅವರನ್ನು ಹಿಮ್ಮೆಟ್ಟಿಸಿದರು.

ವಿಶ್ವದ ಅಗ್ರಮಾನ್ಯ ಆಟಗಾರ್ತಿ ಅಕಾನೆ ಯಮಗುಚಿ ಎದುರು ಮೊದಲ ಸುತ್ತಿನಲ್ಲಿ ಆಡಿದ ಸಿಂಧು ಸುಮಾರು ಒಂದು ಗಂಟೆಯ ಪಂದ್ಯದಲ್ಲಿ ಸೋಲುವ ಮೊದಲು ಹೋರಾಟ ತೋರಿದರು. ಕಳೆದ ಬಾರಿ ಈ ಟೂರ್ನಿಯಲ್ಲಿ ವಿಜೇತರಾಗಿದ್ದ ಸಿಂಧು 21–18, 19–21, 17–21 ರಲ್ಲಿ ಮಣಿದರು.

ಮಲೇಷ್ಯಾ ಮಾಸ್ಟರ್ಸ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದು ಇಲ್ಲಿಗೆ ಬಂದಿದ್ದ ಪ್ರಣಯ್, ಜಪಾನ್‌ನ ಯುವ ಆಟಗಾರ ಹಾಗೂ ಮೂರನೇ ಶ್ರೇಯಾಂಕದ ಕೊಡಾಯಿ ನರವೊಕಾ ಅವರಿಗೆ ಸಾಟಿಯಾಗಲಿಲ್ಲ. ನರವೊಕಾ 21–15, 21–19 ರಿಂದ ಗೆಲ್ಲಲು 56 ನಿಮಿಷ ತೆಗೆದುಕೊಂಡರು.

ಸೈನಾ ಮತ್ತು ಆಕರ್ಷಿ ಕಶ್ಯಪ್ ಕೂಡ ಮೊದಲ ಸುತ್ತನ್ನು ದಾಟಲು ವಿಫಲರಾದರು. ಲಂಡನ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಸೈನಾ 13–21, 15–21 ರಲ್ಲಿ ಮಾಜಿ ವಿಶ್ವ ಚಾಂಪಿಯನ್ ರಟ್ಚಾನೊಕ್ ಇಂಟಾನೊನ್ (ಥಾಯ್ಲೆಂಡ್) ಅವರೆದುರು ಪರಾಭವ ಕಂಡರು. ಥಾಯ್ಲೆಂಡ್‌ನ ಇನ್ನೋರ್ವ ಆಟಗಾರ್ತಿ ಸುಪನಿದಾ ಕಟೆಥಾಂಗ್ 21–17, 21–9 ರಿಂದ ಆಕರ್ಷಿ ಅವರನ್ನು ಸೋಲಿಸಿದರು.

ಮುನ್ನಡೆ: ಪುರುಷರ ಡಬಲ್ಸ್ ಜೋಡಿ ಎಂ.ಆರ್.ಅರ್ಜುನ್– ಧ್ರುವ ಕಪಿಲ್ ಮೊದಲ ಸುತ್ತಿನಲ್ಲಿ 21–16, 21–15 ರಿಂದ ಫ್ರಾನ್ಸ್‌ನ ಲುಕಾಸ್ ಕೊರ್ವಿ ಮತ್ತು ರೊನಾನ್ ಲಬರ್ ಅವರನ್ನು ಮಣಿಸಿತು.


ಹಾಕಿ: ಭಾರತ–ಕೊರಿಯಾ ಪಂದ್ಯ ಡ್ರಾ

ಕಾಕಾಮಿಗಾರ (ಜಪಾನ್), (ಪಿಟಿಐ): ಹಿನ್ನಡೆಯಿಂದ ಚೇತರಿಸಿಕೊಂಡ ಭಾರತ ತಂಡ, ಮಹಿಳಾ ಜೂನಿಯರ್ ಏಷ್ಯಾ ಕಪ್ ಹಾಕಿ ಟೂರ್ನಿಯಲ್ಲಿ ಮಂಗಳವಾರ ದಕ್ಷಿಣ ಕೊರಿಯಾ ತಂಡದ ಎದುರು 2–2 ಗೋಲುಗಳಿಂದ 'ಡ್ರಾ' ಮಾಡಿಕೊಳ್ಳುವಲ್ಲಿ ಯಶಸ್ವಿಯಾಯಿತು.

ದಕ್ಷಿಣ ಕೊರಿಯಾದ ಯೂಜಿನ್ ಲೀ (15ನೇ ನಿಮಿಷ) ಮತ್ತು ಜಿಯೊನ್ ಚೊಯಿ (30ನೇ) ಅವರು ಚೆಂಡನ್ನು ಗುರಿಮುಟ್ಟಿಸಿದರು. ಆದರೆ ವಿರಾಮದ ನಂತರ ದೀಪಿಕಾ ಸೊರೆಂಗ್ (43ನೇ) ಮತ್ತು ದೀಪಿಕಾ (54 ನೇ) ಅವರು ಗೋಲುಗಳನ್ನು ಗಳಿಸಿದ್ದರಿಂದ ಸ್ಕೋರ್ ಸಮನಾಯಿತು. ಭಾರತ ಈಗ 'ಎ' ಗುಂಪಿನಲ್ಲಿ ಅಗ್ರಸ್ಥಾನ ಕಾಪಾಡಿಕೊಂಡಿದೆ.

ಭಾರತ ತಂಡವು ತನ್ನ ಗುಂಪಿನ ಕೊನೆಯ ಪಂದ್ಯವನ್ನು ಗುರುವಾರ ಚೀನಾ ತೈಪೆ ತಂಡದ ಎದುರು ಆಡಲಿದೆ.

ಚುನಾವಣೆಗಿಂತ ಆಯ್ಕೆ ಟ್ರಯಲ್ಸ್‌ಗೆ ಆದ್ಯತೆ: ಉಷಾ



ಉಷಾ

ಸೋನೀಪತ್ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಚುನಾವಣೆಯ ವಿಳಂಬವನ್ನು ಸಮರ್ಥಿಸಿರುವ ಭಾರತ ಒಲಿಂಪಿಕ್ (ಐಒಎ) ಸಂಸ್ಥೆ ಅಧ್ಯಕ್ಷೆ ಪಿ.ಟಿ. ಉಷಾ ಅವರು, ಅದಕ್ಕಿಂತ ಹೆಚ್ಚಿನ ಆದ್ಯತೆಯನ್ನು ಜೂನಿಯರ್ ಕುಸ್ತಿಪಟುಗಳ ಆಯ್ಕೆ ಟ್ರಯಲ್ಸ್‌ಗೆ ನೀಡಬೇಕಾಗಿದೆ ಎಂದು ಮಂಗಳವಾರ ಹೇಳಿದ್ದಾರೆ.

ಕುಸ್ತಿ ಫೆಡರೇಷನ್ ದೈನಂದಿನ ವ್ಯವಹಾರಗಳನ್ನು ನೋಡಿಕೊಳ್ಳಲು ಐಒಎ ಏಪ್ರಿಲ್ 27ರಂದು ಮೂವರು ಸದಸ್ಯರ ಅಡ್‌ಹಾಕ್ ಸಮಿತಿಯ ಘೋಷಣೆ ಮಾಡಿತ್ತು. 45 ದಿನಗಳ ಒಳಗೆ ಫೆಡರೇಷನ್‌ಗೆ ಚುನಾವಣೆ ನಡೆಸುವುದಾಗಿಯೂ ಹೇಳಿತ್ತು. ಆದರೆ ಇದುವರೆಗೆ ಸಮಿತಿಗೆ ಮೂರನೇ ಸದಸ್ಯರ ನೇಮಕ ಆಗಿಲ್ಲ. ಈ ಸ್ಥಾನಕ್ಕೆ ಬರಲಿರುವ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಅವರು ಚುನಾವಣಾ ಪ್ರಕ್ರಿಯೆಗೆ ಚಾಲನೆ ನೀಡಬೇಕಾಗಿದೆ. ಐಒಎ ಹೇಳಿರುವ 45 ದಿನಗಳ ಗಡುವು ಜೂನ್ 17ಕ್ಕೆ ಅಂತ್ಯಗೊಳ್ಳಲಿದೆ.

ಸಮಿತಿಯ ಇತರ ಇಬ್ಬರು ಸದಸ್ಯರು– ಭೂಪೇಂದರ್ ಸಿಂಗ್ ಬಾಜ್ವಾ ಮತ್ತು ಸುಮಾ ಶಿರೂರು– ಅವರು ಮೇ 4ರಂದು ಅಧಿಕಾರ ವಹಿಸಿಕೊಂಡಿದ್ದಾರೆ. ಈ ಸಮಿತಿಯು, ಏಷ್ಯನ್ ಚಾಂಪಿಯನ್‌ಷಿಪ್‌ಗೆ 15 ಮತ್ತು 20 ವರ್ಷದೊಳಗಿನವರ ತಂಡದ ಆಯ್ಕೆಗಾಗಿ ನಡೆಸುತ್ತಿರುವ ಟ್ರಯಲ್ಸ್ ಉಸ್ತುವಾರಿ ವಹಿಸಿದೆ.

'ಕಿರಿಯ ಕುಸ್ತಿಪಟುಗಳ ಹಿತರಕ್ಷಣೆಯ ದೃಷ್ಟಿಯಿಂದ ನಾವು ಚುನಾವಣೆಯ ಬದಲು ಟ್ರಯಲ್ಸ್‌ಗೆ ಆದ್ಯತೆ ನೀಡಬೇಕಾಗಿದೆ' ಎಂದು ಉಷಾ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಅವರು ಟ್ರಯಲ್ಸ್ ನಡೆಯುತ್ತಿರುವ ಭಾರತ ಕ್ರೀಡಾ ಪ್ರಾಧಿಕಾರದ ಕೇಂದ್ರಕ್ಕೆ ಮಂಗಳವಾರ ಭೇಟಿ ನೀಡಿದರು.

ಅಡ್‌ಹಾಕ್ ಸಮಿತಿಗೆ ಮೂರನೇ ಸದಸ್ಯನ ಆಯ್ಕೆ ಹಾಗೂ ಫೆಡರೇಷನ್‌ಗೆ ಚುನಾವಣೆಯ ದಿನಾಂಕವನ್ನು ಶೀಘ್ರವೇ ಘೋಷಿಸಲಾಗುವುದು ಎಂದು ಉಷಾ ಹೇಳಿದರು.

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಇಂದಿನಿಂದ: ರೋಹಿತ್ ನಾಯಕತ್ವಕ್ಕೆ ಪ್ಯಾಟ್ ಕಮಿನ್ಸ್ ಬಳಗದ ಸವಾಲು

ಭಾರತಕ್ಕೆ ಪ್ರಶಸ್ತಿ ಬರ ನೀಗಿಸುವ 'ಟೆಸ್ಟ್'

ಲಂಡನ್ (ಪಿಟಿಐ): ಭಾರತ ಮತ್ತು ಆಸ್ಟ್ರೇಲಿಯಾ ಕ್ರಿಕೆಟ್ ತಂಡಗಳು ಇದೇ ಮೊದಲ ಬಾರಿಗೆ ತಟಸ್ಥ ತಾಣದಲ್ಲಿ ಟೆಸ್ಟ್ ಪಂದ್ಯ ಆಡಲಿವೆ.

ಬುಧವಾರ ಇಲ್ಲಿ ಆರಂಭವಾಗಲಿರುವ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ (ಡಬ್ಲ್ಯುಟಿಸಿ) ರೋಹಿತ್ ಶರ್ಮಾ ನಾಯಕತ್ವದ ಭಾರತ ಹಾಗೂ ವೇಗಿ ಪ್ಯಾಟ್ ಕಮಿನ್ಸ್ ನೇತೃತ್ವದ ಆಸ್ಟ್ರೇಲಿಯಾ ತಂಡಗಳು ಸಮಬಲದ ಹಣಾಹಣಿ ನಡೆಸುವ ನಿರೀಕ್ಷೆ ಇದೆ.

ಭಾರತವು ಕಳೆದ ಒಂದು ದಶಕದಿಂದ ಐಸಿಸಿ ಟ್ರೋಫಿ ಗೆಲುವಿನ ಬರ ಎದುರಿಸುತ್ತಿದೆ. 2013ರಲ್ಲಿ ಇಂಗ್ಲೆಂಡ್‌ನಲ್ಲಿ ಮಹೇಂದ್ರಸಿಂಗ್ ಧೋನಿ ಬಳಗವು ಚಾಂಪಿಯನ್ಸ್ ಟ್ರೋಫಿ ಗೆದ್ದಿತ್ತು. ಅದರ ನಂತರ ಮೂರು ಬಾರಿ ನಿಗದಿತ ಓವರ್‌ಗಳ ಮಾದರಿಯ ವಿಶ್ವಕಪ್ ಟೂರ್ನಿಗಳ ಫೈನಲ್‌ಗಳಲ್ಲಿ ಸೋತಿದೆ. ಇನ್ನೂ ನಾಲ್ಕು ಟೂರ್ನಿಗಳ ಸೆಮಿಫೈನಲ್‌ಗಳಲ್ಲಿ ಮಣಿದಿತ್ತು. 2021ರ ಟಿ20 ವಿಶ್ವಕಪ್ ಟೂರ್ನಿಯ ಪ್ರಾಥಮಿಕ ಸುತ್ತಿನಲ್ಲಿಯೇ ಹೊರಬಿದ್ದಿತ್ತು.

ಮೊದಲ ಡಬ್ಲ್ಯುಟಿಸಿ ಫೈನಲ್‌ನಲ್ಲಿ ವಿರಾಟ್ ಕೊಹ್ಲಿ ನಾಯಕತ್ವದ ಭಾರತ ತಂಡವು ಸೋತಿತ್ತು. ಈ ಬಾರಿ ರೋಹಿತ್ ನಾಯಕತ್ವದ 'ಟೆಸ್ಟ್' ಇದಾಗಲಿದೆ. ಈ ಬಾರಿಯ ಚಾಂಪಿಯನ್‌ಷಿಪ್‌ನಲ್ಲಿ ಆರು ಸರಣಿಗಳನ್ನು ಭಾರತ ಆಡಿದೆ. ಅದರಲ್ಲಿ ದಕ್ಷಿಣ ಆಫ್ರಿಕಾ ಎದುರು ಮಾತ್ರ ಸೋತಿತ್ತು. ಅದರ ನಂತರ ವಿರಾಟ್ ನಾಯಕತ್ವದಿಂದ ಕೆಳಗಿಳಿದಿದ್ದರು.

ಹೋದ ಬಾರಿಯ ಫೈನಲ್‌ನಲ್ಲಿ ಪರಿಸ್ಥಿತಿಗೆ ತಕ್ಕ ತಂಡವನ್ನು ಕಣಕ್ಕಿಳಿಸುವಲ್ಲಿ ಭಾರತವು ಎಡವಿತ್ತು. ನ್ಯೂಜಿಲೆಂಡ್ ಎದುರು ಸೌತಾಂಪ್ಟನ್‌ನಲ್ಲಿ ನಡೆದಿದ್ದ ಫೈನಲ್‌ನಲ್ಲಿ ಇಬ್ಬರು ಸ್ಪಿನ್ನರ್‌ಗಳೊಂದಿಗೆ ಕಣಕ್ಕಿಳಿದಿದ್ದು ಫಲ ನೀಡಿರಲಿಲ್ಲ.

ಓವಲ್ ಕ್ರೀಡಾಂಗಣಕ್ಕೆ ಸುದೀರ್ಘ ಇತಿಹಾಸವಿದೆ. 143 ವರ್ಷಗಳ ಹಿಂದೆ ಇಲ್ಲಿ ಮೊದಲ ಟೆಸ್ಟ್ ಪಂದ್ಯ ನಡೆದಿತ್ತು. ಇದೀಗ ಇಲ್ಲಿ ಬೇಸಿಗೆ ಆರಂಭವಾಗುತ್ತಿದೆ. ಪಿಚ್‌ಗಳು ಸತ್ವಯುತವಾಗಿ ಕಂಗೊಳಿಸುತ್ತಿವೆ. ಆದ್ದರಿಂದ ನಾಲ್ಕನೇ ವೇಗಿಯನ್ನು ಕಣಕ್ಕಿಳಿಸುವುದು ಒಳ್ಳೆಯ ನಿರ್ಧಾರ ಎಂಬ ವಿಶ್ಲೇಷಣೆಯಿದೆ.

ಬ್ಯಾಟಿಂಗ್ ವಿಭಾಗದಲ್ಲಿ ರಿಷಭ್ ಪಂತ್ ಗೈರುಹಾಜರಿ ಎದ್ದುಕಾಣುತ್ತಿದೆ. ವಿದೇಶಿ ಪಿಚ್‌ಗಳಲ್ಲಿ ಅವರು ಭಾರತ ತಂಡವನ್ನು ಹಲವು ಬಾರಿ ಸೋಲಿನಿಂದ ಪಾರು ಮಾಡಿದ್ದಾರೆ. ಅವರ ಬದಲಿಗೆ ಈಗ ವಿಕೆಟ್‌ಕೀಪಿಂಗ್ ಮತ್ತು ಮಧ್ಯಮ-ಕ್ರಮಾಂಕದ ಬ್ಯಾಟಿಂಗ್ ಹೊಣೆ ಕೆ.ಎಸ್. ಭರತ್ ಅಥವಾ ಇಶಾನ್ ಕಿಶನ್ ಅವರ ಹೆಗಲೇರುವ ಸಾಧ್ಯತೆ ಇದೆ.

ಇತ್ತೀಚೆಗೆ ಐಪಿಎಲ್‌ನಲ್ಲಿ ರನ್‌ಗಳ ಹೊಳೆ ಹರಿಸಿದ್ದ ಶುಭಮನ್ ಗಿಲ್, ವಿರಾಟ್ ಕೊಹ್ಲಿ ಹಾಗೂ ಟೆಸ್ಟ್ ಪರಿಣತ ಚೇತೇಶ್ವರ್ ಪೂಜಾರ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆಡುವ ನಿರೀಕ್ಷೆ ಇದೆ. ರೋಹಿತ್ ಲಯಕ್ಕೆ ಮರಳಿದರೆ ತಂಡದ ಬಲ ಹೆಚ್ಚುವುದು ಖಚಿತ. ಮಧ್ಯಮ ಕ್ರಮಾಂಕದಲ್ಲಿ ಅಜಿಂಕ್ಯ ರಹಾನೆ ಅವಕಾಶ ಗಿಟ್ಟಿಸುವ ಸಾಧ್ಯತೆ ಇದೆ. ಪ್ಯಾಟ್ ಕಮಿನ್ಸ್, ಮಿಚೆಲ್ ಸ್ಟಾರ್ಕ್, ಸ್ಕಾಟ್ ಬೊಲಾಂಡ್ ಹಾಗೂ ಸ್ಪಿನ್ನರ್ ನೇಥನ್ ಲಯನ್ ಅವರ ಬೌಲಿಂಗ್ ಎದುರಿಸುವ ಸವಾಲು ಅವರ ಮುಂದಿದೆ.

ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್, ಅನುಭವಿ ಉಮೇಶ್ ಯಾದವ್ ಹಾಗೂ ಆಲ್‌ರೌಂಡರ್ ಶಾರ್ದೂಲ್ ಠಾಕೂರ್ ಸಂಯೋಜನೆಯೊಂದಿಗೆ ತಂಡವು ಕಣಕ್ಕಿಳಿಯುವ ನಿರೀಕ್ಷೆ ಇದೆ. ಆಸ್ಟ್ರೇಲಿಯಾ ತಂಡಕ್ಕೆ ಉಸ್ಮಾನ್ ಖ್ವಾಜಾ, ಸ್ಟೀವ್ ಸ್ಮಿತ್, ಡೇವಿಡ್ ವಾರ್ನರ್ ಹಾಗೂ ಮಾರ್ನಸ್ ಲಾಬುಷೇನ್ ಬ್ಯಾಟಿಂಗ್ ಬಲವಿದೆ.

ಐಪಿಎಲ್ ಮುಗಿಸಿ ಬಂದಿರುವ ಭಾರತದ ಬಹುತೇಕ ಆಟಗಾರರಿಗೆ ಕೆಂಪು ಚೆಂಡಿನ ಆಟದಲ್ಲಿ ಸಾಮರ್ಥ್ಯ ತೋರುವ ಸವಾಲೂ ಇಲ್ಲಿದೆ.



ಐಸಿಸಿ ಟೆಸ್ಟ್ ಚಾಂಪಿಯನ್‌ಷಿಪ್ ರಾಜದಂಡದೊಂದಿಗೆ ಭಾರತ ತಂಡದ ನಾಯಕ ರೋಹಿತ್ ಶರ್ಮಾ ಹಾಗೂ ಆಸ್ಟ್ರೇಲಿಯಾ ತಂಡದ ನಾಯಕ ಪ್ಯಾಟ್ ಕಮಿನ್ಸ್ – ಚಿತ್ರ; ಬಿಸಿಸಿಐ ಡಾಟ್ ಟಿವಿ

ಡಬ್ಲ್ಯುಟಿಸಿಯಲ್ಲಿ ಬಲಾಬಲ

ದೇಶ	ಪಂದ್ಯ	ಜಯ	ಸೋಲು	ಡ್ರಾ	ಪಾಯಿಂಟ್
ಆಸ್ಟ್ರೇಲಿಯಾ	19	11	3	5	152
ಭಾರತ	18	10	5	3	127

ಟೆಸ್ಟ್‌ನಲ್ಲಿ ಬಲಾಬಲ

ಪಂದ್ಯ	106
ಭಾರತ ಜಯ	32
ಆಸ್ಟ್ರೇಲಿಯಾ ಜಯ	44
ಡ್ರಾ	29
ಟೈ	1

ಪ್ರಮುಖ ಅಂಶಗಳು

1 ಇದೇ ಮೊದಲ ಸಲ ಭಾರತ ಹಾಗೂ ಆಸ್ಟ್ರೇಲಿಯಾ ತಂಡಗಳು ತಟಸ್ಥ ತಾಣದಲ್ಲಿ ಆಡಲಿವೆ.

2 ಡಬ್ಲ್ಯುಟಿಸಿಯಲ್ಲಿ ಸತತ ಎರಡನೇ ಬಾರಿ ಫೈನಲ್ ಆಡಲಿರುವ ಭಾರತ ತಂಡ

10 ಭಾರತ ತಂಡವು ಕಳೆದ ಹತ್ತು ವರ್ಷಗಳಿಂದ ಯಾವುದೇ ಐಸಿಸಿ ಟ್ರೋಫಿ ಜಯಿಸಿಲ್ಲ

ಪಂದ್ಯ ಆರಂಭ	ಮಧ್ಯಾಹ್ನ 3ರಿಂದ
ನೇರಪ್ರಸಾರ	ಸ್ಟಾರ್‌ಸ್ಪೋರ್ಟ್ಸ್

ಅಂಕಿ ಸಂಖ್ಯೆ ನೆರವು: ಎಚ್.ಆರ್. ಗೋಪಾಲಕೃಷ್ಣ

ಚಾಂಪಿಯನ್‌ಷಿಪ್ ಗೆಲ್ಲುವುದೇ ಗುರಿ

ಭಾರತ ಕ್ರಿಕೆಟ್ ತಂಡದ ನಾಯಕರಾದವರೆಲ್ಲರಿಗೂ ಚಾಂಪಿಯನ್ ಆಗಬೇಕೆಂಬ ಗುರಿ ಇರುವುದು ಸಹಜ. ನನಗೂ ಇದೆ. ಎಷ್ಟು ಸಾಧ್ಯವೋ ಅಷ್ಟು ಪಂದ್ಯಗಳನ್ನು ಹಾಗೂ ಟ್ರೋಫಿಗಳನ್ನು ಜಯಿಸುವುದೇ ನನ್ನ ಗುರಿ.

ರೋಹಿತ್ ಶರ್ಮಾ, ಭಾರತ ತಂಡದ ನಾಯಕ

ಎರಡು ವರ್ಷದ ಪರಿಶ್ರಮ

ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಎಂದರೆ ಎರಡು ವರ್ಷಗಳ ಪರಿಶ್ರಮಭರಿತ ಕಾರ್ಯವಾಗಿದೆ. ಕಠಿಣ ಸವಾಲುಗಳನ್ನು ಗೆದ್ದ ನಂತರ ಈ ಹಂತಕ್ಕೆ ಬಂದಿರುತ್ತೇವೆ. ಆಸ್ಟ್ರೇಲಿಯಾದಲ್ಲಿ ಸರಣಿ ಗೆಲುವು, ಇಂಗ್ಲೆಂಡ್‌ನಲ್ಲಿ ಡ್ರಾ ಮಾಡಿದ್ದು ಕಡಿಮೆಯೇನಲ್ಲ. ಸದ್ಯದ ತಂಡವು ಕಳೆದ ಐದಾರು ವರ್ಷಗಳಿಂದ ಅಮೋಘವಾದ ಕ್ರಿಕೆಟ್ ಆಡುತ್ತಿದೆ. ತಂಡದ ಸಾಧನೆ ಮತ್ತು ಶ್ರಮವನ್ನು ಒಂದು ಟ್ರೋಫಿ ಗೆಲುವಿಗೆ ಮಾತ್ರ ಸೀಮಿತಗೊಳಿಸಲಾಗದು

ರಾಹುಲ್ ದ್ರಾವಿಡ್, ಮುಖ್ಯ ಕೋಚ್, ಭಾರತ ತಂಡ

ಸ್ಪಿನ್‌ಸ್ನೇಹಿ ಪಿಚ್

ಭಾರತ ತಂಡವು ಓವಲ್‌ನಲ್ಲಿ ಆಡುತ್ತಿರುವುದು ಸಂತಸದ ವಿಷಯ. ಇಲ್ಲಿಯ ಪಿಚ್ ಸ್ಪಿನ್ನರ್‌ಗಳಿಗೂ ನೆರವು ನೀಡುವ ಗುಣ ಹೊಂದಿದೆ. ಇದರ ಲಾಭವನ್ನು ಭಾರತವು ಪಡೆಯಬಹುದು.

ಸಚಿನ್ ತೆಂಡೂಲ್ಕರ್, ಮಾಜಿ ಕ್ರಿಕೆಟಿಗ

100 ಟೆಸ್ಟ್ ಆಡುವ ಆಸೆ

ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಬಹಳಷ್ಟು ದುಡ್ಡು ಸಿಗುತ್ತದೆ. ಆದರೆ ನನ್ನ ದೇಶದ ಪರವಾಗಿ 100 ಟೆಸ್ಟ್ ಪಂದ್ಯಗಳನ್ನು ಆಡುವುದೇ ನನ್ನ ಪರಮ ಗುರಿ. ಆದ್ದರಿಂದಲೇ ಐಪಿಎಲ್ ಆಯ್ಕೆ ಮಾಡಿಕೊಳ್ಳದೇ ಟೆಸ್ಟ್ ತಂಡದಲ್ಲಿದ್ದೇನೆ.

ಮಿಚೆಲ್ ಸ್ಟಾರ್ಕ್, ಆಸ್ಟ್ರೇಲಿಯಾ ಬೌಲರ್ (77 ಟೆಸ್ಟ್ ಆಡಿದ್ದಾರೆ)

ರೋಹಿತ್ ಹೆಬ್ಬೆರಳಿಗೆ ಪೆಟ್ಟು

ಮಂಗಳವಾರ ನೆಟ್ಸ್‌ನಲ್ಲಿ ಅಭ್ಯಾಸ ಮಾಡುವಾಗ ಸಂದರ್ಭದಲ್ಲಿ ಭಾರತ ತಂಡದ ರೋಹಿತ್ ಶರ್ಮಾ ಅವರ ಹೆಬ್ಬೆರಳಿಗೆ ಚೆಂಡು ಬಡಿದು ಪೆಟ್ಟಾಗಿದೆ.

ರೋಹಿತ್, ಕೆ.ಎಸ್. ಭರತ್, ಆರ್ ಅಶ್ವಿನ್ ಹಾಗೂ ಉಮೇಶ್ ಯಾದವ್ ಅವರು ಬೆಳಿಗ್ಗೆ ಅಭ್ಯಾಸ ನಡೆಸಿದರು. ನೆರವು ಸಿಬ್ಬಂದಿ ಹಾಗೂ ನೆಟ್ ಬೌಲರ್‌ಗಳು ಅವರೊಂದಿಗೆ ಇದ್ದರು.

ಥ್ರೋಡೌನ್ ಪರಿಣತ ಎಸೆತಗಳನ್ನು ಎದುರಿಸುವ ಸಂದರ್ಭದಲ್ಲಿ ರೋಹಿತ್ ಎಡಗೈ ಹೆಬ್ಬೆರಳಿಗೆ ಚೆಂಡು ಅಪ್ಪಳಿಸಿತು. ನೋವು ಅನುಭವಿಸಿದ ಅವರು ಸ್ವಲ್ಪ ಹೊತ್ತು ವಿಶ್ರಾಂತಿ ಪಡೆದರು. ನಂತರ ಬ್ಯಾಟಿಂಗ್ ಅಭ್ಯಾಸ ಮಾಡಲಿಲ್ಲ.

'ಗಂಭೀರವಾದ ಸಮಸ್ಯೆ ಆಗಿಲ್ಲ' ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ತಂಡಗಳು

ಭಾರತ: ರೋಹಿತ್ ಶರ್ಮಾ (ನಾಯಕ), ವಿರಾಟ್ ಕೊಹ್ಲಿ, ಶುಭಮನ್ ಗಿಲ್, ಚೇತೇಶ್ವರ್ ಪೂಜಾರ, ಆರ್. ಅಶ್ವಿನ್, ಕೆ.ಎಸ್. ಭರತ್, ರವೀಂದ್ರ ಜಡೇಜ, ಇಶಾನ್ ಕಿಶನ್, ಅಕ್ಷರ್ ಪಟೇಲ್, ಅಜಿಂಕ್ಯ ರಹಾನೆ, ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್, ಶಾರ್ದೂಲ್ ಠಾಕೂರ್, ಜಯದೇವ್ ಉನದ್ಕತ್, ಉಮೇಶ್ ಯಾದವ್.

ಮೀಸಲು ಆಟಗಾರರು: ಯಶಸ್ವಿ ಜೈಸ್ವಾಲ್, ಮುಖೇಶ್ ಕುಮಾರ್, ಸೂರ್ಯಕುಮಾರ್ ಯಾದವ್

ಆಸ್ಟ್ರೇಲಿಯಾ: ಪ್ಯಾಟ್ ಕಮಿನ್ಸ್ (ನಾಯಕ), ಸ್ಕಾಟ್ ಬೊಲಾಂಡ್, ಅಲೆಕ್ಸ್ ಕ್ಯಾರಿ, ಕ್ಯಾಮರಾನ್ ಗ್ರೀನ್, ಮಾರ್ಕಸ್ ಹ್ಯಾರಿಸ್, ಜೋಶ್ ಹ್ಯಾಜಲ್‌ವುಡ್, ಟ್ರಾವಿಸ್ ಹೆಡ್, ಉಸ್ಮಾನ್ ಖ್ವಾಜಾ, ಮಾರ್ನಸ್ ಲಾಬುಷೇನ್, ನೇಥನ್ ಲಯನ್, ಜೋಶ್ ಇಂಗ್ಲಿಸ್, ಟಾಡ್ ಮರ್ಫಿ, ಸ್ಟೀವ್ ಸ್ಮಿತ್, ಮಿಚೆಲ್ ಸ್ಟಾರ್ಕ್, ಡೇವಿಡ್ ವಾರ್ನರ್.

ಮೀಸಲು ಆಟಗಾರರು: ಮಿಚೆಲ್ ಮಾರ್ಷ್, ಮ್ಯಾಟ್ ರೆನ್‌ಷಾ.



ಗೆಲುವಿನ ಸಂಭ್ರಮದಲ್ಲಿ ಕರೋಲಿನಾ ಮುಕೋವಾ –ಎಎಫ್‌ಪಿ ಚಿತ್ರ

ಫ್ರೆಂಚ್ ಓಪನ್: ಸೆಮಿಗೆ ಜೊಕೊವಿಚ್, ಮುಕೋವಾ

ಪ್ಯಾರಿಸ್ (ರಾಯಿಟರ್ಸ್): ಮೊದಲ ಸೆಟ್ ಸೋತರೂ ಭರ್ಜರಿ ಮರುಹೋರಾಟ ನಡೆಸಿದ ಸರ್ಬಿಯದ ನೊವಾಕ್ ಜೊಕೊವಿಚ್ ಅವರು ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದರು.

ಮಂಗಳವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಅವರು 4-6, 7-6, 6-2, 6-4 ರಿಂದ ರಷ್ಯಾದ ಕರೆನ್ ಕಚನೋವ್ ಅವರನ್ನು ಮಣಿಸಿದರು.

ಜೊಕೊವಿಚ್ ಇಲ್ಲಿ 12ನೇ ಬಾರಿ ಹಾಗೂ ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ಒಟ್ಟು 45ನೇ ಬಾರಿ ಸೆಮಿಫೈನಲ್ ಪ್ರವೇಶಿಸಿದ ಸಾಧನೆ ಮಾಡಿದರು. ನಾಲ್ಕರ ಘಟ್ಟದ ಹಣಾಹಣಿಯಲ್ಲಿ ಅವರು ವಿಶ್ವದ ಅಗ್ರಮಾನ್ಯ ಆಟಗಾರ ಸ್ಪೇನ್‌ನ ಕಾರ್ಲೊಸ್ ಅಲ್ಕರಾಜ್ ಅಥವಾ ಗ್ರೀಸ್‌ನ ಸ್ಟೆಫಾನೊಸ್ ಸಿಟ್ಸಿಪಾಸ್ ವಿರುದ್ಧ ಪೈಪೋಟಿ ನಡೆಸುವರು.

ನಾಲ್ಕರಘಟ್ಟ ಪ್ರವೇಶಿಸಿದ ಸಬಲೆಂಕಾ, ಮುಕೋವಾ: ವಿಶ್ವದ ಎರಡನೇ ರ‍್ಯಾಂಕ್‌ನ ಆಟಗಾರ್ತಿ ಬೆಲಾರಸ್‌ನ ಅರಿನಾ ಸಬಲೆಂಕಾ ಮತ್ತು ಜೆಕ್ ರಿಪಬ್ಲಿಕ್‌ನ ಕರೋಲಿನಾ ಮುಕೋವಾ ಅವರು ತಮ್ಮ ಎದುರಾಳಿಗಳನ್ನು ನೇರ ಸೆಟ್‌ಗಳಿಂದ ಮಣಿಸಿ ಮಹಿಳೆಯರ ಸಿಂಗಲ್ಸ್ ವಿಭಾಗದ ಸೆಮಿಫೈನಲ್ ಪ್ರವೇಶಿಸಿದರು.

ಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ ಸಬಲೆಂಕಾ 6–4, 6–4 ರಲ್ಲಿ ಉಕ್ರೇನ್‌ನ ಎಲಿನಾ ಸ್ವಿಟೋಲಿನಾ ಅವರನ್ನು ಮಣಿಸಿದರೆ, ಮುಕೋವಾ 7-5, 6-2 ರಲ್ಲಿ ರಷ್ಯಾದ ಅನಸ್ತೇಸಿಯಾ ಪವ್ಲಿಚೆಂಕೋವಾ ವಿರುದ್ಧ ಗೆದ್ದರು. ಸೆಮಿಫೈನಲ್‌ನಲ್ಲಿ ಸಬಲೆಂಕಾ–ಮುಕೋವಾ ಹಣಾಹಣಿ ನಡೆಸಲಿದ್ದಾರೆ.

ಫ್ರೆಂಚ್ ಓಪನ್ ಗೆದ್ದು ವಿಶ್ವ ರ‍್ಯಾಂಕಿಂಗ್‌ನಲ್ಲಿ ಮತ್ತೆ ಅಗ್ರಸ್ಥಾನಕ್ಕೇರುವ ಗುರಿ ಹೊಂದಿರುವ ಸಬಲೆಂಕಾ 1 ಗಂಟೆ 36 ನಿಮಿಷಗಳ ಹೋರಾಟದಲ್ಲಿ ಎದುರಾಳಿಯನ್ನು ಮಣಿಸಿದರು.

ಹಸ್ತಲಾಘವಕ್ಕೆ ನಕಾರ: ರಷ್ಯಾ–ಉಕ್ರೇನ್ ಸಂಘರ್ಷದ ಕರಿನೆರಳು ಈ ಪಂದ್ಯವನ್ನೂ ಬಾಧಿಸಿತು. ಪಂದ್ಯದ ಬಳಿಕ ಸ್ವಿಟೋಲಿನಾ ಅವರು ಎದುರಾಳಿಯ ಕೈಕುಲುಕಿ ಅಭಿನಂದಿಸಲು ನಿರಾಕರಿಸಿದರು. ಸಬಲೆಂಕಾ ನೆಟ್ ಬಳಿ ಕೆಲಹೊತ್ತು ಕಾದು ನಿಂತರೂ, ಸ್ವಿಟೋಲಿನಾ ಅವರ ಬಳಿ ಹೋಗದೆ, ತಮಗೆ ಮೀಸಲಿದ್ದ ಕುರ್ಚಿಯತ್ತ ತೆರಳಿದರು.

ಪವ್ಲಿಚೆಂಕೋವಾ ಮತ್ತು ಮುಕೋವಾ ನಡುವಣ ಪಂದ್ಯದ ಮೊದಲ ಸೆಟ್ ರೋಚಕತೆಯಿಂದ ಕೂಡಿತ್ತು. ಎರಡನೇ ಸೆಟ್‌ನಲ್ಲಿ ಮುಕೋವಾ ಅವರು ಪೂರ್ಣ ಪಾರಮ್ಯ ಮೆರೆದರು.

ಯುದ್ಧಕ್ಕೆ ಬೆಂಬಲ ಇಲ್ಲ: ಸಬಲೆಂಕಾ

ಪ್ಯಾರಿಸ್ (ಎಎಫ್‌ಪಿ): ಉಕ್ರೇನ್ ವಿರುದ್ಧದ ಯುದ್ಧದಲ್ಲಿ ತಮ್ಮ ದೇಶದ ಪಾತ್ರವನ್ನು ಟೀಕಿಸಿರುವ ಬೆಲಾರೂಸ್‌ನ ಆಟಗಾರ್ತಿ ಅರಿನಾ ಸಬಲೆಂಕಾ ಅವರು 'ನಾನು ಯುದ್ಧವನ್ನು ಬೆಂಬಲಿಸುತ್ತಿಲ್ಲ. ಅಧ್ಯಕ್ಷ ಅಲೆಕ್ಸಾಂಡರ್ ಲುಕಶೆಂಕೊ ಅವರನ್ನೂ ಬೆಂಬಲಿಸುತ್ತಿಲ್ಲ' ಎಂದು ಮಂಗಳವಾರ ಸ್ಪಷ್ಟಪಡಿಸಿದ್ದಾರೆ.

ಬೆಲಾರೂಸ್, ರಷ್ಯಾದ ಮಿತ್ರರಾಷ್ಟ್ರವಾಗಿದೆ. ಬೆಲಾರೂಸ್‌ನ ಅಧ್ಯಕ್ಷ ಲುಕಶೆಂಕೊ ಅವರ ಬೆಂಬಲಿಗಳಾಗಿ ಸಬಲೆಂಕಾ ಗುರುತಿಸಿಕೊಂಡಿದ್ದರು.

ಏಷ್ಯಾ ಕಪ್ ಕ್ರಿಕೆಟ್ ಪಾಕಿಸ್ತಾನ ಹಿಂದೆ ಸರಿಯುವ ಸಾಧ್ಯತೆ

ಕರಾಚಿ (ಪಿಟಿಐ): ತಾನು ಮುಂದಿಟ್ಟ 'ಹೈಬ್ರಿಡ್ ಮಾದರಿ'ಯನ್ನು ಶ್ರೀಲಂಕಾ, ಅಫ್ಗಾನಿಸ್ತಾನ ಮತ್ತು ಬಾಂಗ್ಲಾದೇಶ ಕ್ರಿಕೆಟ್ ಮಂಡಳಿಗಳು ತಿರಸ್ಕರಿಸಿರುವ ಕಾರಣ, ಪಾಕಿಸ್ತಾನವು ಮುಂಬರುವ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯಿಂದ ಹಿಂದೆ ಸರಿಯುವ ಸಾಧ್ಯತೆ ಹೆಚ್ಚಿದೆ.

'ಶ್ರೀಲಂಕಾ, ಬಾಂಗ್ಲಾದೇಶ ಮತ್ತು ಅಫ್ಗಾನಿಸ್ತಾನ ಕ್ರಿಕೆಟ್ ಮಂಡಳಿಗಳು ಹೈಬ್ರಿಡ್ ಮಾದರಿಯನ್ನು ಒಪ್ಪಿಕೊಳ್ಳುವುದಿಲ್ಲ ಎಂಬುದು ಪಾಕಿಸ್ತಾನ ಕ್ರಿಕೆಟ್ ಮಂಡಳಿಗೆ (ಪಿಸಿಬಿ) ಮನವರಿಕೆಯಾಗಿದೆ' ಎಂದು ಏಷ್ಯನ್ ಕ್ರಿಕೆಟ್ ಕೌನ್ಸಿಲ್‌ನ (ಎಸಿಸಿ) ಮೂಲಗಳು ಹೇಳಿವೆ.

'ಪಾಕಿಸ್ತಾನದ ಮುಂದೆ ಈಗ ಎರಡು ಆಯ್ಕೆಗಳು ಮಾತ್ರ ಇವೆ. ಒಂದೋ ಟೂರ್ನಿಯನ್ನು ತಟಸ್ಥ ತಾಣದಲ್ಲಿ ಆಡಬೇಕು ಅಥವಾ ಹಿಂದೆ ಸರಿಯಬೇಕು' ಎಂದು ಮೂಲಗಳು ತಿಳಿಸಿವೆ.

ಏಷ್ಯಾಕಪ್ ಟೂರ್ನಿಗೆ ಭಾರತ ತಂಡವನ್ನು ಪಾಕಿಸ್ತಾನಕ್ಕೆ ಕಳುಹಿಸುವುದಿಲ್ಲ ಎಂದು ಬಿಸಿಸಿಐ ಹೇಳಿತ್ತು. ಅದಕ್ಕೆ ಪಿಸಿಬಿಯು 'ಹೈಬ್ರಿಡ್ ಮಾದರಿ'ಯನ್ನು ಮುಂದಿಟ್ಟಿತ್ತು. ಈ ಮಾದರಿಯಂತೆ ಭಾರತ ತನ್ನ ಪಂದ್ಯಗಳನ್ನು ಯುಎಇಯಲ್ಲಿ ಮತ್ತು ಪಾಕಿಸ್ತಾನ ಸ್ವದೇಶದಲ್ಲಿ ಆಡಬೇಕಿತ್ತು.

ಟೂರ್ನಿಯೇ ರದ್ದು?: 'ಸೆಪ್ಟೆಂಬರ್‌ನಲ್ಲಿ ನಡೆಸಲು ಉದ್ದೇಶಿಸಿರುವ ಏಷ್ಯಾ ಕಪ್ ಟೂರ್ನಿಯನ್ನೇ ರದ್ದು ಮಾಡುವ ಸಾಧ್ಯತೆಯೂ ಇದೆ. ಅದರ ಬದಲು ಭಾರತ, ಶ್ರೀಲಂಕಾ, ಬಾಂಗ್ಲಾದೇಶ ಮತ್ತು ಅಫ್ಗಾನಿಸ್ತಾನ ತಂಡಗಳು ಚತುಷ್ಕೋನ (50 ಓವರ್‌ಗಳ ಮಾದರಿ) ಕ್ರಿಕೆಟ್ ಸರಣಿಯಲ್ಲಿ ಆಡಬಹುದು' ಎಂದು ಮೂಲಗಳು ತಿಳಿಸಿವೆ.

ಸ್ನೂಕರ್: ಚೀನಾದ ಆಟಗಾರರಿಗೆ ಆಜೀವ ನಿಷೇಧ

ಲಂಡನ್ (ಎಎಫ್‌ಪಿ): ಚೀನಾದ ಸ್ನೂಕರ್ ಆಟಗಾರರಾದ ಲಿಯಾಂಗ್ ವೆನ್‌ಬೊ ಮತ್ತು ಲಿ ಹಾಂಗ್ ಅವರ ಮೇಲೆ ವಿಶ್ವ ವೃತ್ತಿಪರ ಬಿಲಿಯರ್ಡ್ಸ್ ಮತ್ತು ಸ್ನೂಕರ್ ಸಂಸ್ಥೆ (ಡಬ್ಲ್ಯುಪಿಬಿಎಸ್‌ಎ) ಆಜೀವ ನಿಷೇಧ ಹೇರಿದೆ. 'ಮ್ಯಾಚ್ ಫಿಕ್ಸಿಂಗ್'ನಲ್ಲಿ ಭಾಗಿಯಾದ ಪ್ರಕರಣದಲ್ಲಿ ಈ ಕ್ರಮ ಕೈಗೊಂಡಿದೆ.

ಮ್ಯಾಚ್ ಫಿಕ್ಸಿಂಗ್‌ನಲ್ಲಿ ಭಾಗಿಯಾದ ಚೀನಾದ ಒಟ್ಟು 10 ಆಟಗಾರರಿಗೆ, ಡಬ್ಲ್ಯುಪಿಬಿಎಸ್‌ಎ ಮಂಗಳವಾರ ವಿವಿಧ ಅವಧಿಯ ನಿಷೇಧ ವಿಧಿಸಿದೆ.

ಲು ನಿಂಗ್, ಜಾವೊ ಕ್ಸಿನ್‌ಟಾಂಗ್, ಯಾನ್ ಬಿಂಗ್‌ತಾವೊ, ಚೆನ್ ಜಿಫಾನ್, ಜಾಂಗ್ ಜಿಯಾನ್‌ಕಾಂಗ್, ಬಾಯ್ ಲಾಂಗ್‌ನಿಂಗ್, ಜಾವೊ ಕಿಯಾನ್‌ಬೊ ಮತ್ತು ಚಾಂಗ್ ಬಿಂಗ್‌ಯು ಅವರು ನಿಷೇಧಕ್ಕೆ ಒಳಗಾದ ಇತರರು.

ಶೂಟಿಂಗ್: ಭಾರತಕ್ಕೆ 2 ಚಿನ್ನ

ಜೂಲ್, ಜರ್ಮನಿ (ಪಿಟಿಐ): ಭಾರತದ ಶೂಟರ್‌ಗಳು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವಕಪ್ ಶೂಟಿಂಗ್‌ನಲ್ಲಿ ಮತ್ತೆರಡು ಚಿನ್ನದ ಪದಕ ಗೆದ್ದುಕೊಂಡರು.

ಪುರುಷರ 25 ಮೀ. ಪಿಸ್ತೂಲ್ ಶೂಟಿಂಗ್‌ನಲ್ಲಿ ಅಮನ್‌ಪ್ರೀತ್ ಸಿಂಗ್ ಅವರು 586 ಪಾಯಿಂಟ್ಸ್‌ಗಳೊಂದಿಗೆ ಅಗ್ರಸ್ಥಾನ ಪಡೆದರೆ, ಮಹಿಳೆಯರ 25 ಮೀ. ತಂಡ ವಿಭಾಗದಲ್ಲಿ ಭಾರತಕ್ಕೆ ಚಿನ್ನ ಲಭಿಸಿತು.

ಮೇಘನಾ ಸದುಲಾ, ಪಾಯಲ್ ಖತ್ರಿ ಮತ್ತು ಸಿಮ್ರನ್‌ಪ್ರೀತ್ ಕೌರ್ ಬ್ರಾರ್ ಅವರನ್ನೊಳಗೊಂಡ ಮಹಿಳಾ ತಂಡ 1,179 ಪಾಯಿಂಟ್ಸ್‌ಗಳನ್ನು ಕಲೆಹಾಕಿ ಮೊದಲ ಸ್ಥಾನ ಗಳಿಸಿತು.

ಭಾರತ ತಂಡವು ಐದು ಚಿನ್ನ, ನಾಲ್ಕು ಬೆಳ್ಳಿ ಮತ್ತು ಎರಡು ಕಂಚಿನ ಪದಕಗಳೊಂದಿಗೆ ಅಗ್ರಸ್ಥಾನದಲ್ಲಿದೆ. ಚಾಂಪಿಯನ್‌ಷಿಪ್‌ನಲ್ಲಿ ಇನ್ನು ಎರಡು ದಿನಗಳ ಸ್ಪರ್ಧೆಗಳು ಬಾಕಿಯಿವೆ.

ಮಹಿಳೆಯರ ವೈಯಕ್ತಿಕ ವಿಭಾಗದಲ್ಲಿ ಮೇಘನಾ, ಪಾಯಲ್ ಮತ್ತು ದಿವ್ಯಾಂಶಿ ಅವರು ಫೈನಲ್ ಸುತ್ತು ತಲುಪಿದರೂ, ಪದಕ ಗೆಲ್ಲಲು ಆಗಲಿಲ್ಲ. 22 ಪಾಯಿಂಟ್ಸ್‌ಗಳೊಂದಿಗೆ ಮೇಘನಾ 4ನೇ ಸ್ಥಾನ ಪಡೆದರು. ಪಾಯಲ್ (18) ಮತ್ತು ದಿವ್ಯಾಂಶಿ (11) ಅವರು ಕ್ರಮವಾಗಿ ಐದು ಹಾಗೂ ಏಳನೇ ಸ್ಥಾನದಲ್ಲಿ ಕಾಣಿಸಿಕೊಂಡರು.

ಪುರುಷರ 50 ಮೀ. ರೈಫಲ್ ತ್ರಿ ಪೊಸಿಷನ್ಸ್‌ನಲ್ಲಿ ಅವಿನಾಶ್ 28ನೇ ಸ್ಥಾನ, ಪರೀಕ್ಷಿತ್ 31 ಮತ್ತು ರಮಣ್ಯ ತೋಮರ್ 40ನೇ ಸ್ಥಾನ ಪಡೆದರು.

ಏಷ್ಯನ್ ಅಥ್ಲೆಟಿಕ್ಸ್: ಸುನಿಲ್‌ಗೆ ಡೆಕಾಥ್ಲಾನ್ ಚಿನ್ನ

ಯೆಚಿಯೊನ್ (ದಕ್ಷಿಣ ಕೊರಿಯಾ), (ಪಿಟಿಐ): ಭಾರತದ ಸುನಿಲ್ ಕುಮಾರ್ ಅವರು ಇಲ್ಲಿ ನಡೆಯುತ್ತಿರುವ ಏಷ್ಯ 20 ವರ್ಷದೊಳಗಿನವರ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ ಡೆಕಾಥ್ಲಾನ್‌ನಲ್ಲಿ ಚಿನ್ನ ಗೆದ್ದುಕೊಂಡರು.

10 ವಿಭಾಗಗಳನ್ನು ಒಳಗೊಂಡ ಸ್ಪರ್ಧೆಯಲ್ಲಿ ಅವರು ಒಟ್ಟು 7,003 ಪಾಯಿಂಟ್ಸ್‌ಗಳೊಂದಿಗೆ ಅಗ್ರಸ್ಥಾನ ಪಡೆದರು. ಡೆಕಾಥ್ಲಾನ್‌ನ ಒಂದು ವಿಭಾಗವಾಗಿರುವ ಪೋಲ್‌ವಾಲ್ಟ್‌ನಲ್ಲಿ ಸುನಿಲ್, ಸಂಘಟಕರು ನೀಡಿದ್ದ ಪೋಲ್ ಬಳಸಿ ಸ್ಪರ್ಧಿಸಿದ್ದರು.

ನವದೆಹಲಿಯಿಂದ ಕೊರಿಯಾಕ್ಕೆ ಪ್ರಯಾಣಿಸುವಾಗ ಅವರ ಪೋಲ್‌ಅನ್ನು ವಿಮಾನದಲ್ಲಿ ಸಾಗಿಸಲು ಅವಕಾಶ ನೀಡಿರಲಿಲ್ಲ. ವಿಮಾನಯಾನ ಸಂಸ್ಥೆಯ ಸಿಬ್ಬಂದಿ 'ತಾಂತ್ರಿಕ ತೊಂದರೆ'ಯ ಕಾರಣ ನೀಡಿದ್ದರು. ಪೋಲ್ ಅಳತೆ ಐದು ಮೀ.ಗಿಂತ ಹೆಚ್ಚು ಇರುವುದರಿಂದ ಸಾಗಿಸಲು ಅವಕಾಶ ನೀಡುವುದಿಲ್ಲ ಎಂದಿದ್ದರು.

ಇದರಿಂದ ಸ್ಪರ್ಧೆಯ ವೇಳೆ ಪೋಲ್ ಒದಗಿಸುವಂತೆ ಭಾರತ ಅಥ್ಲೆಟಿಕ್ ಫೆಡರೇಷನ್, ಸಂಘಟಕರಿಗೆ ಮನವಿ ಮಾಡಿತ್ತು. ಆದರೆ ಈ ತೊಡಕು 18 ವರ್ಷದ ಸುನಿಲ್ ಅವರ ಪ್ರದರ್ಶನಕ್ಕೆ ಅಡ್ಡಿಯಾಗಿ ಪರಿಣಮಿಸಲಿಲ್ಲ. ವೈಯಕ್ತಿಕ ಶ್ರೇಷ್ಠ ಸಾಧನೆಯೊಂದಿಗೆ ಚಿನ್ನ ಜಯಿಸಿದರು.

ಪೂಜಾಗೆ ಬೆಳ್ಳಿ: ಮಹಿಳೆಯರ ಹೈಜಂಪ್‌ನಲ್ಲಿ ಪೂಜಾ 1.82 ಮೀ. ಸಾಧನೆಯೊಂದಿಗೆ ಬೆಳ್ಳಿ ಗೆದ್ದರೆ, ಬುಶ್ರಾ ಖಾನ್ ಮಹಿಳೆಯರ 3,000 ಮೀ. ಓಟದಲ್ಲಿ ಬೆಳ್ಳಿ ತಮ್ಮದಾಗಿಸಿಕೊಂಡರು. ಅವರು 9 ನಿ. 41.47 ಸೆ.ಗಳೊಂದಿಗೆ ಗುರಿ ತಲುಪಿದರು.

ಮಹಿಳೆಯರ 4X100 ಮೀ ರಿಲೇ ತಂಡ 45.36 ಸೆ.ಗಳೊಂದಿಗೆ ಕಂಚು ಜಯಿಸಿತು.



ಸುನಿಲ್ ಕುಮಾರ್
–ಎಸ್‌ಎಐ ಟ್ವಿಟರ್ ಚಿತ್ರ

ಅಂತರ ರಾಜ್ಯ ಅಥ್ಲೆಟಿಕ್ಸ್‌ಗೆ ಪ್ರಮುಖರು ಭಾಗಿ: ಎಎಫ್‌ಐ

ನವದೆಹಲಿ (ಪಿಟಿಐ): ಒಲಿಂಪಿಕ್ ಚಾಂಪಿಯನ್ ನೀರಜ್ ಚೋಪ್ರಾ ಮತ್ತು 3,000 ಮೀ. ಸ್ಟೀಪಲ್‌ಚೇಸ್ ಓಟಗಾರ ಅವಿನಾಶ್ ಸಾಬ್ಳೆ ಅವರನ್ನು ಬಿಟ್ಟು ಉಳಿದ ಪ್ರಮುಖ ಅಥ್ಲೀಟುಗಳೆಲ್ಲರೂ ಭುವನೇಶ್ವರದಲ್ಲಿ ನಡೆಯಲಿರುವ ರಾಷ್ಟ್ರೀಯ ಅಂತರ ರಾಜ್ಯ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಲಿದ್ದಾರೆ.

'ಇವರಿಬ್ಬರನ್ನು ಬಿಟ್ಟು ವಿದೇಶದಲ್ಲಿ ತರಬೇತಿಯಲ್ಲಿರುವ ಅಥ್ಲೀಟುಗಳೂ ಸೇರಿದಂತೆ ಉಳಿದೆಲ್ಲಾ ಅಥ್ಲೀಟುಗಳು ಜೂನ್ 15 ರಿಂದ 19ವರೆಗೆ ನಡೆಯುವ ಈ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳಲೇಬೇಕಿದೆ' ಎಂದು ಭಾರತ ಅಥ್ಲೆಟಿಕ್ ಫೆಡರೇಷನ್ ಅಧ್ಯಕ್ಷ ಆದಿಲ್ ಸುಮರಿವಾಲಾ ತಿಳಿಸಿದರು. ಈ ಕೂಟವು ಏಷ್ಯನ್ ಗೇಮ್ಸ್‌ಗೆ ಆಯ್ಕೆ ಟ್ರಯಲ್ಸ್ ಆಗಿದೆ.

ಚೋಪ್ರಾ ಪ್ರಸ್ತುತ ಟರ್ಕಿಯಲ್ಲಿದ್ದು, ತರಬೇತಿಯ ವೇಳೆ ಆದ ಸ್ನಾಯು ಸೆಳೆತದಿಂದ ಚೇತರಿಸಿಕೊಳ್ಳುತ್ತಿದ್ದಾರೆ.

ಸಾಬ್ಳೆ ಅವರು ಅಮೆರಿಕದ ಕೊಲರಾಡೊ ಸ್ಪ್ರಿಂಗ್ಸ್‌ನಲ್ಲಿ ತರಬೇತಿಯಲ್ಲಿದ್ದಾರೆ. ಮೊರಾಕ್ಕೊದ ರಾಬಾತ್‌ನಲ್ಲಿ ನಡೆದ ಡೈಮಂಡ್ ಲೀಗ್‌ನಲ್ಲಿ ಸ್ಪರ್ಧಿಸಿದ್ದ ಅವರು ಆಗಸ್ಟ್‌ನಲ್ಲಿ ಸ್ವಿಜರ್ಲೆಂಡ್‌ನಲ್ಲಿ ತರಬೇತಿ ಪಡೆಯಲಿದ್ದಾರೆ.